

ವಿಶೇಷ ವರದಿ ಪುಟ 26-47

ಸಂಪುಟ 7, ಸಂಚಿಕೆ 07

ಅಕ್ಟೋಬರ್ 1-15, 2026

ಉಚಿತ ವಿತರಣೆಗಾಗಿ

ನ್ಯೂ ಇಂಡಿಯಾ ಸಮಾಚಾರ

ಭಾರತದ ದೃಷ್ಟಿಕೋನ ಆಗಿದೆ ವಿಶ್ವದ ಧ್ಯೇಯ

'ಮಾನವೀಯತೆಗೆ ಆದ್ಯತೆ ಮತ್ತು ಜನಕೇಂದ್ರಿತ ಅಭಿವೃದ್ಧಿ'ಯ ಸ್ಫೂರ್ತಿಯನ್ನು ಮೈಗೂಡಿಸಿಕೊಂಡು ಹಾಗೂ ಜಾಗತಿಕ ಭ್ರಾತೃತ್ವದ ಹೊಸ ಅಧ್ಯಾಯವೊಂದಕ್ಕೆ ಮುನ್ನುಡಿ ಬರೆಯುತ್ತಾ, 18ನೇ ಬ್ರಿಕ್ಸ್ ಶೃಂಗಸಭೆಯಲ್ಲಿ (2026) ಭಾರತವು ಸ್ಪಷ್ಟ ಸಂದೇಶವೊಂದನ್ನು ರವಾನಿಸಿತು: ಪ್ರತಿಯೊಬ್ಬ ವ್ಯಕ್ತಿಯನ್ನೂ ತಲುಪುವ ಅಭಿವೃದ್ಧಿಯೇ ನಿಜವಾದ ಸಮಗ್ರ ಅಭಿವೃದ್ಧಿ...



Follow Us @NISPIBIndia

ಭಾರತೀಯ ವಾಯುಸೇನೆ ದಿನ 94ನೇ ವಾರ್ಷಿಕೋತ್ಸವ (8 ಅಕ್ಟೋಬರ್ 2026)

'ಶೌರ್ಯ ಮತ್ತು ಪರಾಕ್ರಮದ ಪ್ರತೀಕ' ಭಾರತೀಯ ವಾಯುಸೇನೆ

ಭಾರತೀಯ ವಾಯುಸೇನೆಯು ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆ ತರುವಂತಹದ್ದಾಗಿದೆ. ರಾಷ್ಟ್ರದ ಭದ್ರತೆಯನ್ನು ಖಾತ್ರಿಪಡಿಸುವುದಾಗಲಿ ಅಥವಾ ವಿಪತ್ತುಗಳ ಸಮಯದಲ್ಲಿ ಜೀವಗಳನ್ನು ರಕ್ಷಿಸುವುದಾಗಲಿ - ನಮ್ಮ ಧೀರ ಯೋಧರು ಯಾವಾಗಲೂ ಅಪಾರ ಧೈರ್ಯ ಮತ್ತು ಬದ್ಧತೆಯೊಂದಿಗೆ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಅಷ್ಟೇ ಅಲ್ಲದೆ, ತಮ್ಮ ಸಾಮರ್ಥ್ಯ ಮತ್ತು ಯಾವುದೇ ಸವಾಲನ್ನು ಎದುರಿಸಲು ಸಿದ್ಧವಿರುವ ಮನೋಭಾವದ ಮೂಲಕ ಈ ಪಡೆಯು ದೇಶಕ್ಕೆ ನಿರಂತರವಾಗಿ ಕೀರ್ತಿ ತಂದಿದೆ. ಮಾದರಿಯಾದ ಸೇವೆ ಮತ್ತು ತ್ಯಾಗದ ಮೂಲಕ ನಮ್ಮ ಆಕಾಶದ ಭದ್ರತೆಯನ್ನು ಖಾತ್ರಿಪಡಿಸುವ ಭಾರತೀಯ ವಾಯುಸೇನೆಯ ಶೌರ್ಯ, ಬದ್ಧತೆ ಮತ್ತು ಸಮರ್ಪಣಾ ಭಾವದ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡುತ್ತಾನೆ...





“ಭಾರತೀಯ ವಾಯುಸೇನೆಯು ಶೌರ್ಯ, ಶಿಸ್ತು ಮತ್ತು ನಿಖರತೆಯ ಪ್ರತೀಕವಾಗಿದೆ. ಅತ್ಯಂತ ಸವಾಲಿನ ಸಂದರ್ಭಗಳಲ್ಲೂ ನಮ್ಮ ಆಕಾಶವನ್ನು ರಕ್ಷಿಸುವಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ. ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಅದರ ಕೊಡುಗೆಯೂ ನಿಜಕ್ಕೂ ಶ್ಲಾಘನೀಯವಾಗಿದೆ. ಅದರ ಬದ್ಧತೆ, ವೃತ್ತಿಪರ ಶ್ರೇಷ್ಠತೆ ಮತ್ತು ಅಚಲ ಧೈರ್ಯವು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ತರುತ್ತದೆ. *- ನರೇಂದ್ರ ಮೋದಿ, ಪ್ರಧಾನಮಂತ್ರಿ*



ನ್ಯೂ ಇಂಡಿಯಾ ಸಮಾಚಾರ

ಸಂಪುಟ 7, ಸಂಚಿಕೆ 07 | ಅಕ್ಟೋಬರ್ 1-15, 2026

ಪ್ರಧಾನ ಸಂಪಾದಕರು
ಧೀರೇಂದ್ರ ಓಝಾ
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
ಸಂತೋಷ್ ಕುಮಾರ್

ಹಿರಿಯ ಸಹಾಯಕ ಸಲಹಾ ಸಂಪಾದಕ
ಪವನ್ ಕುಮಾರ್

ಸಹಾಯಕ ಸಲಹಾ ಸಂಪಾದಕ
ಅಖಿಲೇಶ್ ಕುಮಾರ್
ಚಂದನ್ ಕುಮಾರ್ ಚೌಧರಿ

ಭಾಷಾ ಸಂಪಾದಕರು
ಸುಮಿತ್ ಕುಮಾರ್ (ಇಂಗ್ಲಿಷ್)
ರಜನೀಶ್ ಮಿಶ್ರಾ (ಇಂಗ್ಲಿಷ್)
ನದೀಮ್ ಅಹ್ಮದ್ (ಉರ್ದು)

ಹಿರಿಯ ವಿನ್ಯಾಸಕರು
ಫೂಲ್ ಚಂದ್ ತಿವಾರಿ

ವಿನ್ಯಾಸಕರು
ಸತ್ಯಂ ಸಿಂಗ್
ಅನಿಲ್ ಕುಮಾರ್



13 ಭಾಷೆಗಳಲ್ಲಿ ಲಭ್ಯವಿರುವ ನವ ಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx
ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

ಒಳ ಪುಟಗಳಲ್ಲಿ...

ಬ್ರಿಕ್ಸ್ 2026

ಭಾರತದ ನೇತೃತ್ವದಲ್ಲಿ

ಮಾನವೀಯತೆಯ ದಾರಿದೀಪ



ಮುಖಪುಟ ಲೇಖನ

ಭಾರತವು ಆರಂಭದಿಂದಲೂ ಬ್ರಿಕ್ಸ್ ನ ಪಯಣದ ಅವಿಭಾಜ್ಯ ಅಂಗವಾಗಿದೆ; ಇಂದು, ವಿಶ್ವದ ಪ್ರತಿ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬರು ಬ್ರಿಕ್ಸ್ ರಾಷ್ಟ್ರವೊಂದರಲ್ಲಿ ವಾಸಿಸುತ್ತಿದ್ದಾರೆ. ನವದೆಹಲಿಯ 'ಭಾರತ ಮಂಟಪ'ದಲ್ಲಿ ನಡೆದ 18ನೇ ಬ್ರಿಕ್ಸ್ ಶೃಂಗಸಭೆಯು ಈ ಒಕ್ಕೂಟದ ಎರಡು ದಶಕಗಳ ಪಯಣದ ಸಂಭ್ರಮವನ್ನು ಆಚರಿಸಿತು. 'ನವದೆಹಲಿ ಘೋಷಣೆ'ಯ ಮೂಲಕ, ಭಾರತವು ಬ್ರಿಕ್ಸ್ ಅನ್ನು ಹೊಸ, ಹೆಚ್ಚು ಪರಿಣಾಮಕಾರಿ ಮತ್ತು ಮಾನವ ಕೇಂದ್ರಿತ ದಿಕ್ಕಿನತ್ತ ಮುನ್ನಡೆಸಿದೆ... | 6-25



ಮೊದಲು ಗುಜರಾತ್ ನ ಮುಖ್ಯಮಂತ್ರಿಯಾಗಿ ಹಾಗೂ ಪ್ರಸ್ತುತ ಪ್ರಧಾನಮಂತ್ರಿಯಾಗಿ ಕಳೆದ 12 ವರ್ಷಗಳಿಂದ ತಮ್ಮ ಉತ್ತಮ ಆಡಳಿತದ ಮಾದರಿಯ ಮೂಲಕ ದೇಶವನ್ನು ಮುನ್ನಡೆಸುತ್ತಿದ್ದಾರೆ. 7 ಅಕ್ಟೋಬರ್ 2001ರಂದು ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನದಿಂದ ಆರಂಭವಾದ ಅವರ ನಿರಂತರ ಸೇವೆ ಮತ್ತು ಸಮರ್ಪಣೆಯ ಪಯಣಕ್ಕೆ 25 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಅವರ ಈ ಸುದೀರ್ಘ ಸೇವಾ ಪಯಣದ ಕುರಿತ ವಿಶೇಷ ವರದಿ ಇಲ್ಲಿದೆ... | 26-47

ಯುಪಿಐ... ಒಂದು ನಾಗರಿಕತೆಯ ಕತೆ
ಪ್ರಧಾನಿ ಮೋದಿ ಅವರಿಂದ 'ಗ್ಲೋಬಲ್ ಫಿನ್‌ಟೆಕ್ ಫೆಸ್ಟ್ 2026' ಉದ್ಘಾಟನೆ | 48-49

ಸರಕು ಸಾಗಣೆ ಕಾರಿಡಾರ್ ಗಳು: ಪುನರುಜ್ಜೀವನಗೊಳ್ಳುತ್ತಿರುವ ಭಾರತದ ಜೀವನಾಡಿ
ಗುಜರಾತಿಗೆ ₹35,000 ಕೋಟಿ ಮೌಲ್ಯದ ಯೋಜನೆಗಳನ್ನು ನೀಡಿದ ಪ್ರಧಾನಿ ಮೋದಿ | 50-51

ನೈಜ ಶಕ್ತಿ... ಜ್ಞಾನವು ಅರಿವಿನೆಡೆಗೆ ಕೊಂಡೊಯ್ಯುತ್ತದೆ, ಮತ್ತು ಅರಿವು ಬದಲಾವಣೆಯ ಕಡೆಗೆ ಕೊಂಡೊಯ್ಯುತ್ತದೆ
ಶಿಕ್ಷಕರೊಂದಿಗೆ ಸಂದೇಶ ಹಂಚಿಕೊಂಡ ಪ್ರಧಾನಿ ಮೋದಿ | 52-53

ರೈಲು ಸಂಪರ್ಕದ ವಿಸ್ತರಣೆ; ಇಪಿಎಫ್ಒ ವೇತನ ಮಿತಿ ಈಗ ₹25,000
ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಹಲವು ಪ್ರಮುಖ ನಿರ್ಣಯಗಳು | 54-55

ಬಾಹ್ಯಾಕಾಶ ಅನ್ವೇಷಣೆಯ ಮಂತ್ರವೇ ಸಹಕಾರ...
ಅಂತಾರಾಷ್ಟ್ರೀಯ ಬಾಹ್ಯಾಕಾಶ ಶೃಂಗಸಭೆಯನ್ನು ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ | 56

2029ರ ವೇಳೆಗೆ 'ಮಾದಕವಸ್ತು ಮುಕ್ತ ಭಾರತ'ದ ಸಂಕಲ್ಪ ಸಾಕಾರ
2029ರ ವೇಳೆಗೆ ಭಾರತ 'ಮಾದಕವಸ್ತು ಮುಕ್ತ'ವಾಗಲಿದೆ - ಗೃಹ ಸಚಿವರಾದ ಅಮಿತ್ ಶಾ | 57

ಭಾರತದ ಪ್ರಾಚೀನ ಜ್ಞಾನ-ಫ್ರಾನ್ಸ್ ನ ಆಧುನಿಕ ತಂತ್ರಜ್ಞಾನದ ಅಪೂರ್ವ ಸಂಗಮ
ಪ್ಯಾರಿಸ್ ನಲ್ಲಿ ಸ್ವಾಮಿನಾರಾಯಣ ದೇವಸ್ಥಾನ ಉದ್ಘಾಟಿಸಿದ ಪ್ರಧಾನಿ ಮೋದಿ | 58-59

ವ್ಯಕ್ತಿಚಿತ್ರ: ತಿರುಪ್ಪೂರ್ ಕುಮಾರನ್
ರಾಷ್ಟ್ರಧ್ವಜ ಕೆಳಗೆ ಬೀಳದಂತೆ ತಡೆದವರು | 60

ಎಸ್.ಆರ್.ಸಿ.ಸಿ ಶತಮಾನೋತ್ಸವದ ಆಚರಣೆ

140 ಕೋಟಿ ಭಾರತೀಯರು ಒಂದಾಗಿ... ಭಾರತವನ್ನು ಅಭಿವೃದ್ಧಿ ಹೊಂದಿದ ಮತ್ತು ಆತ್ಮನಿರ್ಭರ ರಾಷ್ಟ್ರವನ್ನಾಗಿ ಪರಿವರ್ತಿಸಲಿದ್ದಾರೆ



ದೆಹಲಿ ವಿಶ್ವವಿದ್ಯಾಲಯದ ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್‌ನ 100 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 140 ಕೋಟಿ ದೇಶವಾಸಿಗಳು ಒಗ್ಗೂಡಿ ಭಾರತವನ್ನು ಅಭಿವೃದ್ಧಿ ಹೊಂದಿದ ಹಾಗೂ ಸ್ವಾವಲಂಬಿ ರಾಷ್ಟ್ರವನ್ನಾಗಿ ಪರಿವರ್ತಿಸಲಿದ್ದಾರೆ ಎಂದು ಹೇಳಿದರು... | 4-5

Published: Kanchan Prasad, Director General, on behalf of Central Bureau of Communication
Communication Address : Room No–1077, Soochna Bhawan, CGO Complex, New Delhi -110003.
E-Mail : response-nis@pib.gov.in, RNI No. : DELENG/2020/78811

ಸಂಪಾದಕೀಯ...

ಭಾರತದ ನಾಯಕತ್ವದಲ್ಲಿ ಬ್ರಿಕ್ಸ್‌ನ ಹೊಸ ಅಧ್ಯಾಯ

ನಮಸ್ಕಾರ,

ಭಾರತದ ನಾಲ್ಕನೇ ಬಾರಿಗೆ ಬ್ರಿಕ್ಸ್ ಅಧ್ಯಕ್ಷತೆ ವಹಿಸಿಕೊಂಡ ಸಂದರ್ಭವು, ಬ್ರಿಕ್ಸ್ ನ 20ನೇ ವಾರ್ಷಿಕೋತ್ಸವದೊಂದಿಗೆ ಸಮ್ಮಿಳಿತವಾಗಿದ್ದು, ಅದೊಂದು ಐತಿಹಾಸಿಕ ಸಂದರ್ಭವಾಗಿತ್ತು. ಪ್ರಮುಖ ಉದಯೋನ್ಮುಖ ಆರ್ಥಿಕತೆಗಳ ನಡುವೆ ಆರ್ಥಿಕ ನೀತಿಗಳ ಸಮನ್ವಯಕ್ಕೆ ಬ್ರಿಕ್ಸ್ ಒಂದು ಮಹತ್ವದ ವೇದಿಕೆಯಾಗಿ ಹೊರಹೊಮ್ಮಿದೆ. ಇಲ್ಲಿ, ವಿಶ್ವದ ಹನ್ನೊಂದು ಉದಯೋನ್ಮುಖ ಆರ್ಥಿಕತೆಗಳು ಜಾಗತಿಕ ಆಡಳಿತಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ತಮ್ಮ ಸಾಮೂಹಿಕ ದೃಷ್ಟಿಕೋನಗಳನ್ನು ರೂಪಿಸುತ್ತವೆ. ಇದು 'ಜಾಗತಿಕ ದಕ್ಷಿಣದ' ಹಿತಾಸಕ್ತಿಗಳನ್ನು ಮುಂದುವರಿಸಲು ಪರಿಣಾಮಕಾರಿ ಮಾಧ್ಯಮವಾಗಿಯೂ ಮಾರ್ಪಟ್ಟಿದೆ.

'ಚೇತರಿಸಿಕೊಳ್ಳುವಿಕೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ' ಎಂಬ ವಿಷಯದ ಮೇಲೆ ಕೇಂದ್ರೀಕೃತವಾಗಿದ್ದ ಈ ಶೃಂಗಸಭೆಯಲ್ಲಿ, ಭಾರತವು ಜಾಗತಿಕ ವೇದಿಕೆಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಆದ್ಯತೆಗಳನ್ನು ದಣಿವರಿಯಿಲ್ಲದೆ ಪ್ರತಿಪಾದಿಸಿತು. ಸಂಕೀರ್ಣ ಭೌಗೋಳಿಕ-ರಾಜಕೀಯ ಸನ್ನಿವೇಶಗಳ ಹೊರತಾಗಿಯೂ, ಸಮತೋಲಿತ, ಎಲ್ಲರನ್ನೂ ಒಳಗೊಳ್ಳುವ, ಅಭಿವೃದ್ಧಿ-ಆಧಾರಿತ ಮತ್ತು ಜನ-ಕೇಂದ್ರಿತ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಮುಖ ವಿಷಯಗಳ ಕುರಿತು ಸದಸ್ಯ ರಾಷ್ಟ್ರಗಳ ನಡುವೆ ಒಮ್ಮತವನ್ನು ಮೂಡಿಸುವಲ್ಲಿ ಭಾರತವು ಯಶಸ್ವಿಯಾಯಿತು.

ಭಾರತವು ಈ ವೇದಿಕೆಯ ವ್ಯಾಪ್ತಿಯನ್ನು ಕೇವಲ ಸರ್ಕಾರಿ ವ್ಯವಸ್ಥೆಗೆ ಸೀಮಿತಗೊಳಿಸದೆ, ಸಾಮಾನ್ಯ ನಾಗರಿಕರು, ರೈತರು, ಉದ್ಯಮಿಗಳು, ಮಹಿಳೆಯರು ಮತ್ತು ಯುವಜನರನ್ನೂ ಒಳಗೊಳ್ಳುವಂತೆ ವಿಸ್ತರಿಸಿದೆ. ದೇಶದ 30ಕ್ಕೂ ಹೆಚ್ಚು ನಗರಗಳಲ್ಲಿ ನಡೆದ 400ಕ್ಕೂ ಅಧಿಕ ಸಭೆಗಳು 'ಜನಕೇಂದ್ರಿತ' ಮತ್ತು 'ಮಾನವೀಯತೆಗೆ ಆದ್ಯತೆ' ಎಂಬ ಧೋರಣೆಗಳನ್ನು ಕೇವಲ ಘೋಷಣೆಗಳಾಗಿ ಇರಿಸದೆ, ಕಾರ್ಯರೂಪಕ್ಕೆ ತಂದಿರುವುದಕ್ಕೆ ಸಾಕ್ಷಿಯಾಗಿವೆ.

ಸೆಪ್ಟೆಂಬರ್ 12–13, 2026ರಂದು ನವದೆಹಲಿಯಲ್ಲಿ ನಡೆದ 18ನೇ ಬ್ರಿಕ್ಸ್ ಶೃಂಗಸಭೆಯು ಈ ಪಯಣದ ಉತ್ತುಂಗದ ಘಟ್ಟವಾಗಿ ಪರಿಣಮಿಸಿತು. ಜಾಗತಿಕ ಆಡಳಿತ ವ್ಯವಸ್ಥೆಯ ಸುಧಾರಣೆಯ ಅಗತ್ಯವನ್ನು ಒತ್ತಿಹೇಳಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 'ವಿಶೇಷಾಧಿಕಾರದ ಪಿರಮಿಡ್' ಅನ್ನು 'ಪಾಲುದಾರಿಕೆಯ ವೇದಿಕೆ'ಯಾಗಿ ಪರಿವರ್ತಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಸರ್ವಾನುಮತದಿಂದ ಅಂಗೀಕರಿಸಲಾದ ನವದೆಹಲಿ ಘೋಷಣೆಯು ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (ಯು ಎನ್ ಎಸ್ ಸಿ) ಸುಧಾರಣೆ ಹಾಗೂ ಜಾಗತಿಕ ದಕ್ಷಿಣದ ಧ್ವನಿಯನ್ನು ಬಲಪಡಿಸುವ ಬದ್ಧತೆಯನ್ನು ಪುನರುಚ್ಚರಿಸಿತು. ಭಾರತದ ಅಧ್ಯಕ್ಷತೆ ಕೇವಲ ರಾಜತಾಂತ್ರಿಕ ಜವಾಬ್ದಾರಿಯಲ್ಲ ಬದಲಿಗೆ ಬಹುಧ್ರುವೀಯ ಜಗತ್ತಿನ ಕಡೆಗೆ ಸಾಗುವ ಒಂದು ಸ್ಪಷ್ಟ ಹೆಜ್ಜೆಯಾಗಿದೆ. ಇದೇ ನಮ್ಮ ಈ ಸಂಚಿಕೆಯ ಮುಖಪುಟ ಲೇಖನದ ಪ್ರಮುಖ ವಿಷಯವಾಗಿದೆ.

ಭಾರತದ ಬ್ರಿಕ್ಸ್ ಅಧ್ಯಕ್ಷತೆ—ಇದರ ಮೂಲಕ ಭಾರತವು ಜಗತ್ತಿಗೆ ಮಾನವೀಯತೆಯ ಸಂದೇಶವನ್ನು ಸಾರಿದ ಸಂದರ್ಭದಲ್ಲಿ—ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತ ಮತ್ತು ಸಾರ್ವಜನಿಕ ಸೇವೆಯ ಪಯಣ 25 ವರ್ಷಗಳನ್ನು ಪೂರೈಸಿರುವುದೂ ಗಮನಾರ್ಹವಾದ ಕಾಕತಾಳೀಯವಾಗಿದೆ. ಭಾರತೀಯ ಆಡಳಿತ ಮತ್ತು ಸಾರ್ವಜನಿಕ ಸೇವೆಯ ವಿಕಸನಗೊಳ್ಳುತ್ತಿರುವ ಪರಿಸರದಲ್ಲಿ ಅವರ 25 ವರ್ಷಗಳ ಪಯಣವನ್ನು ಅವಲೋಕಿಸುವ ವಿಶೇಷ ವರದಿಯನ್ನು ಈ ಸಂಚಿಕೆ ಒಳಗೊಂಡಿದ್ದು, ಅವರ ಸಾರ್ವಜನಿಕ ಜೀವನದ ಒಂದು ಮಹತ್ವದ ಅಧ್ಯಾಯವನ್ನು ಪ್ರಸ್ತುತಪಡಿಸುತ್ತದೆ.

'ವ್ಯಕ್ತಿತ್ವ' ವಿಭಾಗವು ತಿರುಪ್ಪೂರ್ ಕುಮಾರನ್ ಅವರನ್ನು ಪರಿಚಯಿಸುತ್ತದೆ – ಇವರು ರಾಷ್ಟ್ರ ಧ್ವಜದ ಗೌರವವನ್ನು ಕಾಪಾಡುತ್ತಾ ಹುತಾತ್ಮರಾದವರು. ಇದರ ಜೊತೆಗೆ ಕೇಂದ್ರ ಸಚಿವ ಸಂಪುಟದ ನಿರ್ಧಾರಗಳು ಮತ್ತು ಕಳೆದ ಹದಿನೈದು ದಿನಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾರ್ವಜನಿಕ ಕಾರ್ಯಕ್ರಮಗಳ ಪ್ರಮುಖ ಅಂಶಗಳನ್ನೂ ಒಳಗೊಂಡಿದೆ.

ಒಳಪುಟದಲ್ಲಿ ವಾಯುಸೇನಾ ದಿನದ (ಅಕ್ಟೋಬರ್ 8ರಂದು ಆಚರಿಸಲಾಗುತ್ತದೆ) ಅಂಗವಾಗಿ ವಿಶೇಷ ಲೇಖನವಿದ್ದು, ಹಿಂಬದಿಯ ಮುಖಪುಟದಲ್ಲಿ ಮಾಜಿ ರಾಷ್ಟ್ರಪತಿ ಹಾಗೂ ಖ್ಯಾತ ವಿಜ್ಞಾನಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಕೃತಜ್ಞವಾಗಿರುವ ರಾಷ್ಟ್ರವು ಅವರಿಗೆ ಸಲ್ಲಿಸುವ ಗೌರವ ನಮನವು ಈ ಸಂಚಿಕೆಯ ಮತ್ತೊಂದು ಪ್ರಮುಖ ಆಕರ್ಷಣೆಯಾಗಿದೆ.

ನಿಮ್ಮ ಸಲಹೆಗಳನ್ನು ನಮಗೆ ನಿರಂತರವಾಗಿ ಕಳುಹಿಸುತ್ತಿರಿ.



(ಧೀರೇಂದ್ರ ಓಝಾ)

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
https://newindiasamachar.pib.gov.in/

ಅಂಚೆ ಪೆಟ್ಟಿಗೆ





ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪತ್ರಿಕೆ

ನಾನು ನ್ಯೂ ಇಂಡಿಯಾ ಸಮಾಚಾರ ಪತ್ರಿಕೆಯನ್ನು ನಿಯಮಿತವಾಗಿ ಇಮೇಲ್ ಮೂಲಕ ಪಡೆಯುತ್ತಿದ್ದೇನೆ. ಸರ್ಕಾರದ ಉಪಕ್ರಮಗಳು, ಯೋಜನೆಗಳು ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತು ಮಾಹಿತಿಯನ್ನು ತಿಳಿಸಲು ಇದು ಒಂದು ಮೌಲ್ಯಯುತವಾದ ಮಾಧ್ಯಮವಾಗಿದೆ. ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಸಾರ್ವಜನಿಕರು ಸೇರಿದಂತೆ ಎಲ್ಲರಿಗೂ ಈ ನಿಯತಕಾಲಿಕೆಯು ಮಹತ್ವದ ಮಾಹಿತಿಯ ಮೂಲವಾಗಿದೆ.

nikhil4249@gmail.com

ಅಭಿವೃದ್ಧಿ ಮತ್ತು ಪರಿವರ್ತನಾತ್ಮಕ ಉಪಕ್ರಮಗಳ ಒಳನೋಟ

ನ್ಯೂ ಇಂಡಿಯಾ ಸಮಾಚಾರದ ಸಂಪೂರ್ಣ ಸಂಪಾದಕೀಯ ತಂಡವನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಇದು ಅತ್ಯಂತ ಮಾಹಿತಿಯುಕ್ತ ಮತ್ತು ಉಪಯುಕ್ತವಾದ ಪ್ರಕಟಣೆಯಾಗಿದೆ. ಒಬ್ಬ ನಿಯಮಿತ ಓದುಗನಾಗಿ, ಭಾರತದಾದ್ಯಂತ ನಡೆಯುತ್ತಿರುವ ಪ್ರಮುಖ ಅಭಿವೃದ್ಧಿ ಮತ್ತು ಪರಿವರ್ತನಾತ್ಮಕ ಕಾರ್ಯಗಳ ಕುರಿತು ಮಾಹಿತಿ ಪಡೆಯಲು ಈ ನಿಯತಕಾಲಿಕೆಯು ನನಗೆ ಅತ್ಯಂತ ಮೌಲ್ಯಯುತವಾದ ಮೂಲವಾಗಿದೆ.

michaelbks@gmail.com

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮತ್ತು ಬರವಣಿಗೆಗೆ ಸಹಕಾರಿ

ನಾನು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ವಿದ್ಯಾರ್ಥಿ ಮತ್ತು ಬರಹಗಾರ. ನನ್ನ ಅಧ್ಯಯನ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಹಾಗೂ ಬರವಣಿಗೆಯ ಚಟುವಟಿಕೆಗಳಿಗೆ ಪೂರಕವಾಗಿ ನಾನು ನಿಯಮಿತವಾಗಿ ನ್ಯೂ ಇಂಡಿಯಾ ಸಮಾಚಾರವನ್ನು ಓದುತ್ತೇನೆ. ಇದು ಅಗಾಧವಾದ ಮಾಹಿತಿಯಿಂದ ಕೂಡಿರುವ ಅತ್ಯುತ್ತಮ ಪತ್ರಿಕೆಯಾಗಿದೆ.

rahimanpoetry@gmail.com

ಮಾಹಿತಿಯ ಅಪಾರ ಭಂಡಾರ

ನ್ಯೂ ಇಂಡಿಯಾ ಸಮಾಚಾರ ಅತ್ಯುತ್ತಮ ನಿಯತಕಾಲಿಕೆಯಾಗಿದೆ. ಇದರ ಪ್ರತಿಯೊಂದು ಸಂಚಿಕೆಯನ್ನೂ ನಾನು ಓದುತ್ತೇನೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿದೇಶ ಪ್ರವಾಸಗಳು ಹಾಗೂ ಭಾರತದ ವಿದೇಶಾಂಗ ನೀತಿಯ ಕುರಿತು ಸದಾ ಮಾಹಿತಿ ಪಡೆಯಲು ನಾನು ಆಸಕ್ತಿ ಹೊಂದಿರುತ್ತೇನೆ. ನಾನು ಈ ನಿಯತಕಾಲಿಕೆಯನ್ನು ಆನ್ ಲೈನ್ ನಲ್ಲಿ ಓದುತ್ತಿದ್ದು, ಇದು ಮಾಹಿತಿಯ ಸಮೃದ್ಧ ಮೂಲವೆಂದು ಭಾವಿಸುತ್ತೇನೆ.

ashishprabhatmishra@gmail.com

ಭಾರತದ ಅಭಿವೃದ್ಧಿ, ಯೋಜನೆಗಳು ಮತ್ತು ಬದಲಾಗುತ್ತಿರುವ ಸ್ವರೂಪದ ಕುರಿತಾದ ಒಂದು ಮಾರ್ಗದರ್ಶಿ

ನಾನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೇನೆ. ಈ ಸಮಯದಲ್ಲಿ, ನಾನು ನ್ಯೂ ಇಂಡಿಯಾ ಸಮಾಚಾರ ಕಂಡುಕೊಂಡೆ. ಇದು ಕೇವಲ ಒಂದು ನಿಯತಕಾಲಿಕವಲ್ಲ, ಬದಲಿಗೆ ಭಾರತದ ಅಭಿವೃದ್ಧಿ, ಸರ್ಕಾರಿ ಯೋಜನೆಗಳು ಮತ್ತು ದೇಶದ ಬದಲಾಗುತ್ತಿರುವ ಸ್ವರೂಪದ ಕುರಿತಾದ ಒಂದು ಮಾರ್ಗದರ್ಶಿ ಎಂದು ನನಗೆ ಅರಿವಾಯಿತು. ಇದು ಓದುಗರಿಗೆ ಜ್ಞಾನದ ಭಂಡಾರವೇ ಆಗಿದೆ.

ಸುನಿಲ್ ಕುಮಾರ್ ಬೋಹ್ರಾ,
bohramadawas@gmail.com

Communication Address : Room No–1077, Soochna Bhawan, CGO Complex, New Delhi -110003

E-Mail: response-nis@pib.gov.in



140 ಕೋಟಿ ಭಾರತೀಯರು ಒಗ್ಗೂಡಿ...

ಭಾರತವನ್ನು ಅಭಿವೃದ್ಧಿ ಹೊಂದಿದ ಹಾಗೂ ಆತ್ಮನಿರ್ಭರ ರಾಷ್ಟ್ರವನ್ನಾಗಿ ಪರಿವರ್ತಿಸಲಿದ್ದಾರೆ

ಭಾರತದ ತ್ವರಿತ ಪ್ರಗತಿ ಮತ್ತು ಸದೃಢ ಆರ್ಥಿಕತೆ ದೇಶದ ಕ್ಷಿಪ್ರ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಜಾಗತಿಕ ಅಸ್ಥಿರತೆಯ ನಡುವೆಯೂ ದೇಶವು ದಾಖಲಿಸಿರುವ 7.8% ಆರ್ಥಿಕ ಬೆಳವಣಿಗೆ ದರವು ಭಾರತದ ಆರ್ಥಿಕ ಸಾಮರ್ಥ್ಯವನ್ನು ಪ್ರಮುಖವಾಗಿ ತಿಳಿಸಿದೆ. ದೆಹಲಿ ವಿಶ್ವವಿದ್ಯಾಲಯದ ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್ (ಎಸ್.ಆರ್.ಸಿ.ಸಿ) ನ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ, ನರೇಂದ್ರ ಮೋದಿಯವರು, 140 ಕೋಟಿ ಭಾರತೀಯರು ಒಗ್ಗೂಡಿ ಭಾರತವನ್ನು ಅಭಿವೃದ್ಧಿ ಹೊಂದಿದ ಮತ್ತು ಆತ್ಮನಿರ್ಭರ ರಾಷ್ಟ್ರವನ್ನಾಗಿ ಪರಿವರ್ತಿಸಲಿದ್ದಾರೆ ಎಂದು ಹೇಳಿದರು.

ಒಂದು ಸಂಸ್ಥೆಯು 100 ವರ್ಷಗಳನ್ನು ಪೂರೈಸಿದಾಗ, ಅದು ಅಸಂಖ್ಯಾತ ಸಾಧನೆಗಳು ಮತ್ತು ಸ್ಫೂರ್ತಿಯ ಮೂಲಗಳ ಬೃಹತ್ ಸಾಗರವಾಗುತ್ತದೆ. ಕಳೆದ ಶತಮಾನದಲ್ಲಿ ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್ (ಎಸ್.ಆರ್.ಸಿ.ಸಿ) ಸಾಧಿಸಿದ ಐತಿಹಾಸಿಕ ಮೈಲಿಗಲ್ಲುಗಳು ದೇಶ ಮತ್ತು ಶೈಕ್ಷಣಿಕ ಜಗತ್ತಿಗೆ ಹೆಮ್ಮೆಯ ವಿಷಯವಾಗಿವೆ. ದರಿಯಾಗಂಜ್ ನ ಒಂದು ಸಣ್ಣ ಕಟ್ಟಡದಲ್ಲಿ ಸಾಧಾರಣವಾಗಿ ಆರಂಭಗೊಂಡು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಬೆಳೆದ ಈ ಕಾಲೇಜಿನ ಪ್ರಯಾಣವನ್ನು ಸ್ಮರಿಸುತ್ತಾ, ಇದು ಅನೇಕ ತಲೆಮಾರುಗಳ ಭವಿಷ್ಯವನ್ನು ರೂಪಿಸಿದೆ ಎಂದು ಪ್ರಧಾನಮಂತ್ರಿ ಮೋದಿ ಬಣ್ಣಿಸಿದರು. ಇಂದು, ಈ ಕಾಲೇಜಿನ ಹೆಸರೇ ಒಂದು ವಿಶಿಷ್ಟವಾದ ಹೆಮ್ಮೆಯ ಭಾವನೆಯನ್ನು ಮೂಡಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು, "ಇಂದಿಗೂ ಕೂಡ, ಡಿ.ಯು.ನಲ್ಲಿ, ತಾವು ಎಸ್.ಆರ್.ಸಿ.ಸಿಯಿಂದ ಬಂದವರು ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ ವಿಷಯವಾಗಿದೆ" ಎಂದು ಹೇಳಿದರು. ಕಾಲೇಜಿನ ಶ್ರೀಮಂತ ಪರಂಪರೆಯನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಇದರ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು. ದಿವಂಗತ ಅರುಣ್ ಜೇಟ್ಲಿ ಮತ್ತು ಸಂಜೀವ್ ಸನ್ಯಾಲ್ ಅವರಂತಹ ಪ್ರಮುಖ ಹಳೆಯ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಿದ ತಮ್ಮ ವೈಯಕ್ತಿಕ ಅನುಭವಗಳನ್ನು ನೆನಪಿಸಿಕೊಂಡ ಅವರು, ಈ ಕಾಲೇಜಿನಲ್ಲಿ ಶಿಕ್ಷಣ ಪಡೆದ ವ್ಯಕ್ತಿಗಳು ಕಲಾವಿದರು, ರಾಜಕಾರಣಿಗಳು ಮತ್ತು ನ್ಯಾಯಾಧೀಶರಾಗಿ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.


ಹಿಂದಿನ ಸವಾಲುಗಳು ಮತ್ತು ಪ್ರಸ್ತುತ ಸಾಧನೆಗಳನ್ನು ಹೋಲಿಸುತ್ತಾ, ಭಯೋತ್ಪಾದನೆಯನ್ನು ಸೋಲಿಸಲಾಗಿದೆ ಮತ್ತು ಸಶಸ್ತ್ರ ಪಡೆಗಳು ಈಗ ಶತ್ರುಗಳ ನೆಲೆಯಲ್ಲೇ ದಾಳಿ ನಡೆಸುವ ಮೂಲಕ ನಿರ್ಣಾಯಕ ಹೊಡೆತ ನೀಡುತ್ತಿವೆ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು. ಜಮ್ಮು ಮತ್ತು ಕಾಶ್ಮೀರದಿಂದ ಹಿಡಿದು ಈಶಾನ್ಯ ಭಾಗದವರೆಗಿನ ಪ್ರದೇಶಗಳಲ್ಲಿ ಶಾಂತಿ ಮರುಸ್ಥಾಪನೆಯಾಗಿದೆ. ಇಂದು, ಭಾರತದ ಕ್ರಿಯಾಶೀಲ ನೀತಿಗಳು ಮತ್ತು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯ ಸ್ಥಾನಮಾನಕ್ಕಾಗಿ ಇಡೀ ಜಗತ್ತೇ ಭಾರತವನ್ನು

ಆಮದುದಾರರಿಂದ ರಫ್ತುದಾರರಾಗುವವರೆಗೆ...

'ಮೇಕ್ ಇನ್ ಇಂಡಿಯಾ' ಉಪಕ್ರಮದ ಸಾಧನೆಗಳು ದೇಶವನ್ನು ಪ್ರಮುಖ ಆಮದುದಾರ ರಾಷ್ಟ್ರದಿಂದ ಪ್ರಮುಖ ಜಾಗತಿಕ ರಫ್ತುದಾರ ರಾಷ್ಟ್ರವನ್ನಾಗಿ ಯಶಸ್ವಿಯಾಗಿ ಪರಿವರ್ತಿಸಿವೆ. ಸ್ಮಾರ್ಟ್ ಫೋನ್ ಗಳ ರಫ್ತು ₹2.5 ಲಕ್ಷ ಕೋಟಿಗಳ ಗಡಿಯನ್ನು ದಾಟಿದ್ದರೆ, ದೇಶದ ರಕ್ಷಣಾ ಉತ್ಪಾದನೆಯು ಸುಮಾರು ₹2 ಲಕ್ಷ ಕೋಟಿಗಳ ದಾಖಲೆಯ ಮಟ್ಟವನ್ನು ತಲುಪಿದೆ. 2013-14ರಲ್ಲಿ ಕೇವಲ ₹600-700 ಕೋಟಿಗಳಷ್ಟಿದ್ದ ರಕ್ಷಣಾ ರಫ್ತು, ಈಗ ₹40,000 ಕೋಟಿಗಳಿಗೆ ಏರಿಕೆಯಾಗಿದೆ.

ದೃಢ ಮತ್ತು ಅಚಲ ಸಂಕಲ್ಪ...

ದೇಶದ ಯುವಜನತೆ ಮತ್ತು 140 ಕೋಟಿ ನಾಗರಿಕರ ಸಾಮರ್ಥ್ಯದ ಮೇಲೆ ಅಚಲವಾದ ನಂಬಿಕೆಯನ್ನು ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಸಮೃದ್ಧ, ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದ ಮಾರ್ಗಸೂಚಿಯನ್ನು ವಿವರಿಸಿದರು. ಭವಿಷ್ಯದ ಮಹತ್ವಾಕಾಂಕ್ಷೆಯ ಗುರಿಗಳ ಬಗ್ಗೆ ಗಮನ ಸೆಳೆದ ಅವರು, ಭಾರತವು ಕೃಷಿ ಉತ್ಪನ್ನಗಳ ರಫ್ತಿನ ಜಾಗತಿಕ ಕೇಂದ್ರವಾಗಲು, ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಸ್ಥಾಪಿಸಲು ಮತ್ತು ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸಲು ಗುರಿ ಹೊಂದಿದೆ ಎಂದು ಹೇಳಿದರು. ಇವು ಕೇವಲ ಮಾತುಗಳಲ್ಲ; ಇವು ನಮ್ಮ ದೃಢ ಮತ್ತು ಅಚಲ ಸಂಕಲ್ಪಗಳು ಎಂದು ಪ್ರಧಾನಿ ಮೋದಿ ಹೇಳಿದರು.



ಮೆಟ್ರೋದಲ್ಲಿ ಪ್ರಯಾಣಿಸುತ್ತಾ ಮಕ್ಕಳೊಂದಿಗೆ ಸಂವಾದ ನಡೆಸಿದ ಬಳಿಕ ಪ್ರಧಾನಮಂತ್ರಿ ಮೋದಿ ಅವರು ಎಸ್.ಆರ್.ಸಿ.ಸಿ ಶತಮಾನೋತ್ಸವ ಸಮಾರಂಭಕ್ಕೆ ಆಗಮಿಸಿದರು.

ಪ್ರಪಂಚವನ್ನು ಮುನ್ನಡೆಸುತ್ತಿರುವ ಭಾರತೀಯರು...

ದೇಶದ ಯುವಜನರು ನವೋದ್ಯಮಗಳು ಮತ್ತು ಯೂನಿಕಾರ್ನ್ ಗಳಂತಹ ಕ್ಷೇತ್ರಗಳಲ್ಲಿ ಜಾಗತಿಕ ನಾಯಕತ್ವದತ್ತ ಸಾಗುತ್ತಿರುವುದು 21ನೇ ಶತಮಾನದ ಯುವಜನತೆಯ ಮಹತ್ವಾಕಾಂಕ್ಷೆಯ ಮನೋಭಾವದ ಫಲವಾಗಿದೆ. ಯುವಕರು ಹಿಂದಿನ ತಲೆಮಾರುಗಳಿಗಿಂತಲೂ ದೊಡ್ಡ ಕನಸುಗಳನ್ನು ಕಾಣಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ಇಂದು ಭಾರತೀಯರು ಜಾಗತಿಕ ಕಾರ್ಪೊರೇಟ್ ದೈತ್ಯ ಸಂಸ್ಥೆಗಳನ್ನು ಮುನ್ನಡೆಸುತ್ತಿರುವಾಗ, ಭಾರತೀಯರು ಸ್ಥಾಪಿಸಿದ ಕಂಪನಿಗಳು ಇಡೀ ಪ್ರಪಂಚವನ್ನೇ ಏಕೆ ಮುನ್ನಡೆಸಬಾರದು?" ಎಂದು ಹೇಳಿದರು.

ನನಗೆ ದೃಢವಿಶ್ವಾಸವಿದೆ, ನಾವು-140 ಕೋಟಿ ಭಾರತೀಯರು-ಒಗ್ಗೂಡಿ ನಮ್ಮ ರಾಷ್ಟ್ರವನ್ನು ಅಭಿವೃದ್ಧಿಶೀಲ ಹಾಗೂ ಆತ್ಮನಿರ್ಭರ ರಾಷ್ಟ್ರವನ್ನಾಗಿ ಮಾಡುತ್ತೇವೆ ಎಂದು. ನಾನು ಸಣ್ಣ ಅಥವಾ ಸುಲಭವಾದ ಗುರಿಗಳಿಗೆ ತೃಪ್ತಿಪಡುವ ವ್ಯಕ್ತಿಯಲ್ಲ; ನಾನು ದೇಶಕ್ಕಾಗಿ ಮಹತ್ವಾಕಾಂಕ್ಷೆಯ ಗುರಿಗಳನ್ನು ನಿಗದಿಪಡಿಸುತ್ತೇನೆ ಮತ್ತು ಅವುಗಳನ್ನು ಸಾಧಿಸಲು ನನ್ನ ಸರ್ವಸ್ವವನ್ನೂ ಅರ್ಪಿಸುತ್ತೇನೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ



ಶ್ಲಾಘಿಸುತ್ತಿದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಗಳು ಮತ್ತು ಜಾಗತಿಕ ವ್ಯಾಪಾರ ಅಡಚಣೆಗಳ ನಡುವೆಯೂ 7.8% ರಷ್ಟು ತ್ರೈಮಾಸಿಕ ಬೆಳವಣಿಗೆಯ ದರವನ್ನು ಸಾಧಿಸಿರುವುದು ಭಾರತದ ಅಂತರ್ಗತ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

ಟೀಕೆ ಮಾಡುವವರಿಗೆ ಸ್ಪಷ್ಟ ಅಂಕಿಅಂಶಗಳೊಂದಿಗೆ

ಉತ್ತರಿಸಿದ ಪ್ರಧಾನಿ ನರೇಂದ್ರ ಮೋದಿ, ಏಪ್ರಿಲ್ ಮತ್ತು ಜೂನ್ ನಡುವೆ ವಿದ್ಯುತ್ ಉತ್ಪಾದನೆಯು 9% ರಷ್ಟು ಹೆಚ್ಚಾಗಿದೆ ಮತ್ತು ವಾಹನಗಳ ಒಟ್ಟು ಮಾರಾಟವು 20% ಕ್ಕಿಂತಲೂ ಹೆಚ್ಚು ಏರಿಕೆಯಾಗಿದೆ - ಇದರಲ್ಲಿ ದ್ವಿಚಕ್ರ ವಾಹನಗಳಲ್ಲಿ ಶೇ. 20 ಮತ್ತು ತ್ರಿಚಕ್ರ ವಾಹನಗಳಲ್ಲಿ ಸುಮಾರು ಶೇ. 30 ರಷ್ಟು ಹೆಚ್ಚಳ ಸೇರಿದೆ ಎಂದು ಹೇಳಿದರು. ಉಕ್ಕು ಮತ್ತು ಸಿಮೆಂಟ್ ಬಳಕೆಯಲ್ಲಿನ 8% ರಷ್ಟು ಬೆಳವಣಿಗೆಯು ನಿರ್ಮಾಣ, ವಸತಿ ಮತ್ತು ವಾಣಿಜ್ಯ ಚಟುವಟಿಕೆಗಳ ತ್ವರಿತ ವಿಸ್ತರಣೆಯನ್ನು ತೋರಿಸುತ್ತದೆ ಎಂದು ಅವರು ಪ್ರತಿಪಾದಿಸಿದರು. ಮಾರ್ಚ್ 2014 ರವರೆಗೆ ದೇಶದ ಅರ್ಧಕ್ಕಿಂತ ಹೆಚ್ಚು ಜನಸಂಖ್ಯೆಯು ಬ್ಯಾಂಕ್ ಖಾತೆಗಳನ್ನು ಹೊಂದಿರಲಿಲ್ಲವಾದರೆ, ಇಂದು 'ಜನ್ ಧನ್ ಯೋಜನೆ'ಯ ಮೂಲಕ ಸುಮಾರು 60 ಕೋಟಿ ನಾಗರಿಕರು ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಸಂಪರ್ಕಗೊಂಡಿದ್ದಾರೆ ಎಂದು ಹೇಳಿದರು. ●

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.


ಬ್ರಿಕ್ಸ್ 2026

ಭಾರತದ ನಾಯಕತ್ವದಲ್ಲಿ ಮಾನವೀಯತೆಯ ದಾರಿದೀಪ



ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಪ್ರಾರಂಭದಿಂದಲೂ ಭಾರತವು ಬ್ರಿಕ್ಸ್ ಗಾಥೆಯ ಅವಿಭಾಜ್ಯ ಅಂಗವಾಗಿದೆ ಮತ್ತು ಇಂದು, ಭೂಮಿಯ ಮೇಲಿನ ಪ್ರತಿ ಇಬ್ಬರಲ್ಲಿ ಒಬ್ಬರು ಬ್ರಿಕ್ಸ್ ರಾಷ್ಟ್ರದಲ್ಲಿ ವಾಸಿಸುತ್ತಿದ್ದಾರೆ. ಈ ಗುಂಪು ಜಾಗತಿಕ ಜನಸಂಖ್ಯೆಯ ಸರಿಸುಮಾರು ಶೇ.50 ರಷ್ಟಿದ್ದರೆ, ಜಾಗತಿಕ ಜಿಡಿಪಿಯ ಪ್ರತಿಶತ 40ರಷ್ಟು ಮತ್ತು ಜಾಗತಿಕ ವ್ಯಾಪಾರದ ಪ್ರತಿಶತ 25ನ್ನು ಪ್ರತಿನಿಧಿಸುತ್ತದೆ. ಕಳೆದ ಎರಡು ದಶಕಗಳಲ್ಲಿ ಜಾಗತಿಕ ಆರ್ಥಿಕತೆಯು ಎರಡೂವರೆ ಪಟ್ಟು ವಿಸ್ತರಿಸಿದ್ದರೆ, ಬ್ರಿಕ್ಸ್ ರಾಷ್ಟ್ರಗಳ ಒಟ್ಟು ಜಿಡಿಪಿ ನಾಲ್ಕೂವರೆ ಪಟ್ಟು ಹೆಚ್ಚಾಗಿದೆ. 12-13 ಸೆಪ್ಟೆಂಬರ್ 2026 ರಂದು ನವದೆಹಲಿಯ ಭಾರತ ಮಂಟಪದಲ್ಲಿ ನಡೆದ 18ನೇ ಬ್ರಿಕ್ಸ್ ಶೃಂಗಸಭೆಯು ಈ ಪಯಣದ ಎರಡು ದಶಕ ಪೂರೈಸಿದ ಸಂಭ್ರಮವನ್ನು ಆಚರಿಸಿತು. 2026ರಲ್ಲಿ ನಾಲ್ಕನೇ ಬಾರಿಗೆ ಅಧ್ಯಕ್ಷತೆಯನ್ನು ವಹಿಸಿಕೊಂಡ ಭಾರತವು ಸಹಕಾರ ಮತ್ತು ಸುಸ್ಥಿರತೆಗಾಗಿ ಸ್ಥಿತಿಸ್ಥಾಪಕತ್ವ ಮತ್ತು ನಾವೀನ್ಯತೆಯನ್ನು ನಿರ್ಮಿಸುವ ವಿಷಯವನ್ನು ಪರಿಚಯಿಸಿತು. ಈ ಮಂತ್ರವು ಕಳೆದ 12 ವರ್ಷಗಳಿಂದ ಭಾರತದ ಆರ್ಥಿಕ ನೀತಿಯ ಅಡಿಪಾಯವಾಗಿ ಕಾರ್ಯನಿರ್ವಹಿಸಿದೆ. ಹೆಚ್ಚುತ್ತಿರುವ ವ್ಯಾಪಾರ ಅಡೆತಡೆಗಳ ನಡುವೆ, ಭಾರತವು ಆರ್ಥಿಕ ಸೇತುವೆಯಾಗಿ ಮತ್ತು ನಂಬಿಕೆಯ ಸಂಕೇತವಾಗಿ ಹೊರಹೊಮ್ಮಿದೆ; ಇದಲ್ಲದೆ, "ನವದೆಹಲಿ ಘೋಷಣೆ" ಮೂಲಕ ಇದು ಬ್ರಿಕ್ಸ್ ಅನ್ನು ಹೊಸ, ಹೆಚ್ಚು ಪರಿಣಾಮಕಾರಿ ಮತ್ತು ಮಾನವ ಕೇಂದ್ರಿತ ದಿಕ್ಕಿನತ್ತ ಮುನ್ನಡೆಸಿದೆ.





ಇಂದು, "ನವ ಭಾರತ" ಜಾಗತಿಕ ಅನಿಶ್ಚಿತತೆಗಳ ನಡುವೆ ಬೆಳವಣಿಗೆ ಮತ್ತು ಸ್ಥಿರತೆಯ ಭರವಸೆಯನ್ನು ನೀಡುತ್ತದೆ. ವಿಶ್ವಾದ್ಯಂತ ವ್ಯಾಪಾರ ಅಡೆತಡೆಗಳು ಸವಾಲಾಗುತ್ತಿರುವ ಸಮಯದಲ್ಲಿ, ಭಾರತವು ಆರ್ಥಿಕ ಸೇತುವೆಗಳನ್ನು ನಿರ್ಮಿಸುತ್ತಿದೆ. ವಿಶ್ವಸಂಸ್ಥೆ, ಜಿ 20 ಅಥವಾ ಇತರ ಪ್ರಭಾವಿ ಗುಂಪುಗಳಲ್ಲಿ, ಭಾರತವು ಜಾಗತಿಕ ಸಂಸ್ಥೆಗಳ ನೇತೃತ್ವ ವಹಿಸುವಾಗ, ಜಗತ್ತನ್ನು ರೂಪಿಸುತ್ತಿದೆ ಮತ್ತು ವಸುಧೈವ ಕುಟುಂಬಕಂ ಸ್ಫೂರ್ತಿಯಿಂದ ಮಾರ್ಗದರ್ಶಿತವಾದ ಹೊಸ ಮಾರ್ಗವನ್ನು ರೂಪಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಬ್ರಿಕ್ಸ್ 2026 ರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವ ಮೂಲಕ, ಭಾರತವು ಜಗತ್ತಿಗೆ ಸ್ಪಷ್ಟ ಸಂದೇಶವನ್ನು ಕಳುಹಿಸಿದೆ: ನಮ್ಮ ಭವಿಷ್ಯವನ್ನು ಹಂಚಿಕೊಳ್ಳುವುದಾದರೆ, ಆ ಭವಿಷ್ಯವನ್ನು ರೂಪಿಸುವ ಹಕ್ಕನ್ನು ಸಹ ಹಂಚಿಕೊಳ್ಳಬೇಕು. ಬ್ರಿಕ್ಸ್ ರಾಷ್ಟ್ರಗಳು ಈಗ ಜಾಗತಿಕ ಆವಿಷ್ಕಾರ ಮತ್ತು ಪರಿಹಾರಗಳ ಪ್ರಮುಖ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ ಎಂಬುದು ಭಾರತದ ದೃಷ್ಟಿಕೋನದ ಫಲಶ್ರುತಿಯಾಗಿದೆ. ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆ 2026 ಜಾಗತಿಕ ಸವಾಲುಗಳನ್ನು ಎದುರಿಸಲು ಜಗತ್ತಿಗೆ ಮಾನವ ಕೇಂದ್ರಿತ ವಿಧಾನವನ್ನು ಒದಗಿಸಿದೆ. ಹವಾಮಾನ ಬಿಕ್ಕಟ್ಟು, ಜಾಗತಿಕ ಪೂರೈಕೆ ಸರಪಳಿಗಳಲ್ಲಿನ ಅಡೆತಡೆಗಳು ಅಥವಾ ಬಹುಪಕ್ಷೀಯ ಸಂಸ್ಥೆಗಳ ನಿಧಾನಗತಿಯ ಕಾರ್ಯನಿರ್ವಹಣೆ ಸೇರಿದಂತೆ ಜಗತ್ತು ಅನೇಕ ರಂಗಗಳಲ್ಲಿ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿ, ಬ್ರಿಕ್ಸ್ ನಂತಹ ವೇದಿಕೆಯ ಪಾತ್ರವು ಇನ್ನಷ್ಟು ಮಹತ್ವದ್ದಾಗಿದೆ. ಜಾಗತಿಕ ಜನಸಂಖ್ಯೆಯ ಸುಮಾರು ಅರ್ಧದಷ್ಟು ಮತ್ತು ಜಾಗತಿಕ ಜಿಡಿಪಿಯ ಶೇಕಡಾ 40 ರಷ್ಟನ್ನು ಪ್ರತಿನಿಧಿಸುವ ಈ ಗುಂಪು ಇನ್ನು ಮುಂದೆ ಕೇವಲ ಆರ್ಥಿಕ ಚರ್ಚೆಗಳಿಗೆ ಸೀಮಿತವಾಗಿಲ್ಲ; ಬದಲಾಗಿ, ಇದು ಜಾಗತಿಕ ಆಡಳಿತ ಸುಧಾರಣೆಯಿಂದ ತಂತ್ರಜ್ಞಾನ, ಆರೋಗ್ಯ, ಶಿಕ್ಷಣ

> **“**
>
> **ಬ್ರಿಕ್ಸ್ ವೇದಿಕೆಯ ಮೂಲಕ ಭಾರತವು ಸ್ನೇಹ, ಪಾಲುದಾರಿಕೆ ಮತ್ತು ಸಹಕಾರವನ್ನು ಬೆಳೆಸಿದೆ. ಬ್ರಿಕ್ಸ್ ಸಹಕಾರವು ಕೇವಲ ಸರ್ಕಾರಗಳಿಗೆ ಮಾತ್ರ ಸೀಮಿತವಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲು ನಾವು ಪ್ರಯತ್ನಿಸಿದ್ದೇವೆ; ನಮ್ಮ ಉದ್ಯಮಿಗಳು, ರೈತರು, ಸಂಶೋಧಕರು, ಮಹಿಳೆಯರು, ಯುವಕರು ಮತ್ತು ಸಾಮಾನ್ಯ ನಾಗರಿಕರು ಸಕ್ರಿಯವಾಗಿ ಭಾಗವಹಿಸಬೇಕೆಂದು ನಾವು ಬಯಸುತ್ತೇವೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಮತ್ತು ಹವಾಮಾನ ಕ್ರಮದವರೆಗೆ ವಿವಿಧ ಕ್ಷೇತ್ರಗಳಲ್ಲಿ ದೃಢವಾದ ಮತ್ತು ನಿರ್ಣಾಯಕ ಉಪಕ್ರಮಗಳನ್ನು ಮುನ್ನಡೆಸುತ್ತಿದೆ. ಭಾರತವು ಬ್ರಿಕ್ಸ್ ನ ಸ್ಥಾಪಕ ಸದಸ್ಯ ರಾಷ್ಟ್ರವಾಗಿದೆ ಮತ್ತು 2012, 2016, 2021 ಮತ್ತು 2026 ರಲ್ಲಿ ನಾಲ್ಕು ಬಾರಿ ತನ್ನ ಅಧ್ಯಕ್ಷತೆಯನ್ನು ಅಲಂಕರಿಸಿದೆ. ತನ್ನ ಪ್ರತಿಯೊಂದು ಅಧ್ಯಕ್ಷತೆಯ ಸಮಯದಲ್ಲಿ, ಭಾರತವು ವೇದಿಕೆಯನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸಿದೆ. 2026 ರ ಅಧ್ಯಕ್ಷತೆಗಾಗಿ, ಭಾರತವು ಈ ನಾಲ್ಕು ಸ್ತಂಭಗಳನ್ನು ಸ್ಥಾಪಿಸಿದೆ: ಚೇತರಿಕೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2025 ರಲ್ಲಿ ಬ್ರೆಜಿಲ್ ನ ರಿಯೊ ಡಿ ಜನೈರೊದಲ್ಲಿ ನಡೆದ 17 ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಈ ದೃಷ್ಟಿಕೋನವನ್ನು ವ್ಯಕ್ತಪಡಿಸಿದರು;

ಬ್ರಿಕ್ಸ್: ಅರ್ಧ ಜಗತ್ತು, ಶೇ. ನಲವತ್ತರಷ್ಟು ಶಕ್ತಿ

ಸದಸ್ಯ ರಾಷ್ಟ್ರಗಳು	11 (ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್)
ಬ್ರಿಕ್ಸ್ ಸದಸ್ಯ ರಾಷ್ಟ್ರಗಳು + ಪಾಲುದಾರ ರಾಷ್ಟ್ರಗಳು (ಒಟ್ಟು ಗುಂಪು)	21 ದೇಶಗಳು
ಜಾಗತಿಕ ಜನಸಂಖ್ಯೆಯ ಪಾಲು	ಸರಿಸುಮಾರು 50%
ಜಾಗತಿಕ ಜಿಡಿಪಿಯ ಪಾಲು	ಸರಿಸುಮಾರು 40%
ಜಾಗತಿಕ ವ್ಯಾಪಾರದ ಪಾಲು	ಸರಿಸುಮಾರು 25%
ಕಳೆದ 20 ವರ್ಷಗಳಲ್ಲಿ ಜಾಗತಿಕ ಜಿಡಿಪಿ ವೃದ್ಧಿ	ಸರಿಸುಮಾರು 2.5 ಪಟ್ಟು
ಇದೇ ಅವಧಿಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ಒಟ್ಟು ಜಿಡಿಪಿ ವೃದ್ಧಿ	ಸುಮಾರು 4.5 ಪಟ್ಟು
ಭಾರತದ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳು / ಕಾರ್ಯಕ್ರಮಗಳು	400 ಕ್ಕೂ ಹೆಚ್ಚು
ಈ ಸಭೆಗಳನ್ನು ಆಯೋಜಿಸುವ ಭಾರತೀಯ ನಗರಗಳು	30 ಕ್ಕಿಂತ ಹೆಚ್ಚು
ಬ್ರಿಕ್ಸ್ ಮಹಿಳಾ ವ್ಯಾಪಾರ ಒಕ್ಕೂಟ ಸಭೆಯಲ್ಲಿ ಭಾಗವಹಿಸುವ ಮಹಿಳಾ ಉದ್ಯಮಿಗಳು (ಭಾರತ, 2026)	ಸುಮಾರು 200

ಈ ದೃಷ್ಟಿಕೋನವು ಜನ-ಕೇಂದ್ರಿತ ಮತ್ತು ಮಾನವೀಯತೆ ಮೊದಲು ವಿಧಾನದಲ್ಲಿ ಬೇರೂರಿದೆ. ಭಾರತವು ತನ್ನ ಅಧ್ಯಕ್ಷತೆಯ ಅವಧಿಯಲ್ಲಿ ಈ ದೃಷ್ಟಿಕೋನವನ್ನು ಪ್ರಾಯೋಗಿಕ ಕಾರ್ಯಕ್ರಮಗಳಾಗಿ ಪರಿವರ್ತಿಸಿತು, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದರಿಂದ ಹಿಡಿದು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು ಕೃತಕ ಬುದ್ಧಿಮತ್ತೆಯಂತಹ ಹೊಸ ತಂತ್ರಜ್ಞಾನಗಳನ್ನು ಹಂಚಿಕೊಳ್ಳುವವರೆಗೆ ಎಲ್ಲವನ್ನೂ ಒತ್ತಿಹೇಳಿತು.

ಭಾರತದ ಅಧ್ಯಕ್ಷತೆಗಾಗಿ ವಿನ್ಯಾಸಗೊಳಿಸಲಾದ 'ಬ್ರಿಕ್ಸ್ ಇಂಡಿಯಾ 2026' ಲಾಂಛನವು ಈ ಮನೋಭಾವವನ್ನು ಸಾಕಾರಗೊಳಿಸುತ್ತದೆ. ಇದರಲ್ಲಿನ ಹೂದಳಗಳು ಎಲ್ಲಾ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ರೋಮಾಂಚಕ ಬಣ್ಣಗಳನ್ನು ಪ್ರತಿಬಿಂಬಿಸುತ್ತವೆ, ಅವುಗಳ ಸಾಮೂಹಿಕ ಶಕ್ತಿ ಮತ್ತು ಏಕತೆಯನ್ನು ಎತ್ತಿ ತೋರಿಸುತ್ತವೆ. ಕೇಂದ್ರದಲ್ಲಿ, ಆಕರ್ಷಕ "ನಮಸ್ತೆ" ಚಿನ್ಹೆಯು ಭಾರತದ ಕಾಲಾತೀತ ಆತ್ಮೀಯತೆ, ಗೌರವ ಮತ್ತು ಸಾಮರಸ್ಯದ ಸಹಯೋಗವನ್ನು ಸೆರೆಹಿಡಿಯುತ್ತದೆ. ಈ ದೃಶ್ಯ ಸಂಕೇತಕ್ಕೆ ಪೂರಕವಾಗಿ - ರಾಜಕೀಯ ಮತ್ತು ಭದ್ರತಾ ಸಹಕಾರ, ಹಣಕಾಸು ಮತ್ತು ಆರ್ಥಿಕ ಸಹಭಾಗಿತ್ವ ಮತ್ತು ಜನರ ನಡುವಿನ ವಿನಿಮಯ ಬ್ರಿಕ್ಸ್ ನ ಮೂರು ಪ್ರಮುಖ ಆಧಾರಸ್ತಂಭಗಳಾಗಿವೆ.



ಹನ್ನೊಂದು ರಾಷ್ಟ್ರಗಳು, ಒಂದು ವೇದಿಕೆ... ಬ್ರಿಕ್ಸ್ ರೂಪುಗೊಂಡಿದ್ದು ಹೇಗೆ

ಬ್ರಿಕ್ಸ್ ವಿಶ್ವದ 11 ಪ್ರಮುಖ ಉದಯೋನ್ಮುಖ ಮಾರುಕಟ್ಟೆಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಒಳಗೊಂಡಿರುವ ಒಂದು ಗುಂಪಾಗಿದೆ. ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್,



ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಇದರ ಸದಸ್ಯ ರಾಷ್ಟ್ರಗಳಲ್ಲಿ ಸೇರಿವೆ. ಜಾಗತಿಕ ಮತ್ತು ಪ್ರಾದೇಶಿಕ ಪ್ರಾಮುಖ್ಯತೆಯ ಸಮಕಾಲೀನ ವಿಷಯಗಳ ಬಗ್ಗೆ ಸಮಾಲೋಚನೆ ಮತ್ತು ಸಹಕಾರಕ್ಕಾಗಿ ಈ ಗುಂಪು ದೃಢವಾದ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

2006ರಲ್ಲಿ ನ್ಯೂಯಾರ್ಕ್ ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವೇಳೆ ನಡೆದ ಮೊದಲ ಬ್ರಿಕ್ ವಿದೇಶಾಂಗ ಸಚಿವರ ಸಭೆಯಲ್ಲಿ ಈ ವೇದಿಕೆಗೆ ಅಡಿಪಾಯ ಹಾಕಲಾಯಿತು. ಆದಾಗ್ಯೂ, 'ಬ್ರಿಕ್' ಎಂಬ ಸಂಕ್ಷಿಪ್ತ ರೂಪವನ್ನು 2001 ರಲ್ಲಿ ಗೋಲ್ಡ್‌ಮನ್ ಸ್ಯಾಚ್ಸ್ ತಮ್ಮ ಜಾಗತಿಕ ಅರ್ಥಶಾಸ್ತ್ರ ಪ್ರಬಂಧದಲ್ಲಿ 'ದಿ ವರ್ಲ್ಡ್ ನೀಡ್ಸ್ ಬೆಟರ್ ಎಕನಾಮಿಕ್ ಬ್ರಿಕ್ಸ್' ಎಂಬ ಶೀರ್ಷಿಕೆಯಲ್ಲಿ ನಿರೂಪಿಸಿದ್ದರು. ಎಕೋನೊಮೆಟ್ರಿಕ್ ವಿಶ್ಲೇಷಣೆಯ ಆಧಾರದ ಮೇಲೆ, ಈ ಸಂಶೋಧನಾ ಪ್ರಬಂಧವು ಮುಂದಿನ ಐದು ದಶಕಗಳಲ್ಲಿ ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ ವಿಶ್ವದ ಅತಿದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಲಿದೆ ಎಂದು ಅಂದಾಜಿಸಿತ್ತು. ಈ ರಾಷ್ಟ್ರಗಳ ಬೆಳೆಯುತ್ತಿರುವ ಆರ್ಥಿಕ ಶಕ್ತಿ ಮತ್ತು ಮೂರು ಖಂಡಗಳನ್ನು ವ್ಯಾಪಿಸಿರುವ ಅವುಗಳ ವಿಶಾಲ ಭೌಗೋಳಿಕ ವ್ಯಾಪ್ತಿಯು ಅವುಗಳ ಉದಯೋನ್ಮುಖ ಜಾಗತಿಕ ಮಹತ್ವವನ್ನು ಒತ್ತಿಹೇಳಿತು. ತರುವಾಯ, ಬ್ರಿಕ್ ಪರಿಕಲ್ಪನೆಯು ಔಪಚಾರಿಕ ಗುಂಪಾಗಿ ವಿಕಸನಗೊಂಡಿತು. 2006 ರಲ್ಲಿ ಅದರ ಆರಂಭಿಕ ರಚನೆಯ ಮೂರು ವರ್ಷಗಳ

> **ಜಾಗತಿಕವಾಗಿ ವ್ಯಾಪಾರ ಅಡೆತಡೆಗಳು ಹೆಚ್ಚುತ್ತಿರುವ ಸಮಯದಲ್ಲಿ, ಭಾರತವು ಆರ್ಥಿಕ ಸೇತುವೆಗಳನ್ನು ನಿರ್ಮಿಸುತ್ತಿದೆ. 2014 ರಿಂದ, ನಾವು ಸುಮಾರು 40 ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದ್ದೇವೆ. ಬ್ರಿಕ್ಸ್ ನೊಳಗೆ ನಮ್ಮ ವಿಧಾನವು ಒಂದೇ ಆಗಿದೆ: ಅಡೆತಡೆಗಳನ್ನು ತಗ್ಗಿಸುವುದು ಮತ್ತು ವ್ಯಾಪಾರ ಅವಕಾಶಗಳನ್ನು ವಿಸ್ತರಿಸುವುದು.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ನಂತರ, ಮೊದಲ ಶೃಂಗಸಭೆಯನ್ನು 2009 ರಲ್ಲಿ ರಷ್ಯಾದ ಯೆಕಟೆರಿನ್ ಬರ್ಗ್ ನಲ್ಲಿ ನಡೆಸಲಾಯಿತು. 2010 ರಲ್ಲಿ ದಕ್ಷಿಣ ಆಫ್ರಿಕಾವನ್ನು ಸೇರಿಸಲು ಒಪ್ಪಂದ ಮಾಡಿಕೊಳ್ಳಲಾಯಿತು ಮತ್ತು ದಕ್ಷಿಣ ಆಫ್ರಿಕಾದ ಪ್ರವೇಶದ ನಂತರ, 2011 ರ ಸಾನ್ಯಾ ಶೃಂಗಸಭೆಯಲ್ಲಿ ಗುಂಪು ಔಪಚಾರಿಕವಾಗಿ 'ಬ್ರಿಕ್ಸ್' ಆಯಿತು. ಕಳೆದ ಮೂರು ವರ್ಷಗಳಲ್ಲಿ, ಈ ಕುಟುಂಬವು ವೇಗವಾಗಿ ವಿಸ್ತರಿಸಿದೆ. ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ

ಕಾಲಾನುಕ್ರಮಣಿಕೆ: 20 ವರ್ಷಗಳ ಪಯಣ ಭಾರತದ ನಾಲ್ಕು ಬಾರಿಯ ಅಧ್ಯಕ್ಷತೆ (2006-2026)

2006	ಬ್ರಿಕ್ ಸ್ಥಾಪನೆ	ನ್ಯೂಯಾರ್ಕ್ ನಲ್ಲಿ ವಿಶ್ವಸಂಸ್ಥೆಯ ಮಹಾಧಿವೇಶನದ ವೇಳೆ ನಡೆದ ಮೊದಲ ಬ್ರಿಕ್ ವಿದೇಶಾಂಗ ಸಚಿವರ ಸಭೆ
2009	ಮೊದಲ ಶೃಂಗಸಭೆ	ರಷ್ಯಾದ ಯೆಕಟೆರಿನ್ ಬರ್ಗ್ ನಲ್ಲಿ ನಡೆಯಿತು
2011	ಬ್ರಿಕ್ಸ್ ಹುಟ್ಟು	ದಕ್ಷಿಣ ಆಫ್ರಿಕಾದ ಸೇರ್ಪಡೆಯೊಂದಿಗೆ 'ಬ್ರಿಕ್ಸ್' ಆಯಿತು (ಸಾನ್ಯಾ ಶೃಂಗಸಭೆ)
2012	ಭಾರತದ ಮೊದಲ ಅಧ್ಯಕ್ಷತೆ	4ನೇ ಶೃಂಗ, ನವದೆಹಲಿ - ಧ್ಯೇಯವಾಕ್ಯ 'ಜಾಗತಿಕ ಸ್ಥಿರತೆ, ಭದ್ರತೆ ಮತ್ತು ಸಮೃದ್ಧಿಗಾಗಿ ಬ್ರಿಕ್ಸ್ ಪಾಲುದಾರಿಕೆ'; ದೆಹಲಿ ಘೋಷಣೆ ಅಂಗೀಕಾರ
2016	ಭಾರತದ ಎರಡನೇ ಅಧ್ಯಕ್ಷತೆ	8ನೇ ಶೃಂಗಸಭೆ, ಗೋವಾ - ವಿಷಯ: 'ಸ್ಪಂದನಶೀಲ, ಅಂತರ್ಗತ ಮತ್ತು ಸಾಮೂಹಿಕ ಪರಿಹಾರಗಳ ನಿರ್ಮಾಣ'; ಗೋವಾ ಘೋಷಣೆ ಮತ್ತು ಬಿಮ್ಸ್ ಟೆಕ್ ಜನಸಂಪರ್ಕ
2021	ಭಾರತದ ಮೂರನೇ ಅಧ್ಯಕ್ಷತೆ	13ನೇ ಶೃಂಗ, ನವದೆಹಲಿ – ವಿಷಯ: 'BRICS@15: ನಿರಂತರತೆ, ಬಲವರ್ಧನೆ ಮತ್ತು ಒಮ್ಮತಕ್ಕಾಗಿ ಬ್ರಿಕ್ಸ್ ನೊಳಗಿನ ಸಹಕಾರ'; ನವದೆಹಲಿ ಘೋಷಣೆ
2024	ಮೊದಲ ಹಂತದ ವಿಸ್ತರಣೆ	ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಪೂರ್ಣ ಸದಸ್ಯರಾದವು
2025	ಎರಡನೇ ಹಂತದ ವಿಸ್ತರಣೆ	ಇಂಡೋನೇಷ್ಯಾ ಪೂರ್ಣ ಸದಸ್ಯ ರಾಷ್ಟ್ರವಾಯಿತು; 10 ರಾಷ್ಟ್ರಗಳು ಪಾಲುದಾರ ರಾಷ್ಟ್ರಗಳಾದವು; ರಿಯೊ ಡಿ ಜನೈರೊದಲ್ಲಿ 17 ನೇ ಶೃಂಗಸಭೆ ನಡೆಯಿತು
2026	ಭಾರತದ ನಾಲ್ಕನೇ ಅಧ್ಯಕ್ಷತೆ (ಬ್ರಿಕ್ಸ್ 20 ನೇ ವಾರ್ಷಿಕೋತ್ಸವ)	18 ನೇ ಶೃಂಗಸಭೆ, ನವದೆಹಲಿ - ವಿಷಯ: 'ಚೇತರಿಕೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ನಿರ್ಮಾಣ'; ನವದೆಹಲಿ ಘೋಷಣೆ (140 ಪ್ಯಾರಾಗಳು) ಅಂಗೀಕರಿಸಲಾಗಿದೆ
2027	ಮುಂಬರುವ ಅಧ್ಯಕ್ಷತೆ	ಚೀನಾಕ್ಕೆ ಅಧ್ಯಕ್ಷ ಸ್ಥಾನವನ್ನು ವಹಿಸಲಾಗಿದೆ ಮತ್ತು 19 ನೇ ಶೃಂಗಸಭೆಯ ಆತಿಥ್ಯ ವಹಿಸಲಿದೆ.

ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಜನವರಿ 2024 ರಲ್ಲಿ ಪೂರ್ಣ ಸದಸ್ಯರಾದವು, ಇಂಡೋನೇಷ್ಯಾ ಜನವರಿ 2025 ರಲ್ಲಿ ಪಟ್ಟಿಗೆ ಸೇರಿತು. ಅದೇ ವರ್ಷ, ಬೆಲಾರಸ್, ಬೊಲಿವಿಯಾ, ಕಝಾಕಿಸ್ತಾನ್, ಕ್ಯೂಬಾ, ಮಲೇಷ್ಯಾ, ನೈಜೀರಿಯಾ, ಥೈಲ್ಯಾಂಡ್, ಉಗಾಂಡಾ, ಉಜ್ಬೇಕಿಸ್ತಾನ್ ಮತ್ತು ವಿಯೆಟ್ನಾಂ ಬ್ರಿಕ್ಸ್ ಕುಟುಂಬಕ್ಕೆ ಪಾಲುದಾರ ರಾಷ್ಟ್ರಗಳಾಗಿ ಸೇರಿಕೊಂಡವು. ಮೂಲಭೂತವಾಗಿ, ಎರಡು ದಶಕಗಳ ಹಿಂದೆ ಕೇವಲ ನಾಲ್ಕು ರಾಷ್ಟ್ರಗಳೊಂದಿಗೆ ಪ್ರಾರಂಭವಾದ ಗುಂಪು ಇಂದು 21 ದೇಶಗಳ ವಿಶಾಲ ಕುಟುಂಬವಾಗಿ ರೂಪಾಂತರಗೊಂಡಿದೆ. ಈ ವಿಸ್ತರಣೆಯು ವೇದಿಕೆಯ ವಿಶ್ವಾಸಾರ್ಹತೆ, ಮಹತ್ವ ಮತ್ತು ಆಕರ್ಷಣೆಯನ್ನು ಪ್ರತಿಬಿಂಬಿಸುತ್ತದೆ.



ಭಾರತ: ಸಂಘರ್ಷಗಳ ನಡುವೆ ಸೇತುವೆ

2026ರ ಆರಂಭವು ಜಗತ್ತು ಅನೇಕ ರಂಗಗಳಲ್ಲಿ ಉದ್ವಿಗ್ನತೆ ಎದುರಿಸುತ್ತಿರುವುದಕ್ಕೆ ಸಾಕ್ಷಿಯಾಯಿತು. ಒಂದೆಡೆ, ಪಶ್ಚಿಮ ಏಷ್ಯಾ ಮತ್ತು ಉಕ್ರೇನ್- ರಷ್ಯಾದಲ್ಲಿ ಸಂಘರ್ಷಗಳು ಇದ್ದವು; ಮತ್ತೊಂದೆಡೆ, ಹೆಚ್ಚುತ್ತಿರುವ ವ್ಯಾಪಾರ ಅಡೆತಡೆಗಳು ಮತ್ತು ಬಹುಪಕ್ಷೀಯ ಸಂಸ್ಥೆಗಳಲ್ಲಿ ವಿಶ್ವಾಸ ಕ್ಷೀಣಿಸುತ್ತಿದೆ. ಅವರ ಹಿನ್ನೆಲೆಯಲ್ಲಿ, ವೈವಿಧ್ಯಮಯ ನಾಗರಿಕತೆಗಳು, ರಾಜಕೀಯ ವ್ಯವಸ್ಥೆಗಳು ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಹೊಂದಿರುವ



ದೇಶಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿ ಒಮ್ಮತಕ್ಕೆ ಬರುವುದು ಸುಲಭದ ಕೆಲಸವಾಗಿರಲಿಲ್ಲ. ಈ ಜವಾಬ್ದಾರಿಯನ್ನು ಪ್ರಶಂಸನೀಯವಾಗಿ ಭಾರತ ಸಾಧಿಸಿದೆ. 18ನೇ ಶೃಂಗಸಭೆಯ ಉದ್ಘಾಟನಾ ಅಧಿವೇಶನದಲ್ಲಿ ಮಾತನಾಡಿದ ಪ್ರಧಾನಮಂತ್ರಿ ಮೋದಿ, ಬ್ರಿಕ್ಸ್ "ಮುಂಬರುವ ಅವಧಿಯ" ಕ್ಷಣವನ್ನು ತಲುಪಿದೆ ಎಂದು ಹೇಳಿದರು; ಇಪ್ಪತ್ತನೇ ವರ್ಷವು ಮಾನವ ಜೀವನದಲ್ಲಿ ಪ್ರಬುದ್ಧತೆ ಮತ್ತು ಜವಾಬ್ದಾರಿಯ ಹೊಸ ಅಧ್ಯಾಯದ ಆರಂಭವನ್ನು ಸೂಚಿಸುವಂತೆಯೇ, ಬ್ರಿಕ್ಸ್ ಈಗ ಜವಾಬ್ದಾರಿಗಳನ್ನು ಆಕಾಂಕ್ಷೆಗಳೊಂದಿಗೆ ಸಂಯೋಜಿಸುವ ಹಂತವನ್ನು ಪ್ರವೇಶಿಸಿದೆ. ಬ್ರಿಕ್ಸ್ ನ ಶಕ್ತಿಯು ಯಾರ ವಿರುದ್ಧವೂ ವರ್ತಿಸುವ ಬದಲು ಒಟ್ಟಾಗಿ ಮುಂದುವರಿಯುವ ಅದರ ಒಳಗೊಳ್ಳುವಿಕೆಯ ತತ್ವದಲ್ಲಿ ಅಡಗಿದೆ ಎಂದು ಅವರು ವಿಶೇಷವಾಗಿ ಒತ್ತಿ ಹೇಳಿದರು. ಸದಸ್ಯ ರಾಷ್ಟ್ರಗಳು ಒಮ್ಮತ ಮತ್ತು ಪರಸ್ಪರ ಗೌರವದ ಮೂಲಕ ಪ್ರಗತಿ ಹೊಂದುತ್ತವೆ. ಪ್ರಧಾನಮಂತ್ರಿ ಮೋದಿಯವರ ಈ ದೃಷ್ಟಿಕೋನವು ನವದೆಹಲಿ ಘೋಷಣೆಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತದೆ. ಘೋಷಣೆಯು ಭಯೋತ್ಪಾದನೆಯ ವಿರುದ್ಧ ನಿಸ್ಸಂದಿಗ್ಧ ಮತ್ತು ಕಠಿಣ ಭಾಷೆಯನ್ನು ಬಳಸಿದೆ - ಏಪ್ರಿಲ್ 2025 ರಲ್ಲಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕ

> **“ನಾವು ಸಾಮಾನ್ಯ ಭವಿಷ್ಯವನ್ನು ಹಂಚಿಕೊಳ್ಳುತ್ತಿದ್ದೇವೆ; ಆದ್ದರಿಂದ, - ಧ್ವನಿ ಎತ್ತುವುದರಿಂದ ಹಿಡಿದು ಪ್ರಭಾವ ಬೀರುವವರೆಗೆ ಮತ್ತು ಸವಲತ್ತುಗಳಿಂದ ಪಾಲುದಾರಿಕೆಯವರೆಗೆ ಆ ಭವಿಷ್ಯವನ್ನು ರೂಪಿಸುವ ಹಕ್ಕನ್ನು ಸಹ ಹಂಚಿಕೊಳ್ಳಬೇಕು.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ದಾಳಿಯನ್ನು ಬಲವಾಗಿ ಖಂಡಿಸುತ್ತದೆ ಮತ್ತು "ಶೂನ್ಯ ಸಹಿಷ್ಣುತೆ" ಮತ್ತು ದ್ವಿಮುಖ ಮಾನದಂಡಗಳಿಗೆ ಅಂತ್ಯ ಹಾಡಲು ಕರೆ ನೀಡಿದೆ. ಎಲ್ಲಾ ಸದಸ್ಯ ರಾಷ್ಟ್ರಗಳ ವೈವಿಧ್ಯಮಯ ರಾಷ್ಟ್ರೀಯ ದೃಷ್ಟಿಕೋನಗಳನ್ನು ಗೌರವಿಸಿ ಗಾಜಾ, ಲೆಬನಾನ್, ಸಿರಿಯಾ ಮತ್ತು ಸುಡಾನ್ ನಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಸಮತೋಲಿತ ಭಾಷೆಯನ್ನು ಬಳಸಿದೆ. ಅಂಥ ವೈವಿಧ್ಯಮಯ ಹಿತಾಸಕ್ತಿಗಳನ್ನು ಹೊಂದಿರುವ ರಾಷ್ಟ್ರಗಳು ಜಂಟಿ ಘೋಷಣೆಯನ್ನು ಒಪ್ಪಿಕೊಳ್ಳಬಹುದು ಎಂಬುದು ಭಾರತದ ರಾಜತಾಂತ್ರಿಕ ಪ್ರಬುದ್ಧತೆಗೆ ಸಾಕ್ಷಿಯಾಗಿದೆ.



ಭಾರತದ ಅಧ್ಯಕ್ಷತೆಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆ

- 2026: ಭಾರತವು 18 ನೇ ಬ್ರಿಕ್ಸ್ ಶೃಂಗಸಭೆಯನ್ನು ಸೆಪ್ಟೆಂಬರ್ 12-13 ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಿತ್ತು. ಅದರ ಧ್ಯೇಯವಾಕ್ಯ "ಚೇತರಿಕೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ನಿರ್ಮಾಣ" ಎಂಬುದಾಗಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2025ರ ರಿಯೋ ಶೃಂಗಸಭೆಯಲ್ಲಿ "ಮಾನವೀಯತೆ ಮೊದಲು" ಮತ್ತು ಜನ ಕೇಂದ್ರಿತ ವಿಧಾನದ ತತ್ವಗಳ ಆಧಾರದ ಮೇಲೆ ಈ ದೃಷ್ಟಿಕೋನವನ್ನು ಪ್ರಸ್ತುತಪಡಿಸಿದ್ದರು. 2026 ರಲ್ಲಿ, ಬ್ರಿಕ್ಸ್ ಸ್ಥಾಪನೆಯಾಗಿ 20 ವರ್ಷಗಳನ್ನು ಪೂರೈಸಿತು.
- ಘೋಷಣೆಯು 140 ಅಂಶಗಳನ್ನು ಒಳಗೊಂಡಿದ್ದು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸುಧಾರಣೆಗಳು, ಭಯೋತ್ಪಾದನೆಯ ವಿರುದ್ಧ ಬಲವಾದ ನಿಲುವು, ಬೆಳವಣಿಗೆ ಮತ್ತು ಅಭಿವೃದ್ಧಿ ಕುರಿತ ಬ್ರಿಕ್ಸ್ ಕಾರ್ಯಪಡೆ, ಬ್ರಿಕ್ಸ್ ಸಂಪರ್ಕ, ಬ್ರಿಕ್ಸ್ ಧಾನ್ಯ ವಿನಿಮಯ, ಹವಾಮಾನ ಬದಲಾವಣೆ ಮತ್ತು ಪ್ಯಾರಿಸ್ ಒಪ್ಪಂದ ಹಾಗೂ ಹೊಸ ಅಭಿವೃದ್ಧಿ ಬ್ಯಾಂಕ್ ಪ್ರಮುಖ ಮುಖ್ಯಾಂಶಗಳಾಗಿವೆ.

- 2021: 13 ನೇ ಬ್ರಿಕ್ಸ್ ಶೃಂಗಸಭೆ: 13 ನೇ ಬ್ರಿಕ್ಸ್ ಶೃಂಗಸಭೆ 9 ಸೆಪ್ಟೆಂಬರ್ 2021 ರಂದು ವರ್ಚುವಲ್ ಆಗಿ ನಡೆಯಿತು. ಇದರ ವಿಷಯ "ಬ್ರಿಕ್ಸ್ @15: ಸಹಕಾರಕ್ಕಾಗಿ ಮುಂದುವರಿಕೆ, ಕ್ರೋಡೀಕರಣ ಮತ್ತು ಒಮ್ಮತ" ಎಂಬುದಾಗಿತ್ತು.
- ಘೋಷಣೆಯು ಬಹುಪಕ್ಷೀಯ ವ್ಯವಸ್ಥೆಯನ್ನು ಸುಧಾರಿಸುವುದು, ಭಯೋತ್ಪಾದನೆಯನ್ನು ಎದುರಿಸುವುದು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಡಿಜಿಟಲ್ ತಂತ್ರಜ್ಞಾನವನ್ನು ಬಳಸುವುದು ಮತ್ತು ಜನರ ನಡುವಿನ ಸಂಪರ್ಕವನ್ನು ಹೆಚ್ಚಿಸುವುದಕ್ಕೆ ಒತ್ತು ನೀಡಿತು. ಭಾರತವು ಬ್ರಿಕ್ಸ್ ನ ಕಾರ್ಯ ವಿಧಾನಗಳನ್ನು ಸುವ್ಯವಸ್ಥಿತಗೊಳಿಸಿತು ಮತ್ತು ಡಿಜಿಟಲ್ ಆರೋಗ್ಯ ಶೃಂಗಸಭೆ ಮತ್ತು ಮೊದಲ ಬ್ರಿಕ್ಸ್ ಜಲ ಸಚಿವರ ಸಭೆಯಂತಹ ಹೊಸ ವೇದಿಕೆಗಳನ್ನು ಪರಿಚಯಿಸಿತು.

- 2016: 8ನೇ ಬ್ರಿಕ್ಸ್ ಶೃಂಗಸಭೆ: 8ನೇ ಬ್ರಿಕ್ಸ್ ಶೃಂಗಸಭೆ 2016ರ ಅಕ್ಟೋಬರ್ 15-16ರಂದು ಗೋವಾದಲ್ಲಿ ನಡೆಯಿತು. ಇದರ ಧ್ಯೇಯವಾಕ್ಯ "ಸ್ಪಂದನಶೀಲ, ಅಂತರ್ಗತ ಮತ್ತು ಸಾಮೂಹಿಕ ಪರಿಹಾರಗಳ ನಿರ್ಮಾಣ" ಎಂಬುದಾಗಿತ್ತು.
- ಗೋವಾ ಘೋಷಣೆ ಮತ್ತು ಕ್ರಿಯಾ ಯೋಜನೆಯು ನ್ಯೂ ಡೆವಲಪ್ಮೆಂಟ್ ಬ್ಯಾಂಕಿನ ಕಾರ್ಯಾಚರಣೆಯ ಪ್ರಾರಂಭವನ್ನು ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಅದರ ಮೊದಲ ಸಾಲಗಳನ್ನು ಸ್ವಾಗತಿಸಿತು. ಅಭಿವೃದ್ಧಿಶೀಲ ರಾಷ್ಟ್ರಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ವಿಶ್ವಸಂಸ್ಥೆಯಲ್ಲಿ ಸುಧಾರಣೆಗಳ ಅಗತ್ಯವನ್ನು ಅದು ಒತ್ತಿಹೇಳಿತು.

- 2012: 4ನೇ ಬ್ರಿಕ್ಸ್ ಶೃಂಗಸಭೆ: 4ನೇ ಬ್ರಿಕ್ಸ್ ಶೃಂಗಸಭೆ 29 ಮಾರ್ಚ್ 2012ರಂದು ನವದೆಹಲಿಯಲ್ಲಿ ನಡೆಯಿತು. ಇದರ ಧ್ಯೇಯವಾಕ್ಯ "ಜಾಗತಿಕ ಸ್ಥಿರತೆ, ಭದ್ರತೆ ಮತ್ತು ಸಮೃದ್ಧಿಗಾಗಿ ಬ್ರಿಕ್ಸ್ ಪಾಲುದಾರಿಕೆ" ಎಂಬುದಾಗಿತ್ತು.
- ಜಾಗತಿಕ ಆರ್ಥಿಕತೆಯಲ್ಲಿ ಅಸಮ ಚೇತರಿಕೆ, ದೇಶಗಳ ನಡುವೆ ಹೆಚ್ಚುತ್ತಿರುವ ಸಾಲದ ಅಪಾಯಗಳು ಮತ್ತು ಸುಸ್ಥಿರ ಅಭಿವೃದ್ಧಿಯ ಬಗ್ಗೆ ಚರ್ಚೆಗಳು ಕೇಂದ್ರೀಕೃತವಾದವು.

ರಿಯೊ ಡಿ ಜನೈರೊದಲ್ಲಿ ನಡೆದ 2025 ರ ಶೃಂಗಸಭೆಯಲ್ಲಿ ಇದೇ ಭಾವನೆಯನ್ನು ಪ್ರತಿಧ್ವನಿಸಿದ ಪ್ರಧಾನಮಂತ್ರಿ ಮೋದಿ, ಇಪ್ಪತ್ತನೇ ಶತಮಾನದಲ್ಲಿ ಸ್ಥಾಪಿತವಾದ ಜಾಗತಿಕ ಸಂಸ್ಥೆಗಳು ಇಪ್ಪತ್ತೊಂದನೇ ಶತಮಾನದ ಸವಾಲುಗಳನ್ನು ಎದುರಿಸಲು ಸಜ್ಜುಗೊಂಡಿಲ್ಲ ಮತ್ತು ಬಹುಧ್ರುವೀಯ ಮತ್ತು ಅಂತರ್ಗತ ವಿಶ್ವ ಕ್ರಮದೊಂದಿಗೆ ಹೊಂದಾಣಿಕೆಯಲ್ಲಿ ಸುಧಾರಣೆಯ ಅಗತ್ಯವಿದೆ ಎಂದು ಹೇಳಿದ್ದರು. ಬ್ರಿಕ್ಸ್ ನ ವಿಸ್ತರಣೆಯು ಕಾಲಾನಂತರದಲ್ಲಿ ಹೊಂದಿಕೊಳ್ಳುವ ಗುಂಪಿನ ಸಾಮರ್ಥ್ಯವನ್ನು ತೋರಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ತನ್ನ ಅಧ್ಯಕ್ಷತೆಯ ಅವಧಿಯಲ್ಲಿ ಈ ಮನೋಭಾವವನ್ನು ಮುಂದುವರಿಸಿಕೊಂಡು, ಭಾರತವು ವ್ಯಾಪಾರ, ಆರೋಗ್ಯ, ತಂತ್ರಜ್ಞಾನ ಮತ್ತು ಹವಾಮಾನದಂತಹ ಪ್ರಾಯೋಗಿಕ ಕ್ಷೇತ್ರಗಳಲ್ಲಿ ದೃಢವಾದ ಉಪಕ್ರಮಗಳನ್ನು



ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಕೈಗೊಂಡಿತು, ಜಾಗತಿಕ ಅಸ್ಥಿರತೆಯ ನಡುವೆ ಬ್ರಿಕ್ಸ್ ಸಹಕಾರ ಮತ್ತು ನಂಬಿಕೆಯ ದಾರಿದೀಪವಾಗಿ ಹೊರಹೊಮ್ಮುವ ಗುರಿಯನ್ನು ಹೊಂದಿದೆ.

ನವದೆಹಲಿ ಘೋಷಣೆ: ಬದಲಾವಣೆಗೆ 140 ಅಂಶಗಳ ನೀಲನಕ್ಷೆ

18ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಅಂಗೀಕರಿಸಲಾದ 'ನವದೆಹಲಿ ಘೋಷಣೆ'ಯು ಎರಡು ದಶಕಗಳ ಬ್ರಿಕ್ಸ್ ಅನುಭವ ಮತ್ತು ಭಾರತದ ಅಧ್ಯಕ್ಷತೆಯ ಅವಧಿಯಲ್ಲಿ ನಡೆದ 400 ಕ್ಕೂ ಹೆಚ್ಚು ಸಭೆಗಳ ಫಲಿತಾಂಶಗಳನ್ನು ಒಳಗೊಂಡಿದೆ. ಇದು ಜಾಗತಿಕ ಆಡಳಿತ ಸುಧಾರಣೆಯಿಂದ ಹಿಡಿದು ಆರೋಗ್ಯ, ಕೃಷಿ, ತಂತ್ರಜ್ಞಾನ, ಹವಾಮಾನ ಮತ್ತು ಸಂಸ್ಕೃತಿಯವರೆಗಿನ ಕ್ಷೇತ್ರಗಳನ್ನು ಒಳಗೊಂಡ ಸಮಗ್ರ 140 ಪ್ಯಾರಾಗ್ರಾಫ್ ದಾಖಲೆಯಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸುಧಾರಣೆಗೆ ಸಂಬಂಧಿಸಿದಂತೆ ಸದಸ್ಯ ರಾಷ್ಟ್ರಗಳ ಏಕತೆ ಘೋಷಣೆಯ ಒಂದು ಪ್ರಮುಖ ಲಕ್ಷಣವಾಗಿದೆ. ಭದ್ರತಾ ಮಂಡಳಿಯ ಕಾಯಂ ಸದಸ್ಯರಾಗಿ ಸೇರಿದಂತೆ ವಿಶ್ವಸಂಸ್ಥೆಯಲ್ಲಿ ಹೆಚ್ಚಿನ ಪಾತ್ರ ವಹಿಸುವ ಭಾರತ ಮತ್ತು ಬ್ರೆಜಿಲ್ ನ ಆಕಾಂಕ್ಷೆಗಳಿಗೆ ಚೀನಾ ಮತ್ತು ರಷ್ಯಾ ತಮ್ಮ ಬೆಂಬಲವನ್ನು ಪುನರುಚ್ಚರಿಸಿದವು. 20ನೇ ಶತಮಾನದಲ್ಲಿ ಸ್ಥಾಪಿಸಲಾದ ಜಾಗತಿಕ ಸಂಸ್ಥೆಗಳು ಪ್ರಸ್ತುತ ವಾಸ್ತವಗಳನ್ನು ಪ್ರತಿಬಿಂಬಿಸುವುದಿಲ್ಲ, ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯುಟಿಒ) ನಂತಹ ಸಂಸ್ಥೆಗಳಿಗೆ ತುರ್ತು ಸುಧಾರಣೆ ಅಗತ್ಯವಾಗಿದೆ ಎಂದು ಘೋಷಣೆ ಒತ್ತಿಹೇಳಿತು.

> **ನಾವೀನ್ಯತೆ ಸ್ತಂಭದ ಅಡಿಯಲ್ಲಿ, ಬ್ರಿಕ್ಸ್ ಇನ್ಕ್ಯುಬೇಟರ್ ನೆಟ್ವರ್ಕ್ ನಮ್ಮ ಸ್ಟಾರ್ಟ್ ಅಪ್ ಗಳು ಮತ್ತು ಇನ್ಕ್ಯುಬೇಟರ್ ಗಳನ್ನು ಸಂಪರ್ಕಿಸುತ್ತದೆ. ಸಣ್ಣ ಉದ್ಯಮಗಳನ್ನು ಜ್ಞಾನ, ಹಣಕಾಸು ಮತ್ತು ಹೊಸ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸಲು ನಾವು ಬ್ರಿಕ್ಸ್ ಎಂಎಸ್ಎಂಇ ಸಹಕಾರ ಪೋರ್ಟಲ್ ಅನ್ನು ಪ್ರಾರಂಭಿಸಿದ್ದೇವೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಭಯೋತ್ಪಾದನೆಯ ಬಗ್ಗೆ ಘೋಷಣೆಯ ನಿಲುವು ನಿಸ್ಸಂದಿಗ್ಧವಾಗಿತ್ತು. ಸದಸ್ಯ ರಾಷ್ಟ್ರಗಳು ಏಪ್ರಿಲ್ 2025 ರಲ್ಲಿ ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿದವು, ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಎದುರಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದವು ಮತ್ತು ಭಯೋತ್ಪಾದನೆಯನ್ನು ಯಾವುದೇ ಧರ್ಮ, ರಾಷ್ಟ್ರೀಯತೆ ಅಥವಾ ನಾಗರಿಕತೆಯೊಂದಿಗೆ ಜೋಡಿಸಬಾರದು ಎಂದು ಒತ್ತಿ ಹೇಳಿದವು. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಯಾವುದೇ ದ್ವಂದ್ವ ನೀತಿಗಳು ಸ್ವೀಕಾರಾರ್ಹವಲ್ಲ. ಆರ್ಥಿಕ ರಂಗದಲ್ಲಿ, ಘೋಷಣೆಯು ನ್ಯೂ ಡೆವಲಪ್ ಮೆಂಟ್ ಬ್ಯಾಂಕ್ (ಎನ್.ಡಿ.ಬಿ) ತನ್ನ ಎರಡನೇ 'ಸುವರ್ಣ ದಶಕ'ವನ್ನು



ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ಪ್ರಮುಖ ಸ್ತಂಭಗಳು

ಚೇತರಿಕೆ

- ಜಾಗತಿಕ ಅನಿಶ್ಚಿತತೆಗಳು, ಪೂರೈಕೆ ಸರಪಳಿ ಅಡೆತಡೆಗಳು, ಆರೋಗ್ಯ ಸವಾಲುಗಳು ಮತ್ತು ಹವಾಮಾನ ಅಪಾಯಗಳನ್ನು ಪರಿಹರಿಸಲು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಥಿಕ ಚೇತರಿಕೆಯನ್ನು ಬಲಪಡಿಸುವುದು.

ನಾವೀನ್ಯತೆ

- ಪರಿಣಾಮಕಾರಿ ಸೇವಾ ವಿತರಣೆ ಮತ್ತು ಭವಿಷ್ಯಕ್ಕೆ ಸಿದ್ಧವಾದ ಬೆಳವಣಿಗೆಯನ್ನು ಸಕ್ರಿಯಗೊಳಿಸಲು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಫಿನ್‌ಟೆಕ್, ಕೃತಕ ಬುದ್ಧಿಮತ್ತೆ ಮತ್ತು ಜ್ಞಾನ ಹಂಚಿಕೆಯಂತಹ ಹೊಸ ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ನಿಯೋಜಿಸುವುದು.

ಸಹಕಾರ

- ನೀತಿ ಸಮನ್ವಯ, ಅಭಿವೃದ್ಧಿ ಹಣಕಾಸು, ವ್ಯಾಪಾರ ಸೌಲಭ್ಯ, ಜಾಗತಿಕ ಸಾಂಸ್ಥಿಕ ಆಡಳಿತದಲ್ಲಿ ಸುಧಾರಣೆಗಳು ಮತ್ತು ಜನ ಕೇಂದ್ರಿತ ಪಾಲುದಾರಿಕೆಯ ಮೂಲಕ ಬ್ರಿಕ್ಸ್ ಸದಸ್ಯರ ನಡುವೆ ಬಹುಪಕ್ಷೀಯ ಸಂಬಂಧವನ್ನು ಗಟ್ಟಿಗೊಳಿಸುವುದು.

ಸುಸ್ಥಿರ ಅಭಿವೃದ್ಧಿ

- ರಾಷ್ಟ್ರೀಯ ಮತ್ತು ಜಾಗತಿಕ ಆದ್ಯತೆಗಳಿಗೆ ಅನುಗುಣವಾಗಿ ಹವಾಮಾನ ಕ್ರಮ, ಹಸಿರು ಹಣಕಾಸು, ಇಂಧನ ಪರಿವರ್ತನೆ ಮತ್ತು ಸುಸ್ಥಿರ ಅಭಿವೃದ್ಧಿಯ ಕಡೆಗೆ ಸಾಮೂಹಿಕ ಪ್ರಯತ್ನಗಳನ್ನು ವೇಗಗೊಳಿಸುವುದು.

ಬ್ರಿಕ್ಸ್ ಭಾರತ 2026 ಲಾಂಛನ

ಬ್ರಿಕ್ಸ್ 2026 ಲಾಂಛನವು ಸಂಪ್ರದಾಯ ಮತ್ತು ಆಧುನಿಕತೆಯ ಸುಂದರ ಮಿಶ್ರಣವಾಗಿದೆ. ಹೂವಿನ ದಳಗಳ ಬಣ್ಣಗಳು ಎಲ್ಲಾ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ರೋಮಾಂಚಕ ಬಣ್ಣಗಳನ್ನು ಪ್ರತಿಬಿಂಬಿಸುತ್ತವೆ, ಇದು ಸಾಮೂಹಿಕ ಶಕ್ತಿ ಮತ್ತು ಏಕತೆಯನ್ನು ಸಂಕೇತಿಸುತ್ತದೆ. ಕೇಂದ್ರದಲ್ಲಿ "ನಮಸ್ತೆ" ಭಾರತದ ಪ್ರಾಚೀನ ಸಂಪ್ರದಾಯ, ಆತ್ಮೀಯತೆ, ಗೌರವ ಮತ್ತು ಸಾಮರಸ್ಯದ ಸಹಯೋಗವನ್ನು ತಿಳಿಸುತ್ತದೆ. ಮೂರು ಪ್ರಮುಖ ಸ್ತಂಭಗಳನ್ನು ಸಹ ಚಿತ್ರಿಸಲಾಗಿದೆ...

- ರಾಜಕೀಯ ಮತ್ತು ಭದ್ರತಾ ಸಹಕಾರ
- ಆರ್ಥಿಕ ಮತ್ತು ಹಣಕಾಸು ಸಹಭಾಗಿತ್ವ
- ಸಂಸ್ಕೃತಿ ಮತ್ತು ಜನರ ನಡುವಿನ ಸಹಕಾರ

ಪ್ರವೇಶಿಸುತ್ತಿರುವುದನ್ನು ಸ್ವಾಗತಿಸಿತು ಮತ್ತು ಮೇ 2026 ರಲ್ಲಿ ಮಾಸ್ಕೋದಲ್ಲಿ ನಡೆದ ಅದರ 11 ನೇ ವಾರ್ಷಿಕ ಸಭೆಯನ್ನೂ ಉಲ್ಲೇಖಿಸಿತು. ಭಾರತದ ಅಧ್ಯಕ್ಷತೆಯಲ್ಲಿ ಅಭಿವೃದ್ಧಿಪಡಿಸಲಾದ ಬ್ರಿಕ್ಸ್-ಎನ್.ಡಿ.ಬಿ ಜ್ಞಾನ ಪೋರ್ಟಲ್ ಅನ್ನು ಸಹ ಪ್ರಾರಂಭಿಸಲಾಯಿತು; ಇದು ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ಅನುಭವಗಳು ಮತ್ತು ಉತ್ತಮ ರೂಢಿಗಳನ್ನು ಕ್ರೋಡೀಕರಿಸುತ್ತದೆ. ಗಡಿಯಾಚೆಗಿನ ಪಾವತಿಗಳನ್ನು ವೇಗವಾಗಿ, ಅಗ್ಗದ ಮತ್ತು ಹೆಚ್ಚು ಸುರಕ್ಷಿತವಾಗಿಸುವ ಗುರಿಯನ್ನು ಹೊಂದಿರುವ ಬ್ರಿಕ್ಸ್ ಪಾವತಿ ಕಾರ್ಯಪಡೆಯ ಪ್ರಯತ್ನಗಳನ್ನು ಮುನ್ನಡೆಸಲು ಒಪ್ಪಂದಕ್ಕೆ ಬರಲಾಯಿತು. ಕೃತಕ ಬುದ್ಧಿಮತ್ತೆಯ



30 ನಗರಗಳಲ್ಲಿ 400 ಕ್ಕೂ ಹೆಚ್ಚು ಸಭೆ- ಬ್ರಿಕ್ಸ್ ಚರ್ಚೆ

ಭಾರತದ ಅಧ್ಯಕ್ಷತೆಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ, ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಮತ್ತು ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ದೇಶದ 30 ನಗರಗಳಲ್ಲಿ ಈ ಹಿಂದೆ ನಡೆದ 400 ಸಭೆಗಳ ಮೂಲಕ ತೀರ್ಮಾನಗಳನ್ನು ಕೈಗೊಂಡು, ಒಮ್ಮತಕ್ಕೆ ಬರಲಾಯಿತು.

ರಾಜಕೀಯ ಮತ್ತು ಭದ್ರತಾ ಸಹಕಾರ, ಆರ್ಥಿಕ ಮತ್ತು ಆರ್ಥಿಕ ಸಹಕಾರ ಮತ್ತು ಸಾಂಸ್ಕೃತಿಕ ಮತ್ತು ಜನರ ನಡುವಿನ ವಿನಿಮಯಗಳು ಸಹಕಾರದ ಮೂರು ಪ್ರಮುಖ ಆಧಾರಸ್ತಂಭಗಳಾಗಿ ಉಳಿದಿವೆ.

ಭಾರತದ ಅಧ್ಯಕ್ಷತೆಯ ಅವಧಿಯಲ್ಲಿ ಬ್ರಿಕ್ಸ್ ನ ವಿವಿಧ ವಿಷಯಾಧಾರಿತ ಕ್ಷೇತ್ರಗಳಲ್ಲಿ 50 ಕ್ಕೂ ಹೆಚ್ಚು ಫಲಿತಾಂಶಗಳನ್ನು ಸಾಧಿಸಲಾಗಿದೆ. ಬ್ರಿಕ್ಸ್ ತನ್ನ ಮೂರನೇ ದಶಕವನ್ನು ಪ್ರವೇಶಿಸುತ್ತಿರುವಾಗ ನಿರಂತರ ಸಹಕಾರ ಮತ್ತು ಪಾಲುದಾರಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಈ ಅನೇಕ ಫಲಿತಾಂಶಗಳನ್ನು ವೇದಿಕೆಗಳು, ಚೌಕಟ್ಟುಗಳು ಮತ್ತು ಮಾರ್ಗಸೂಚಿಗಳಾಗಿ ರೂಪಿಸಲಾಗಿದೆ. ಸಭೆಗಳಲ್ಲಿ ಏರ್ಪಟ್ಟ ಒಮ್ಮತ ಬ್ರಿಕ್ಸ್ ನವದೆಹಲಿ ಘೋಷಣೆಯು ಸಭೆಗಳಲ್ಲಿ ತಲುಪಿದ ಒಮ್ಮತವನ್ನೂ ಒಳಗೊಂಡಿದೆ. ಬ್ರಿಕ್ಸ್ ನವದೆಹಲಿ ಘೋಷಣೆಯಲ್ಲಿ. ನವದೆಹಲಿ ಘೋಷಣೆಯು 140 ಅಂಶಗಳನ್ನು ಒಳಗೊಂಡಿದೆ; ಕೆಲವು ಪ್ರಮುಖ ಮುಖ್ಯಾಂಶಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಸಂಪೂರ್ಣ ಘೋಷಣೆಯನ್ನು ಓದಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಬ್ರಿಕ್ಸ್ ನವದೆಹಲಿ ಘೋಷಣೆಯ ಪ್ರಮುಖ ಮುಖ್ಯಾಂಶಗಳು

- **ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸುಧಾರಣೆ:** ವಿಶ್ವಸಂಸ್ಥೆಯ ಸುಧಾರಣೆಗೆ ಒತ್ತು ನೀಡುವುದು ಮತ್ತು ಭದ್ರತಾ ಮಂಡಳಿಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಾತಿನಿಧ್ಯವನ್ನು ಹೆಚ್ಚಿಸುವುದು. ಚೀನಾ ಮತ್ತು ರಷ್ಯಾ ಭಾರತ ಮತ್ತು ಬ್ರೆಜಿಲ್ ನ ಹೆಚ್ಚಿನ ಪಾತ್ರವನ್ನು ವಹಿಸುವ ಆಕಾಂಕ್ಷೆಗಳಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದವು.
- **ಭಯೋತ್ಪಾದನೆಯ ವಿರುದ್ಧ ದೃಢವಾದ ನಿಲುವು:** ಏಪ್ರಿಲ್ 22, 2025 ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಲಾಯಿತು. ಗಡಿಯಾಚೆಗಿನ ಭಯೋತ್ಪಾದನೆ, ಭಯೋತ್ಪಾದನೆಗೆ ಹಣಕಾಸು ಮತ್ತು ಸುರಕ್ಷಿತ ತಾಣಗಳು ಸೇರಿದಂತೆ ಎಲ್ಲಾ ರೀತಿಯ ಭಯೋತ್ಪಾದನೆಯ ವಿರುದ್ಧ "ಶೂನ್ಯ ಸಹಿಷ್ಣುತೆ" ನೀತಿಯನ್ನು ದೃಢಪಡಿಸಲಾಯಿತು.
- **ಕಿಂಬರ್ಲಿ ಪ್ರಕ್ರಿಯೆಯ ಭಾರತದ ಅಧ್ಯಕ್ಷತೆ:** 2026ರಲ್ಲಿ ಕಿಂಬರ್ಲಿ ಪ್ರಕ್ರಿಯೆಯ ಭಾರತದ ಅಧ್ಯಕ್ಷತೆಯನ್ನು ಸ್ವಾಗತಿಸುವುದು; ಬ್ರಿಕ್ಸ್ ಚೌಕಟ್ಟಿನೊಳಗೆ ಆಫ್ರಿಕಾದ ವಜ್ರ ಉತ್ಪಾದಿಸುವ ರಾಷ್ಟ್ರಗಳೊಂದಿಗೆ ಸಹಕಾರಕ್ಕೆ ಬೆಂಬಲ.
- **ಗಿಫ್ಟ್ ಸಿಟಿಯಲ್ಲಿ ಬ್ರಿಕ್ಸ್ ರಿಸ್ಕ್ ಲ್ಯಾಬ್:** ಭಾರತದ ಪ್ರಸ್ತಾಪದ ಆಧಾರದ ಮೇಲೆ ಗುಜರಾತ್ ನ ಗಿಫ್ಟ್ ಸಿಟಿ ಐಎಫ್ಎಸ್ಸಿಯಲ್ಲಿ ಬ್ರಿಕ್ಸ್ ರಿಸ್ಕ್ ಲ್ಯಾಬ್ ಅನ್ನು ಆಯೋಜಿಸುವ ಬಗ್ಗೆ ಹೆಚ್ಚಿನ ಚರ್ಚೆಗಳಿಗೆ ಬೆಂಬಲ.
- **ನಿರ್ಣಾಯಕ ಖನಿಜಗಳು:** ನಿರ್ಣಾಯಕ ಖನಿಜಗಳಿಗೆ ವಿಶ್ವಾಸಾರ್ಹ, ವೈವಿಧ್ಯಮಯ ಮತ್ತು ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳಿಗೆ ಮತ್ತು ಸಂಪನ್ಮೂಲ-ಸಮೃದ್ಧ ದೇಶಗಳಲ್ಲಿ ಮೌಲ್ಯವರ್ಧನೆಗೆ ಒತ್ತು.
- ಭಾರತದ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾದ ಬ್ರಿಕ್ಸ್-ಎನ್.ಡಿ.ಬಿ ಜ್ಞಾನ ಪೋರ್ಟಲ್ ಅಭಿವೃದ್ಧಿ ಅನುಭವಗಳು, ಉತ್ತಮ ರೂಢಿಗಳು ಮತ್ತು ನೀತಿ ಆವಿಷ್ಕಾರಗಳಿಗೆ ಹಂಚಿಕೆಯ ವೇದಿಕೆಯಾಗಿದೆ.
- **ಬೆಳವಣಿಗೆ ಮತ್ತು ಅಭಿವೃದ್ಧಿ ಕುರಿತ ಬ್ರಿಕ್ಸ್ ಕಾರ್ಯಪಡೆ:** ಭಾರತದ ಉಪಕ್ರಮದಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿ ಕಾರ್ಯಪಡೆಯ ಸ್ಥಾಪನೆ: ಅಭಿವೃದ್ಧಿ ಮಾದರಿಗಳು, ಡಿಜಿಟಲ್ ರೂಪಾಂತರ, ಕೃತಕ ಬುದ್ಧಿಮತ್ತೆ ಮತ್ತು ಅಭಿವೃದ್ಧಿ ಹಣಕಾಸು ಸಹಕಾರಕ್ಕೆ ವೇದಿಕೆ.

ಘೋಷಣೆಯು ಆರ್ಥಿಕ ಮತ್ತು ಸುಸ್ಥಿರ ಅಭಿವೃದ್ಧಿಗೆ ಇದು ಒಂದು ಪ್ರಮುಖ ಅವಕಾಶವೆಂದು ಗುರುತಿಸಿದೆ ಮತ್ತು ಅದರ ಸುರಕ್ಷತೆ, ಒಳಗೊಳ್ಳುವಿಕೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಒತ್ತಿಹೇಳುತ್ತದೆ. ಫೆಬ್ರವರಿ 2026 ರಲ್ಲಿ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕಾಗಿ ಸದಸ್ಯ ರಾಷ್ಟ್ರಗಳು ಭಾರತವನ್ನು ಅಭಿನಂದಿಸಿವೆ. ಜಾಗತಿಕ ಆಡಳಿತದ ಅಧಿವೇಶನದಲ್ಲಿ ಮಂಡಿಸಿದ ಪ್ರಧಾನಮಂತ್ರಿ ಮೋದಿಯವರ ಮೂರು ಪ್ರಸ್ತಾಪಗಳು ವಿಶೇಷವಾಗಿ ಗಮನಾರ್ಹವಾಗಿವೆ. ಅವರು ಜಾಗತಿಕ ಆಡಳಿತ ಚೌಕಟ್ಟನ್ನು ಪಿರಮಿಡ್ ಗೆ ಹೋಲಿಸಿದರು,



- **ಬೆಳವಣಿಗೆ ಮತ್ತು ಅಭಿವೃದ್ಧಿ ಕುರಿತ ಬ್ರಿಕ್ಸ್ ಕಾರ್ಯಪಡೆ:** ಭಾರತದ ಉಪಕ್ರಮದ ಮೇರೆಗೆ 'ಬೆಳವಣಿಗೆ ಮತ್ತು ಅಭಿವೃದ್ಧಿ ಕಾರ್ಯಪಡೆ' ಸ್ಥಾಪನೆ; ಅಭಿವೃದ್ಧಿ ಮಾದರಿಗಳು, ಡಿಜಿಟಲ್ ಪರಿವರ್ತನೆ, ಕೃತಕ ಬುದ್ಧಿಮತ್ತೆ ಮತ್ತು ಅಭಿವೃದ್ಧಿ ಹಣಕಾಸು ಕುರಿತ ಸಹಕಾರಕ್ಕಾಗಿ ವೇದಿಕೆ. ಬ್ರಿಕ್ಸ್-ಎನ್.ಡಿ.ಬಿ. ಜ್ಞಾನ ಪೋರ್ಟಲ್

- **ಬ್ರಿಕ್ಸ್-ಎನ್.ಡಿ.ಬಿ ಜ್ಞಾನ ಪೋರ್ಟಲ್:** ಭಾರತದ ಅಧ್ಯಕ್ಷತೆಯಲ್ಲಿ ಬ್ರಿಕ್ಸ್-ಎನ್.ಡಿ.ಬಿ ಜ್ಞಾನ ಪೋರ್ಟಲ್ ಆರಂಭ; ಅಭಿವೃದ್ಧಿ ಅನುಭವಗಳು, ಉತ್ತಮ ರೂಢಿಗಳು ಮತ್ತು ನೀತಿ ನಾವೀನ್ಯತೆಗಳಿಗಾಗಿ ಹಂಚಿಕೆಯ ವೇದಿಕೆ.

- **ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ:** ಬ್ರಿಕ್ಸ್ ರಾಷ್ಟ್ರಗಳ ನಡುವೆ ಡಿಪಿಐ ಪರಿಹಾರಗಳಿಗಾಗಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (ಡಿಪಿಐ) ಭಂಡಾರ ಮತ್ತು ಪ್ರಾಯೋಗಿಕ ಯೋಜನೆಗಳನ್ನು ಪ್ರಾರಂಭಿಸುವ ಪ್ರಸ್ತಾಪ.

- **ಕೃತಕ ಬುದ್ಧಿಮತ್ತೆ ಸಹಕಾರ:** ಆರ್ಥಿಕ ಮತ್ತು ಸುಸ್ಥಿರ ಅಭಿವೃದ್ಧಿಗೆ ಕೃತಕ ಬುದ್ಧಿಮತ್ತೆಯನ್ನು ಪ್ರಮುಖ ಸಾಧನವಾಗಿ ಗುರುತಿಸುವುದು; ಸುರಕ್ಷಿತ, ಅಂತರ್ಗತ, ವಿಶ್ವಾಸಾರ್ಹ ಮತ್ತು ಪ್ರವೇಶಿಸಬಹುದಾದ ಕೃತಕ ಬುದ್ಧಿಮತ್ತೆಗಾಗಿ ಅಂತಾರಾಷ್ಟ್ರೀಯ ಸಹಕಾರಕ್ಕೆ ಒತ್ತು. ಭಾರತದ ಎಐ ಇಂಪ್ಯಾಕ್ಟ್ ಶೃಂಗಸಭೆ 2026 ಅನ್ನು ಸ್ವಾಗತಿಸುವುದು.

- **ನಿಮ್ಹಾನ್ಸ್ ನೊಂದಿಗೆ ಮಾನಸಿಕ ಆರೋಗ್ಯ ಜಾಲ:** ಮಾನಸಿಕ ಆರೋಗ್ಯದ ಸಂಶೋಧನೆ ಮತ್ತು ನೀತಿ ಸಹಕಾರದ ವೇದಿಕೆಯಾದ ಬ್ರಿಕ್ಸ್ ಉತ್ಕೃಷ್ಟತಾ ಕೇಂದ್ರ ಜಾಲದ (ಸೆಂಟರ್ ಆಫ್ ಎಕ್ಸಲೆನ್ಸ್ ನೆಟ್ವರ್ಕ್) ಸಂಯೋಜಕ ಸಂಸ್ಥೆಯಾಗಿ ನಿಮ್ಹಾನ್ಸ್ ಅನ್ನು ಸೇರಿಸಲು ಬೆಂಬಲ.

- **ಬ್ರಿಕ್ಸ್ ಎಸ್ಎಂಇ ವೇದಿಕೆ, ಆಗ್ರಾ:** ಭಾರತದ ಅಧ್ಯಕ್ಷತೆಯಲ್ಲಿ ಆಗ್ರಾದಲ್ಲಿ ಮೊದಲ ಬ್ರಿಕ್ಸ್ ಎಸ್ಎಂಇ ವೇದಿಕೆಯ ಆತಿಥ್ಯ; ಹಣಕಾಸು ಮತ್ತು ತಂತ್ರಜ್ಞಾನಕ್ಕೆ ಎಂಎಸ್ಎಂಇ ಪ್ರವೇಶವನ್ನು ಹೆಚ್ಚಿಸಲು ಒತ್ತು.

- **ಸೌರ ದ್ಯುತಿ ವಿದ್ಯುಜ್ಜನಕ ಸಹಕಾರ:** ಬ್ರಿಕ್ಸ್ ಸೌರ ದ್ಯುತಿ ವಿದ್ಯುಜ್ಜನಕ ಸಹಕಾರ ಮಾರ್ಗಸೂಚಿ ಅಭಿವೃದ್ಧಿಪಡಿಸಲು ಬೆಂಬಲ; ತಂತ್ರಜ್ಞಾನ, ಹಣಕಾಸು ಮತ್ತು ಸಾಮರ್ಥ್ಯ ವರ್ಧನೆಯಲ್ಲಿ ಸಹಕಾರ.

- **ಬ್ರಿಕ್ಸ್ ಕೈಗಾರಿಕಾ ಸಾಮರ್ಥ್ಯಕ್ಕಾಗಿ ಭಾರತ ಕೇಂದ್ರ:** ಬ್ರಿಕ್ಸ್ ಕೈಗಾರಿಕಾ ಸಾಮರ್ಥ್ಯಕ್ಕಾಗಿ ಭಾರತ ಕೇಂದ್ರ (ಐಸಿಬಿಐಸಿ) ಸ್ಥಾಪನೆಯನ್ನು ಸ್ವಾಗತಿಸುತ್ತೇನೆ.

- **ಬ್ರಿಕ್ಸ್ ಇನ್ಕ್ಯುಬೇಟರ್ ನೆಟ್ವರ್ಕ್:** ಬ್ರಿಕ್ಸ್ ಇನ್ಕ್ಯುಬೇಟರ್ ನೆಟ್ವರ್ಕ್ ಸ್ಥಾಪನೆಯನ್ನು ಸ್ವಾಗತಿಸುವುದು ಮತ್ತು ಬ್ರಿಕ್ಸ್ ಸ್ಟಾರ್ಟ್ಅಪ್ ನಾವಿನ್ಯತೆ ನಿಧಿಯನ್ನು ಮತ್ತಷ್ಟು ಪರಿಗಣಿಸುವುದು.

- **ತೆರಿಗೆ ಸಹಕಾರ:** ಭಾರತದ ಅಧ್ಯಕ್ಷತೆಯಲ್ಲಿ ಬ್ರಿಕ್ಸ್ ತೆರಿಗೆ ಪ್ರಾಧಿಕಾರಗಳ ನಡುವೆ ಸಹಕಾರಕ್ಕಾಗಿ ಹೊಸ ಕಾರ್ಯ ಗುಂಪುಗಳು; ತೆರಿಗೆ ಬೆಂಬಲ ಜಾಲ ಮತ್ತು ತೆರಿಗೆ ಕ್ರಾಸ್ ಲರ್ನಿಂಗ್ ಲ್ಯಾಬ್ ನ ಉಪಕ್ರಮಗಳು.

- **ಮಹಿಳಾ ಡಿಜಿಟಲ್ ಸಾಮರ್ಥ್ಯ ವೃದ್ಧಿ:** ಬ್ರಿಕ್ಸ್ ಮಹಿಳಾ ಡಿಜಿಟಲ್ ಸಾಮರ್ಥ್ಯ ವೃದ್ಧಿ ಮಾರ್ಗಸೂಚಿಗಳನ್ನು ಸ್ವಾಗತಿಸುವುದು; ಭಾರತ ಪ್ರಾರಂಭಿಸಿದ ಮಹಿಳಾ ಸಬಲೀಕರಣಕ್ಕಾಗಿ ಉತ್ತಮ ರೂಢಿಗಳ ಡಿಜಿಟಲ್ ಭಂಡಾರ.

- **ಸಾಂಪ್ರದಾಯಿಕ ಮತ್ತು ಸ್ಥಳೀಯ ಜ್ಞಾನ:** ಭಾರತ ಪ್ರಾರಂಭಿಸಿದ ಸಾಂಪ್ರದಾಯಿಕ ಮತ್ತು ಸ್ಥಳೀಯ ಜ್ಞಾನ ವ್ಯವಸ್ಥೆಗಳಲ್ಲಿ ಶೈಕ್ಷಣಿಕ ಸಹಕಾರಕ್ಕಾಗಿ ಮಾರ್ಗದರ್ಶಿ ತತ್ವಗಳನ್ನು ಸ್ವಾಗತಿಸುವುದು.

- **ಶಿಕ್ಷಣ ಮತ್ತು ಕೌಶಲ್ಯಗಳು:** ಶಿಕ್ಷಣ, ಡಿಜಿಟಲ್ ಸಾಕ್ಷರತೆ, ಕೌಶಲ್ಯ ಅಭಿವೃದ್ಧಿ ಮತ್ತು ಕಾರ್ಯಪಡೆಯ ಸನ್ನದ್ಧತೆಯನ್ನು ಬಲಪಡಿಸಲು ಒತ್ತು; ಬ್ರಿಕ್ಸ್-ಟಿಸಿಎ ಅನ್ನು ಸಹಕಾರದ ವೇದಿಕೆಯಾಗಿ ಗುರುತಿಸುವುದು.

- **ಬ್ರಿಕ್ಸ್ ಸಂಪರ್ಕ:** ಸಾಮರ್ಥ್ಯ ವರ್ಧನೆ, ಉದ್ಯೋಗ ಮತ್ತು ಹೊಸ ತಂತ್ರಜ್ಞಾನಗಳು/ಕೌಶಲ್ಯಗಳಿಗಾಗಿ ಬ್ರಿಕ್ಸ್ ಸಂಪರ್ಕ ಅಳವಡಿಕೆ; ದೂರದ ಉದ್ಯೋಗಕ್ಕಾಗಿ ಅಂತಾರಾಷ್ಟ್ರೀಯ ಡಿಜಿಟಲ್ ವೇದಿಕೆಯ ಉಪಕ್ರಮ.

ಅಲ್ಲಿ ಅಧಿಕಾರವು ಮೇಲ್ಭಾಗದಲ್ಲಿ ಕೇಂದ್ರೀಕೃತವಾಗಿದೆ, ಆದರೆ ಕೆಳನೆಲೆಯಲ್ಲಿರುವ ದೇಶಗಳು ನಿರ್ಧಾರಗಳಿಂದ ಪ್ರಭಾವಿತವಾಗಿವೆ ಆದರೆ ಅವುಗಳನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಈ 'ಸವಲತ್ತುಗಳ ಪಿರಮಿಡ್' ಅನ್ನು 'ಪಾಲುದಾರಿಕೆಯ ವೇದಿಕೆಯನ್ನಾಗಿ ಪರಿವರ್ತಿಸಲು' ಕರೆ ನೀಡಿದ್ದು, ಪ್ರಾತಿನಿಧ್ಯ, ಹೊಣೆಗಾರಿಕೆ ಸಾಮರ್ಥ್ಯ ಮತ್ತು ನಿಯಮ ರೂಪಿಸುವ ಮೂರು ಸ್ತಂಭಗಳ ಆಧಾರದ ಮೇಲೆ ಬ್ರಿಕ್ಸ್ ಸುಧಾರಣಾ ಮಾರ್ಗಸೂಚಿಯನ್ನು



- **ಬ್ರಿಕ್ಸ್ ದೂರ ಸಂವೇದಿ ಉಪಗ್ರಹ ಸಮೂಹ:** ದೂರ ಸಂವೇದಿ ಉಪಗ್ರಹ ಸಮೂಹದ ಸಾಧನೆಗಳನ್ನು ಸ್ವಾಗತಿಸುವುದು; ಬ್ರಿಕ್ಸ್ ಬಾಹ್ಯಾಕಾಶ ಮಂಡಳಿಯ ಪ್ರಗತಿ ಮತ್ತು ಹೊಸ ಬಾಹ್ಯಾಕಾಶ ಸಂಸ್ಥೆಗಳ ಸೇರ್ಪಡೆ.
- **ಮಾಹಿತಿ ತಂತ್ರಜ್ಞಾನ ಮತ್ತು ಸೈಬರ್ ಅಪರಾಧ:** ಸುರಕ್ಷಿತ, ಸ್ಥಿರ ಮತ್ತು ಪರಸ್ಪರ ಕಾರ್ಯಸಾಧ್ಯವಾದ ಐಸಿಟಿ ಪರಿಸರಕ್ಕೆ ಒತ್ತು; ಸೈಬರ್ ಅಪರಾಧ ವಿರುದ್ಧ ವಿಶ್ವಸಂಸ್ಥೆಯ ಸಮಾವೇಶದ ಅನುಷ್ಠಾನಕ್ಕೆ ಸಹಕಾರ.
- **ಸೈಬರ್ ಸೆಕ್ಯುರಿಟಿ ಮತ್ತು ಡೀಪ್ ಫೇಕ್ಸ್:** ಸೈಬರ್ ಅಪರಾಧ, ತಪ್ಪು ಮಾಹಿತಿ, ಸುಳ್ಳು ಮಾಹಿತಿ, ದ್ವೇಷದ ಭಾಷಣ ಮತ್ತು ಡೀಪ್ ಫೇಕ್ ಗಳಂತಹ ಡಿಜಿಟಲ್ ಸವಾಲುಗಳನ್ನು ಎದುರಿಸಲು ಸಹಕಾರ.
- **ಸ್ಥಳೀಯ ಕರೆನ್ಸಿಗಳಲ್ಲಿ ಪಾವತಿಗಳು:** ಬ್ರಿಕ್ಸ್ ರಾಷ್ಟ್ರಗಳ ನಡುವೆ ಗಡಿಯಾಚೆಗಿನ ಪಾವತಿಗಳನ್ನು ವೇಗವಾಗಿ, ಕಡಿಮೆ-ವೆಚ್ಚದ, ಸುರಕ್ಷಿತ ಮತ್ತು ಪ್ರವೇಶಾರ್ಹ ಮಾಡುವ ಪ್ರಯತ್ನಗಳು; ಸ್ಥಳೀಯ ಕರೆನ್ಸಿಗಳಲ್ಲಿ ವ್ಯಾಪಾರ ಇತ್ಯರ್ಥದ ಕುರಿತು ನಡೆಯುತ್ತಿರುವ ಚರ್ಚೆಗಳು.
- **ವಸಾಹತು ಮತ್ತು ಠೇವಣಿ ಮೂಲಸೌಕರ್ಯ:** ವಸಾಹತು ಮತ್ತು ಠೇವಣಿ ವ್ಯವಸ್ಥೆಗಳ ತಾಂತ್ರಿಕ ಕಾರ್ಯಾಗಾರದ ನಂತರ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳಲು ಸಹಕಾರ.
- **ಎಂಎಸ್ಎಂಇಗಳಿಗೆ ಇನ್ವಾಯ್ಸ್ ರಿಯಾಯಿತಿ:** 'ಜೈಪುರ ಒಮ್ಮತ'ದ ಅಡಿಯಲ್ಲಿ ಬ್ರಿಕ್ಸ್ ನಲ್ಲಿ ಇನ್ವಾಯ್ಸ್ ರಿಯಾಯಿತಿ ಕಾರ್ಯವಿಧಾನವನ್ನು ಸ್ಥಾಪಿಸುವ ಅಧ್ಯಯನ; ಎಂಎಸ್ಎಂಇಗಳಿಗೆ ದುಡಿಯುವ ಬಂಡವಾಳವನ್ನು ಒದಗಿಸುವ ಗುರಿ.
- **ಜಾಗತಿಕ ಮೌಲ್ಯ ಸರಪಳಿಗಳು:** ಬ್ರಿಕ್ಸ್ ಜಾಗತಿಕ ಮೌಲ್ಯ ಸರಪಳಿಗಳನ್ನು ಚೇತರಿಕೆ ಮತ್ತು ಅಂತರ್ಗತವಾಗಿಸಲು ಒತ್ತು ನೀಡುವುದು, ಜೊತೆಗೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಹೆಚ್ಚಿನ ಮೌಲ್ಯದ ವಿಭಾಗಗಳಾಗಿ ಮುನ್ನಡೆಸುವುದು.
- **ಬ್ರಿಕ್ಸ್ ಧಾನ್ಯ ವಿನಿಮಯ:** ಧಾನ್ಯ ವ್ಯಾಪಾರ ವೇದಿಕೆ / ಬ್ರಿಕ್ಸ್ ಧಾನ್ಯ ವಿನಿಮಯ ಉಪಕ್ರಮದ ಬಗ್ಗೆ ಹೆಚ್ಚಿನ ಚರ್ಚೆ; ಇತರ ಕೃಷಿ ಉತ್ಪನ್ನಗಳು ಮತ್ತು ಸರಕುಗಳನ್ನು ಸೇರಿಸಲು ವಿಸ್ತರಣೆಯ ಸಾಮರ್ಥ್ಯ.
- **ಬ್ರಿಕ್ಸ್ ಅಗ್ರಿನ್:** ಕೃಷಿ ಒಳಹರಿವುಗಳು, ಆನುವಂಶಿಕ ಸಂಪನ್ಮೂಲಗಳು ಮತ್ತು ಮಾಹಿತಿಗಾಗಿ ಬ್ರಿಕ್ಸ್ ಅಗ್ರಿನ್ ಸ್ಥಾಪಿಸಲು ಒಪ್ಪಂದ; ಬೀಜ ವ್ಯವಸ್ಥೆಗಳಲ್ಲಿ ರೈತರ ಹಕ್ಕುಗಳ ಜಾಗತಿಕ ವೇದಿಕೆಯನ್ನು ಸ್ವಾಗತಿಸುವುದು.
- **ಇಂಧನ ಭದ್ರತೆ:** ಇಂಧನ ಭದ್ರತೆ, ಸ್ಥಿರ ಇಂಧನ ಮಾರುಕಟ್ಟೆಗಳು ಮತ್ತು ಚೇತರಿಕೆಯ ಇಂಧನ ಮೂಲಸೌಕರ್ಯಕ್ಕೆ ಒತ್ತು; ಬ್ರಿಕ್ಸ್ ಯುವ ಇಂಧನ ಶೃಂಗಸಭೆಯನ್ನು ಸ್ವಾಗತಿಸುವುದು.
- **ಸ್ಮಾರ್ಟ್ ಗ್ರಿಡ್ ಗಳು ಮತ್ತು ಇಂಧನ ಸಂಗ್ರಹಣೆ:** ಸ್ಮಾರ್ಟ್ ಗ್ರಿಡ್ ಗಳು ಮತ್ತು ಇಂಧನ ಸಂಗ್ರಹಣೆಗಾಗಿ ಡಿಜಿಟಲ್ ಉತ್ಕೃಷ್ಟತಾ ಕೇಂದ್ರದ ಉಪಕ್ರಮವಾದ ಸ್ಮಾರ್ಟ್ ಗ್ರಿಡ್ ಗಳು ಮತ್ತು ಇಂಧನ ಸಂಗ್ರಹಣೆ ಕುರಿತ ಬ್ರಿಕ್ಸ್ ಮಾರ್ಗದರ್ಶಿ ತತ್ವಗಳನ್ನು ಸ್ವಾಗತಿಸುವುದು.
- **ಹವಾಮಾನ ಬದಲಾವಣೆ ಮತ್ತು ಪ್ಯಾರಿಸ್ ಒಪ್ಪಂದ:** ಪ್ಯಾರಿಸ್ ಒಪ್ಪಂದದ ಸಂಪೂರ್ಣ ಅನುಷ್ಠಾನ, ಹೊಂದಾಣಿಕೆ, ನಷ್ಟ ಮತ್ತು ಹಾನಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹವಾಮಾನ ಹಣಕಾಸು ಒತ್ತು.

ರೂಪಿಸಲು ಪ್ರಸ್ತಾಪಿಸಲಾಗಿದೆ. ಬಣದೊಳಗೆ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು, ಅಧ್ಯಕ್ಷರ ವಾರ್ಷಿಕ ಆವರ್ತನದ ಹೊರತಾಗಿಯೂ ನಿರ್ಧಾರಗಳ ಮೇಲ್ವಿಚಾರಣೆ ಮತ್ತು ಕಾರ್ಯಗತಗೊಳಿಸುವಲ್ಲಿ ಯಾವುದೇ ಅಡಚಣೆಯನ್ನು ತಡೆಗಟ್ಟಲು ವಿನ್ಯಾಸಗೊಳಿಸಲಾದ 'ಬ್ರಿಕ್ಸ್ ನಿರಂತರತೆ ಮತ್ತು ಅನುಷ್ಠಾನ ಕಾರ್ಯವಿಧಾನ'ವನ್ನು ಅವರು ಪ್ರಸ್ತಾಪಿಸಿದರು. ಹೆಚ್ಚುವರಿಯಾಗಿ, ಕಡಲ ಸಿಬ್ಬಂದಿಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು 'ನಾವಿಕರ ತುರ್ತು ಬೆಂಬಲ ಜಾಲ'ವನ್ನು ಸ್ಥಾಪಿಸಲು ಅವರು ಸಲಹೆ ನೀಡಿದರು. ಘೋಷಣೆಯನ್ನು ಮುಕ್ತಾಯಗೊಳಿಸಿದ ಸದಸ್ಯ ರಾಷ್ಟ್ರಗಳು ನವದೆಹಲಿಯಲ್ಲಿ ಯಶಸ್ವಿ ಕಾರ್ಯಕ್ರಮಕ್ಕಾಗಿ ಭಾರತ ಸರ್ಕಾರ ಮತ್ತು ಜನರಿಗೆ ಕೃತಜ್ಞತೆ ಸಲ್ಲಿಸಿದವು ಮತ್ತು 2027 ರಲ್ಲಿ 19 ನೇ ಶೃಂಗಸಭೆಯ ಅಧ್ಯಕ್ಷತೆ ಮತ್ತು ಆತಿಥ್ಯ ವಹಿಸಲು ಚೀನಾಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದವು.



- **ಬ್ರಿಕ್ಸ್ ಇಂಗಾಲದ ಮಾರುಕಟ್ಟೆಗಳ ಪಾಲುದಾರಿಕೆ:** ಬ್ರಿಕ್ಸ್ ಇಂಗಾಲದ ಮಾರುಕಟ್ಟೆಗಳ ಪಾಲುದಾರಿಕೆಯ ಮೂಲಕ ಇಂಗಾಲದ ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ ಸಹಕಾರ, ಸಾಮರ್ಥ್ಯ ವರ್ಧನೆ ಮತ್ತು ಅನುಭವ ಹಂಚಿಕೆಗೆ ಬೆಂಬಲ.
- **ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ಸ್ ಅಲೈಯನ್ಸ್:** ಅಂತಾರಾಷ್ಟ್ರೀಯ ದೊಡ್ಡ ಬೆಕ್ಕು (ಹುಲಿ, ಚಿರತೆ ಇತ್ಯಾದಿ) ಸಹಯೋಗವನ್ನು ರೂಪಿಸುವ ಭಾರತದ ಉಪಕ್ರಮದ ಉಲ್ಲೇಖ ಮತ್ತು ದೊಡ್ಡ ಬೆಕ್ಕುಗಳ ಸಂರಕ್ಷಣೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ನಡುವೆ ಸಹಕಾರಕ್ಕೆ ಕರೆ.
- **ವಿಪತ್ತು ನಿರ್ವಹಣೆ:** ವಿಪತ್ತು ಅಪಾಯ ಕಡಿತಕ್ಕೆ ಸಹಕಾರ; ವಿಪತ್ತು ನಿರ್ವಹಣೆ, ಮುನ್ನೆಚ್ಚರಿಕೆ ದತ್ತಾಂಶ ಏಕೀಕರಣ ಮತ್ತು ಹವಾಮಾನ ಸ್ಥಿತಿಸ್ಥಾಪಕ ನಗರ ಮೂಲಸೌಕರ್ಯಕ್ಕಾಗಿ ಸ್ವಯಂಪ್ರೇರಿತ ತತ್ವಗಳಿಗೆ ಮಾರ್ಗಸೂಚಿಗಳನ್ನು ಸ್ವಾಗತಿಸುವುದು.
- **ಸುಸ್ಥಿರ ಸಾರಿಗೆ:** ಸುಸ್ಥಿರ ವಾಯುಯಾನ ಇಂಧನಗಳು, ಸಾರಿಗೆ ಡಿಕಾರ್ಬನೈಸೇಶನ್ ಮತ್ತು ಬ್ರಿಕ್ಸ್ ನಗರ ಚಲನಶೀಲತೆ ಕೇಂದ್ರದ ಸ್ಥಾಪನೆಯ ಉಪಕ್ರಮಗಳನ್ನು ಸ್ವಾಗತಿಸುವುದು; ಸಾಗಣೆ ಪೂರೈಕೆ-ಸರಪಳಿ ಸಹಕಾರ ಚೌಕಟ್ಟಿನ ಸೇರ್ಪಡೆ.
- **ನಗರೀಕರಣ ವೇದಿಕೆ:** ನವದೆಹಲಿಯಲ್ಲಿ ಬ್ರಿಕ್ಸ್ ನಗರೀಕರಣ ವೇದಿಕೆ ಮತ್ತು ಸಚಿವರ ಘೋಷಣೆಯನ್ನು ಸ್ವಾಗತಿಸುವುದು; ಬ್ರಿಕ್ಸ್ ನಗರ ಸಂಶೋಧನೆ ಮತ್ತು ಜ್ಞಾನ ಜಾಲದ ಸ್ಥಾಪನೆ.
- **ಆರೋಗ್ಯ ಮತ್ತು ಕ್ಷಯರೋಗ:** ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯಲ್ಲಿ ಸಹಕಾರ; ಕ್ಷಯರೋಗ ಸಂಶೋಧನೆ, ಹಂಚಿಕೆಯ ತಂತ್ರಜ್ಞಾನ ಮತ್ತು ಸಮಗ್ರ ಮುನ್ನೆಚ್ಚರಿಕೆ ವ್ಯವಸ್ಥೆಗಳಿಗಾಗಿ ಮೀಸಲಾದ ಉಪ-ಕಾರ್ಯ ಗುಂಪಿನ ಸ್ಥಾಪನೆ.
- **ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್:** ಎನ್.ಡಿ.ಬಿಯ ಪಾತ್ರವನ್ನು ಬಲಪಡಿಸುವುದು, ಸ್ಥಳೀಯ ಕರೆನ್ಸಿ ಹಣಕಾಸು ಹೆಚ್ಚಿಸುವುದು, ಧನಸಹಾಯ ಮೂಲಗಳನ್ನು ವೈವಿಧ್ಯಗೊಳಿಸುವುದು ಮತ್ತು ಜಾಗತಿಕ ದಕ್ಷಿಣದಲ್ಲಿ ಮೂಲಸೌಕರ್ಯ ಹೂಡಿಕೆಯನ್ನು ಹೆಚ್ಚಿಸಲು ಒತ್ತು.
- **ಭಾರತದ ಅಧ್ಯಕ್ಷತೆ ಮತ್ತು ಚೀನಾಕ್ಕೆ ಬೆಂಬಲ:** ಬ್ರಿಕ್ಸ್ ಭಾರತದ 2026 ರ ಅಧ್ಯಕ್ಷತೆಯನ್ನು ಶ್ಲಾಘಿಸಿತು ಮತ್ತು ನವದೆಹಲಿ ಶೃಂಗಸಭೆಯನ್ನು ಆಯೋಜಿಸಿದ್ದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿತು. 2027 ರ ಬ್ರಿಕ್ಸ್ ಅಧ್ಯಕ್ಷತೆ ಮತ್ತು ಚೀನಾದಲ್ಲಿ XIX ಬ್ರಿಕ್ಸ್ ಶೃಂಗಸಭೆಯನ್ನು ನಡೆಸಲು ಚೀನಾಕ್ಕೆ ಸಂಪೂರ್ಣ ಬೆಂಬಲವನ್ನು ನೀಡಲಾಯಿತು.

ಮೂವತ್ತು ನಗರಗಳು, ನಾಲ್ಕು ನೂರು ಸಭೆಗಳು: ಒಂಬತ್ತು ತಿಂಗಳ ತೀವ್ರ ಚರ್ಚೆಗಳು ಜನವರಿ 1, 2026 ರಂದು ಅಧ್ಯಕ್ಷತೆಯನ್ನು ವಹಿಸಿಕೊಂಡ ನಂತರ, ಭಾರತವು ಇಡೀ ವರ್ಷದ ನಿಖರವಾದ ಯೋಜಿತ ಕ್ಯಾಲೆಂಡರ್ ಪ್ರಕಾರ ಕೆಲಸ ಮಾಡಲು ಪ್ರಾರಂಭಿಸಿತು. ಬ್ರಿಕ್ಸ್ ಸಹಕಾರವು ಕೇವಲ ಶೃಂಗಸಭೆಯ ಎರಡು ದಿನಗಳಿಗೆ ಸೀಮಿತವಾಗದೆ ಸಮಾಜದ ಪ್ರತಿಯೊಂದು ಸಚಿವಾಲಯ, ವಲಯ ಮತ್ತು ವಿಭಾಗಕ್ಕೆ ವಿಸ್ತರಿಸಲ್ಪಟ್ಟಿದೆ ಎಂದು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿತ್ತು. ವರ್ಷದ ಅವಧಿಯಲ್ಲಿ, ದೇಶದ ಮೂವತ್ತು ನಗರಗಳಲ್ಲಿ ಸಚಿವರ ಸಭೆಗಳಿಂದ ಹಿಡಿದು ಕಾರ್ಯಾಗಾರಗಳು, ವೇದಿಕೆಗಳು ಮತ್ತು ಸಮ್ಮೇಳನಗಳವರೆಗೆ ನಾಲ್ಕು ನೂರಕ್ಕೂ ಹೆಚ್ಚು ಸಭೆಗಳು ಮತ್ತು ಕಾರ್ಯಕ್ರಮಗಳು ನಡೆದವು. ಶೃಂಗಸಭೆಗೆ ಮುಂಚಿನ ವಾರಗಳಲ್ಲಿ ನಡೆದ ಸಚಿವರ ಸಭೆಗಳು ಈ ಅಧ್ಯಕ್ಷತೆಯ ದಿಕ್ಕನ್ನು ವ್ಯಾಖ್ಯಾನಿಸಿದವು. ಚೆನ್ನೈನಲ್ಲಿ



ನಡೆದ 14 ನೇ ಬ್ರಿಕ್ಸ್ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ (ಎಸ್.ಟಿ.ಐ) ಸಚಿವರ ಸಭೆಯಲ್ಲಿ 'ಚೆನ್ನೈ ಘೋಷಣೆ'ಯನ್ನು ಅನುಮೋದಿಸಲಾಯಿತು, ಇದು ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಬಗ್ಗೆ ಒಮ್ಮತವನ್ನು ಸ್ಥಾಪಿಸಿತು, ಜೊತೆಗೆ ಬ್ರಿಕ್ಸ್ ವಿಜ್ಞಾನ ಮತ್ತು ಸಂಶೋಧನಾ ಭಂಡಾರವನ್ನು ರಚಿಸಿತು. ಆಗಸ್ಟ್ 7 ರಂದು ಭುವನೇಶ್ವರದಲ್ಲಿ ನಡೆದ 13 ನೇ ಶಿಕ್ಷಣ ಸಚಿವರ ಸಭೆಯಲ್ಲಿ, ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಮೂಲಭೂತ ಸಾಕ್ಷರತೆಯನ್ನು ಸುಧಾರಿಸುವ ಪ್ರಯತ್ನಗಳ ಜೊತೆಗೆ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆಯ ನೈತಿಕ ಬಳಕೆಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಬರಲಾಯಿತು. ಆಗಸ್ಟ್ 18 ರಂದು ನವದೆಹಲಿಯಲ್ಲಿ ನಡೆದ 12ನೇ ಪರಿಸರ ಸಚಿವರ ಸಭೆಯಲ್ಲಿ, ಭಾರತವು ನಾಲ್ಕು ಪ್ರಮುಖ ಆದ್ಯತೆಗಳನ್ನು ಎತ್ತಿ ತೋರಿಸಿತು: ಸುಸ್ಥಿರ ಜೀವನಶೈಲಿ, ಅರಣ್ಯೀಕರಣ, ವೃತ್ತಾಕಾರದ ಆರ್ಥಿಕತೆ ಮತ್ತು ಹವಾಮಾನ ಹೊಂದಾಣಿಕೆ. ಆಗಸ್ಟ್ 21 ರಂದು ಜೈಪುರದಲ್ಲಿ ನಡೆದ ಪ್ರವಾಸೋದ್ಯಮ ಸಚಿವರ ಸಭೆಯಲ್ಲಿ 'ಜೈಪುರ ಘೋಷಣೆ'ಯನ್ನು ಅಂಗೀಕರಿಸಲಾಯಿತು, ಪ್ರವಾಸೋದ್ಯಮದಲ್ಲಿ ತಂತ್ರಜ್ಞಾನದ ಬಳಕೆ ಮತ್ತು ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸಲು ಒತ್ತು ನೀಡಲಾಯಿತು. ಆಗಸ್ಟ್ 22 ರಂದು ವಿಶಾಖಪಟ್ಟಣಂನಲ್ಲಿ ಯುವ ಸಚಿವರ ಸಭೆ ನಡೆಯಿತು, ಅಲ್ಲಿ ಪ್ರತಿನಿಧಿಗಳು 'ಏಕ್ ಪೆಡ್ ಮಾ ಕೆ ನಾಮ್' ಅಭಿಯಾನದ ಅಡಿಯಲ್ಲಿ ಮರ ನೆಡುವ ಅಭಿಯಾನದಲ್ಲಿ ಭಾಗವಹಿಸಿದ್ದರು. ಜುಲೈ 23 ರಂದು ಚಂಡೀಗಢದಲ್ಲಿ ನಡೆದ 16 ನೇ ಬ್ರಿಕ್ಸ್ ಆರೋಗ್ಯ ಸಚಿವರ ಸಭೆ ವಿಶೇಷವಾಗಿ ಮಹತ್ವದ್ದಾಗಿದೆ; ಇದು ಸಾರ್ವತ್ರಿಕ ಆರೋಗ್ಯ ರಕ್ಷಣೆ, ಕ್ಷಯರೋಗ ನಿರ್ಮೂಲನೆ ಮತ್ತು ಸಾಂಕ್ರಾಮಿಕ ರೋಗಗಳಿಗೆ ಮುನ್ನೆಚ್ಚರಿಕೆ ವ್ಯವಸ್ಥೆಗಳ ಬಗ್ಗೆ ಒಪ್ಪಂದಗಳನ್ನು ತಲುಪಿತು, ಜೊತೆಗೆ ನಿಮ್ಹಾನ್ಸ್ ಸಮನ್ವಯದ ಅಡಿಯಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಹೊಸ ಜಾಲವನ್ನು

> **ತಂತ್ರಜ್ಞಾನ ಮತ್ತು ನಿರ್ಣಾಯಕ ಖನಿಜಗಳ ಶಸ್ತ್ರಾಸ್ತ್ರೀಕರಣವು ನಮ್ಮ ಹಂಚಿಕೆಯ ಪ್ರಗತಿಗೆ ಅಡ್ಡಿಯಾಗಬಹುದು. ಅದಕ್ಕಾಗಿಯೇ ನಾವು ತಂತ್ರಜ್ಞಾನದ ಅಳವಡಿಕೆಯಲ್ಲಿ ಒಳಗೊಳ್ಳುವಿಕೆಗೆ ಒತ್ತು ನೀಡಿದ್ದೇವೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಸ್ಥಾಪಿಸುವ ನಿರ್ಧಾರವನ್ನು ಕಂಡಿತು. ಇಂದೋರ್ ನಲ್ಲಿ ನಡೆದ ಕೃಷಿ ಸಚಿವರ ಸಭೆಯಲ್ಲಿ, ರೈತ ಕೇಂದ್ರಿತ 'ಬ್ರಿಕ್ಸ್ ಅಗ್ರಿನ್ (ಕೃಷಿ-ಒಳಹರಿವುಗಳು, ಆನುವಂಶಿಕ ಸಂಪನ್ಮೂಲಗಳು ಮತ್ತು ಮಾಹಿತಿ ಜಾಲ) ಅನ್ನು ಸ್ಥಾಪಿಸಲು ಒಮ್ಮತಕ್ಕೆ ಬಂದಿತು. ಕೊಚ್ಚಿಯಲ್ಲಿ ನಡೆದ ಮಹಿಳಾ ಸಚಿವರ ಸಭೆ, ಭೋಪಾಲ್ ನಲ್ಲಿ ನಡೆದ ಸಂಸ್ಕೃತಿ ಸಚಿವರ ಸಭೆ (ಅಲ್ಲಿ 'ಭೋಪಾಲ್ ಘೋಷಣೆ'ಯನ್ನು ಅಂಗೀಕರಿಸಲಾಯಿತು), ನಾಗ್ಪುರದಲ್ಲಿ ನಡೆದ ಸಾರಿಗೆ ಸಚಿವರ ಸಭೆ ಮತ್ತು ಆಗ್ರಾದಲ್ಲಿ ನಡೆದ ಮೊದಲ ಬ್ರಿಕ್ಸ್ ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಸ್ಎಂಇ) ವೇದಿಕೆ ಒಟ್ಟಾಗಿ ಭಾರತದ ಅಧ್ಯಕ್ಷತೆಯ ವ್ಯಾಪಕ ಮತ್ತು ಅಂತರ್ಗತ ಸ್ವರೂಪವನ್ನು ಪ್ರದರ್ಶಿಸಿತು. ಸೆಪ್ಟೆಂಬರ್ 11 ರಂದು ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ವ್ಯವಹಾರ ವೇದಿಕೆಯು ಇದುವರೆಗಿನ ಅತಿದೊಡ್ಡ ವೇದಿಕೆಯಾಗಿದೆ.

ಸಭಿಕರನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ಮೋದಿ, ಕಳೆದ ಇಪ್ಪತ್ತು ವರ್ಷಗಳಲ್ಲಿ ಜಾಗತಿಕ ಜಿಡಿಪಿ ಸರಿಸುಮಾರು ಎರಡೂವರೆ ಪಟ್ಟು ಬೆಳೆದಿದ್ದರೂ, ಬ್ರಿಕ್ಸ್ ರಾಷ್ಟ್ರಗಳ ಒಟ್ಟು

“ಬ್ರಿಕ್ಸ್ ನೊಳಗೆ ಅಭಿವೃದ್ಧಿಪಡಿಸಿದ ಪರಿಹಾರಗಳ ಪ್ರಯೋಜನಗಳು ಕೇವಲ ಬಣಕ್ಕೆ ಮಾತ್ರ ಸೀಮಿತವಾಗಬಾರದು ಎಂದು ನಾವು ನಂಬುತ್ತೇವೆ; ಜಾಗತಿಕ ದಕ್ಷಿಣದ ಅಗತ್ಯಗಳನ್ನು ಪೂರೈಸಲು ಅವುಗಳನ್ನು ಹೊಂದಿಕೊಳ್ಳುವಂತೆ ಮತ್ತು ಪ್ರವೇಶಾರ್ಹವಾಗುವಂತೆ ಮಾಡಬೇಕು.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಜಿಡಿಪಿ ನಾಲ್ಕೂವರೆ ಪಟ್ಟು ವಿಸ್ತರಿಸಿದೆ ಎಂದು ಹೇಳಿದರು. ಬ್ರಿಕ್ಸ್ ಬಣದ ಆರ್ಥಿಕ ಶಕ್ತಿಯು ವಿಶ್ವದ ಇತರ ಭಾಗಗಳಿಗಿಂತ ಸುಮಾರು ದುಪ್ಪಟ್ಟು ವೇಗದಲ್ಲಿ ಬೆಳೆದಿದೆ ಎಂದು ಇದು ಸೂಚಿಸುತ್ತದೆ. 200,000 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್ ಗಳು, 120 ಕ್ಕೂ ಹೆಚ್ಚು ಯುನಿಕಾರ್ನ್ ಗಳು, ಯುಪಿಐನಂತಹ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು 2014 ರಿಂದ ಸುಮಾರು 40 ದೇಶಗಳೊಂದಿಗೆ ಸಹಿ ಹಾಕಲಾದ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಒಳಗೊಂಡಿರುವ ಭಾರತದ ಪರಿಸರ ವ್ಯವಸ್ಥೆಯನ್ನು ಎತ್ತಿ ತೋರಿಸಿದ ಅವರು, ವ್ಯಾಪಾರ ಅಡೆತಡೆಗಳ ಬಗ್ಗೆ ವಾರ್ಷಿಕ ವರದಿಯನ್ನು ಸಿದ್ಧಪಡಿಸಲು, ಇತರ ಮಾರುಕಟ್ಟೆಗಳಿಗೆ ವಿಸ್ತರಿಸಲು 100 ಸ್ಟಾರ್ಟ್‌ಅಪ್ ಗಳಿಗೆ ಸಹಾಯ ಮಾಡಲು ಮತ್ತು 1,000 ಹೊಸ ವ್ಯಾಪಾರದಿಂದ ವ್ಯಾಪಾರದ ಪಾಲುದಾರಿಕೆಗಳನ್ನು ಬೆಳೆಸುವಂತೆ ಬ್ರಿಕ್ಸ್ ಬಿಸಿನೆಸ್ ಕೌನ್ಸಿಲ್ ಅನ್ನು ಒತ್ತಾಯಿಸಲಾಯಿತು.

ಶೃಂಗಸಭೆಯಿಂದ ದ್ವಿಪಕ್ಷೀಯ ಸಭೆಗಳವರೆಗೆ: ಪ್ರಧಾನಮಂತ್ರಿ ಮೋದಿಯವರ ಪೂರ್ವಭಾವಿ ರಾಜತಾಂತ್ರಿಕತೆ

ಶೃಂಗಸಭೆಯ ಜೊತೆಗೆ, ಪ್ರಧಾನಮಂತ್ರಿ ಮೋದಿ ಹಲವಾರು ದ್ವಿಪಕ್ಷೀಯ ಸಭೆಗಳ ಮೂಲಕ ವಿಶ್ವ ನಾಯಕರೊಂದಿಗೆ ಉತ್ತಮ ಸಮನ್ವಯವನ್ನು ಬೆಳೆಸಿದರು, ಇದು ಭಾರತದ ಅಧ್ಯಕ್ಷತೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿತು. ಸೆಪ್ಟೆಂಬರ್ 12 ರಂದು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗಿನ ಸಭೆಯಲ್ಲಿ, ಇಬ್ಬರೂ ನಾಯಕರು ಆಗಸ್ಟ್ 2025ರ ಟಿಯಾಂಜಿನ್ ಸಭೆಯ ನಂತರ ದ್ವಿಪಕ್ಷೀಯ ಸಂಬಂಧಗಳಲ್ಲಿ ಆಗಿರುವ ಪ್ರಗತಿಯನ್ನು ಸ್ವಾಗತಿಸಿದರು. "ಪರಸ್ಪರ ಗೌರವ, ಪರಸ್ಪರ ಸೂಕ್ಷ್ಮತೆ ಮತ್ತು ಪರಸ್ಪರ ಹಿತಾಸಕ್ತಿ" ಎಂಬ ಮೂರು ತತ್ವಗಳಿಂದ ಎರಡೂ ಕಡೆಯವರು ಮಾರ್ಗದರ್ಶಿಸಲ್ಪಡಬೇಕು ಎಂದು ಪ್ರಧಾನಮಂತ್ರಿ ಒತ್ತಿ ಹೇಳಿದರು. ಸೆಪ್ಟೆಂಬರ್ 13 ರಂದು, ರಾಜಕೀಯ, ವ್ಯಾಪಾರ, ರಕ್ಷಣೆ, ಇಂಧನ ಮತ್ತು ನಿರ್ಣಾಯಕ ಖನಿಜಗಳಂತಹ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಪರಿಶೀಲಿಸಲು ಪ್ರಧಾನಮಂತ್ರಿ ಕಜಕಿಸ್ತಾನದ ಅಧ್ಯಕ್ಷ ಕಾಸಿಮ್-ಜೊಮಾರ್ಟ್ ಟೊಕಾಯೆವ್ ಅವರನ್ನು ಭೇಟಿಯಾದರು. ಅದೇ ದಿನ ಉಗಾಂಡಾದ ಉಪಾಧ್ಯಕ್ಷೆ ಜೆಸ್ಸಿಕಾ ರೋಸ್ ಎಪೆಲ್ ಅಲುಪೊ ಅವರೊಂದಿಗಿನ ಸಭೆಯಲ್ಲಿ ಪ್ರಧಾನಮಂತ್ರಿಯವರು ಉಗಾಂಡಾದ "ವಿಷನ್ 2040"ಗೆ ಭಾರತದ ಬೆಂಬಲವನ್ನು ಪುನರುಚ್ಚರಿಸಿದರು. ನೈಜೀರಿಯಾದ





ಉಪಾಧ್ಯಕ್ಷ ಕಾಶಿಮ್ ಶೆಟ್ಟಿಮಾ ಮುಸ್ತಫಾ ಅವರೊಂದಿಗಿನ ಮಾತುಕತೆಯು ವ್ಯಾಪಾರ, ಇಂಧನ, ಕೃಷಿ ಮತ್ತು ಡಿಜಿಟಲ್ ತಂತ್ರಜ್ಞಾನ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಭಾರತ-ನೈಜೀರಿಯಾ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಒಪ್ಪಂದಕ್ಕೆ ಕಾರಣವಾಯಿತು.

ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರೊಂದಿಗಿನ ಭೇಟಿಯಲ್ಲಿ, ಪ್ರಧಾನಮಂತ್ರಿ ಮೋದಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಚೀತಾಗಳ ಯಶಸ್ವಿ ಸ್ಥಳಾಂತರವನ್ನು ಪ್ರಶಂಸಿಸಿದರು ಮತ್ತು ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲೈಯನ್ಸ್ ಗೆ ಸೇರಲು ರಾಷ್ಟ್ರಗಳನ್ನು ಆಹ್ವಾನಿಸಿದರು. ಆಫ್ರಿಕನ್ ಒಕ್ಕೂಟದ ಅಧ್ಯಕ್ಷ ಮತ್ತು ಬುರುಂಡಿಯ ಅಧ್ಯಕ್ಷ ಎವರಿಸ್ಟ್ ಎನ್ಡಾಯಿಶಿಮಿಯೆ ಅವರೊಂದಿಗಿನ ಮಾತುಕತೆಯ ಸಮಯದಲ್ಲಿ, ನಾಯಕರು ನಾಲ್ಕನೇ ಭಾರತ-ಆಫ್ರಿಕಾ ವೇದಿಕೆ ಶೃಂಗಸಭೆಯ ಆತಿಥ್ಯ ವಹಿಸುವ ಬಗ್ಗೆ ಚರ್ಚಿಸಿದರು ಮತ್ತು ಎಬೋಲಾ ಏಕಾಏಕಿ ನಿಭಾಯಿಸುವಲ್ಲಿ ಆಫ್ರಿಕನ್ ಒಕ್ಕೂಟದ ನಾಯಕತ್ವವನ್ನು ಪ್ರಧಾನಮಂತ್ರಿ ಶ್ಲಾಘಿಸಿದರು. ಈ ಎಲ್ಲಾ ಸಭೆಗಳಲ್ಲಿ ಒಂದು ಸಾಮಾನ್ಯ ಎಳೆ ಹರಿಯಿತು: ಜಾಗತಿಕ ದಕ್ಷಿಣದ ಧ್ವನಿಯನ್ನು ಬಲವಾಗಿ ಹೆಚ್ಚಿಸಲು ಮತ್ತು ಬಹುಧ್ರುವೀಯ, ಅಂತರ್ಗತ ಅಂತಾರಾಷ್ಟ್ರೀಯ ಕ್ರಮದತ್ತ ಒಟ್ಟಾಗಿ ಕೆಲಸ ಮಾಡಲು ಭಾರತದ ಕರೆ. ಶೃಂಗಸಭೆಯ ಔಪಚಾರಿಕ ಅಧಿವೇಶನಗಳನ್ನು ದ್ವಿಪಕ್ಷೀಯ ರಾಜತಾಂತ್ರಿಕತೆಯ ಆತ್ಮೀಯತೆಯೊಂದಿಗೆ ಸಂಪರ್ಕಿಸಿದ ಎಳೆ ಇದು. ಈ ದ್ವಿಪಕ್ಷೀಯ ಸಭೆಗಳ ನಂತರ, ಭಾರತವು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದನ್ನು ಅನೇಕ ನಾಯಕರು ಶ್ಲಾಘಿಸಿದರು. ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು ಆತ್ಮೀಯ ಆತಿಥ್ಯ ಮತ್ತು ಶೃಂಗಸಭೆಯ ಯಶಸ್ವಿ ಸಂಘಟನೆಗಾಗಿ ಪ್ರಧಾನಮಂತ್ರಿ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸಿದರು. ನವದೆಹಲಿ ಘೋಷಣೆಯಲ್ಲಿ, ಎಲ್ಲಾ ಸದಸ್ಯ ರಾಷ್ಟ್ರಗಳು ಸಾಮೂಹಿಕವಾಗಿ ಭಾರತದ ಅಧ್ಯಕ್ಷತೆಯನ್ನು ಶ್ಲಾಘಿಸಿದವು ಮತ್ತು ನವದೆಹಲಿಯಲ್ಲಿ 18 ನೇ ಶೃಂಗಸಭೆಯನ್ನು

> **“ಅಂತಾರಾಷ್ಟ್ರೀಯ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ಜಾಗತಿಕ ದಕ್ಷಿಣವು ಮುಂಚೂಣಿಯಲ್ಲಿದೆ, ಆದರೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಹಿಂದುಳಿದಿದೆ. ನಾವು "ಸವಲತ್ತುಗಳ ಪಿರಮಿಡ್" ಅನ್ನು "ಪಾಲುದಾರಿಕೆಯ ವೇದಿಕೆ" ಯನ್ನಾಗಿ ಪರಿವರ್ತಿಸಬೇಕು.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಯಶಸ್ವಿಯಾಗಿ ಆಯೋಜಿಸಿದ್ದಕ್ಕಾಗಿ ಭಾರತ ಸರ್ಕಾರ ಮತ್ತು ಭಾರತೀಯರಿಗೆ ಕೃತಜ್ಞತೆ ಸಲ್ಲಿಸಿದವು.

'ನಮಸ್ತೆ'ಯ ಪ್ರತಿಧ್ವನಿ: ಸಂಸ್ಕೃತಿಯಿಂದ ಒಂದುಗೂಡಿದ ಬ್ರಿಕ್ಸ್ ಕುಟುಂಬ

ತನ್ನ ಅಧ್ಯಕ್ಷತೆಯ ಅವಧಿಯಲ್ಲಿ, ಭಾರತವು ಆರ್ಥಿಕ ಮತ್ತು ರಾಜಕೀಯ ವಿಷಯಗಳಿಗೆ ನೀಡಿದಷ್ಟೇ ಪ್ರಾಮುಖ್ಯತೆಯನ್ನು ಸಾಂಸ್ಕೃತಿಕ ವಿನಿಮಯಕ್ಕೆ ನೀಡಿತು. ಭೋಪಾಲ್ ನಲ್ಲಿ ನಡೆದ 11 ನೇ ಬ್ರಿಕ್ಸ್ ಸಂಸ್ಕೃತಿ ಸಚಿವರ ಸಭೆಯಲ್ಲಿ ಅಂಗೀಕರಿಸಲಾದ 'ಭೋಪಾಲ್ ಘೋಷಣೆ'ಯು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ವಸ್ತುಸಂಗ್ರಹಾಲಯಗಳು ಮತ್ತು ಪತ್ರಾಗಾರಗಳ ನಡುವಿನ ಸಹಕಾರ ಮತ್ತು ಕಲಾವಿದರಿಗಾಗಿ ಹಂಚಿಕೆಯ ರಿಜಿಸ್ಟ್ರಿಯನ್ನು ರಚಿಸುವಂತಹ ಉಪಕ್ರಮಗಳ ಬಗ್ಗೆ ಒಮ್ಮತವನ್ನು ಕಂಡಿತು. ಹೆಚ್ಚುವರಿಯಾಗಿ, ಬ್ರಿಕ್ಸ್ ಸಾಂಸ್ಕೃತಿಕ ಉತ್ಸವ, ರಂಗಭೂಮಿ ಉತ್ಸವ ಮತ್ತು



ಚಲನಚಿತ್ರೋತ್ಸವದ ಆಯೋಜನೆಯು ಸದಸ್ಯ ರಾಷ್ಟ್ರಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸಿತು. ಬ್ರಿಕ್ಸ್ ಸಹಕಾರದ ಇಪ್ಪತ್ತು ವರ್ಷಗಳ ನೆನಪಿಗಾಗಿ, 'ಬ್ರಿಕ್ಸ್: ಎರಡು ದಶಕಗಳ ಸಹಕಾರ, 2006-2026' ಎಂಬ ಎರಡು ಸ್ಮರಣಾರ್ಥ ಅಂಚೆ ಚೀಟಿಗಳನ್ನು ಸೆಪ್ಟೆಂಬರ್ 12, 2026 ರಂದು ನವದೆಹಲಿಯಲ್ಲಿ ಬಿಡುಗಡೆ ಮಾಡಲಾಯಿತು. ಮೊದಲ ಅಂಚೆಚೀಟಿಯು ಬ್ರಿಕ್ಸ್ ನ ಹೊರಹೊಮ್ಮುವಿಕೆಯನ್ನು ಪರಸ್ಪರ ಗೌರವ ಮತ್ತು ಒಗ್ಗಟ್ಟಿನ ವೇದಿಕೆಯಾಗಿ ಚಿತ್ರಿಸಿದರೆ, ಎರಡನೆಯದು ಭಾರತದ ಅಧ್ಯಕ್ಷತೆಯ ಲಾಂಛನ ಮತ್ತು 'ಮಾನವೀಯತೆ ಮೊದಲು' ಮತ್ತು 'ಜನ-ಕೇಂದ್ರಿತ' ದೃಷ್ಟಿಕೋನವನ್ನು ಪ್ರದರ್ಶಿಸುತ್ತದೆ. ಈ ಜಾಗತಿಕ ಶೃಂಗಸಭೆಯಲ್ಲಿ, ಭಾರತವು ವಿದೇಶಿ ಅತಿಥಿಗಳಿಗೆ ಸ್ಥಳೀಯ ಸಂಸ್ಕೃತಿ ಮತ್ತು ಕಲೆಯನ್ನು ಪ್ರತಿಬಿಂಬಿಸುವ ಸ್ಮಾರಕಗಳನ್ನು ಉಡುಗೊರೆಯಾಗಿ ನೀಡಿತು. ಇವುಗಳಲ್ಲಿ 'ಒಂದು ಜಿಲ್ಲೆ ಒಂದು ಉತ್ಪನ್ನ' ಉಪಕ್ರಮದ ಅಡಿಯಲ್ಲಿ ರಚಿಸಲಾದ ಪಶ್ಮಿನಾ ಶಾಲುಗಳು, ವಾರಣಾಸಿಯ ರೇಷ್ಮೆ ಬ್ರೊಕೇಡ್, ಕನೌಜ್ ನ ಸುಗಂಧ ದ್ರವ್ಯ, ರಾಜಸ್ಥಾನಿ ಮೀನಾಕಾರಿ ಮತ್ತು ಖಾದಿ ಉತ್ಪನ್ನಗಳಂತಹ ವಸ್ತುಗಳು ಸೇರಿವೆ.

> **ಸಮುದ್ರ ಮಾರ್ಗಗಳು ಸುರಕ್ಷಿತವಾಗಿದ್ದರೆ, ಪೂರೈಕೆ ಮಾರ್ಗಗಳು ಮುಕ್ತವಾಗಿದ್ದರೆ ಮತ್ತು ನಾವಿಕರು ಸುರಕ್ಷಿತವಾಗಿದ್ದರೆ ಮಾತ್ರ ಜಾಗತಿಕ ವ್ಯಾಪಾರವು ಪ್ರಗತಿ ಹೊಂದಲು ಸಾಧ್ಯ. ಭಾರತವು ನೌಕಾಯಾನ ಸ್ವಾತಂತ್ರ್ಯ ಮತ್ತು ನಾವಿಕರ ಸುರಕ್ಷತೆಯ ದೃಢ ಬೆಂಬಲಿಗನಾಗಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಯುವ ಉತ್ಸಾಹ ಮತ್ತು ಮಹಿಳಾ ನಾಯಕತ್ವ: ಬ್ರಿಕ್ಸ್ ನ ಮಾನವೀಯ ಮುಖ

ಭಾರತದ ಅಧ್ಯಕ್ಷತೆಯ ಪ್ರಮುಖ ಅಂಶವೆಂದರೆ ಬ್ರಿಕ್ಸ್ ಸಹಕಾರವನ್ನು ಸರ್ಕಾರಿ ವಲಯಗಳ ಮಿತಿಯಾಚೆಗೆ ಕೊಂಡೊಯ್ಯುವ ಮತ್ತು ಅದನ್ನು ಸಾಮಾನ್ಯ ನಾಗರಿಕರಿಗೆ, ವಿಶೇಷವಾಗಿ ಯುವಕರು ಮತ್ತು ಮಹಿಳೆಯರಿಗೆ ವಿಸ್ತರಿಸುವ ಉಪಕ್ರಮವಾಗಿದೆ.



ಯುವ ಭಾಗವಹಿಸುವಿಕೆ: ಆಗಸ್ಟ್ 22, 2026 ರಂದು ವಿಶಾಖಪಟ್ಟಣಂನಲ್ಲಿ ನಡೆದ ಬ್ರಿಕ್ಸ್ ಯುವ ಸಚಿವರ ಸಭೆಯಲ್ಲಿ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಉದ್ಯೋಗ ಮತ್ತು ಯುವ ಉದ್ಯಮಶೀಲತೆಯಲ್ಲಿ ಸಹಕಾರವನ್ನು ಹೆಚ್ಚಿಸುವ ಬಗ್ಗೆ ಒಮ್ಮತಕ್ಕೆ ಬರಲಾಯಿತು. ಯುವ ನಾಯಕತ್ವವನ್ನು ಬೆಳೆಸಲು ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅರ್ಥಪೂರ್ಣ ಯುವಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಒತ್ತು ನೀಡಲಾಯಿತು. ಈ ಸಂದರ್ಭದಲ್ಲಿ, ಪ್ರತಿನಿಧಿಗಳು 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದ ಅಡಿಯಲ್ಲಿ ಗಿಡ ನೆಡುವ ಅಭಿಯಾನದಲ್ಲಿ ಭಾಗವಹಿಸಿದರು. ನವದೆಹಲಿ ಘೋಷಣೆಯು ಬ್ರಿಕ್ಸ್ ಯುವ ಮಂಡಳಿ ಮತ್ತು ಬ್ರಿಕ್ಸ್ ಯುವ ಶೃಂಗಸಭೆಯ ಪಾತ್ರಗಳನ್ನು ಅಂಗೀಕರಿಸಿದೆ, ಶಿಕ್ಷಣ, ಕೌಶಲ್ಯ, ಉದ್ಯಮಶೀಲತೆ, ಆರೋಗ್ಯ ಮತ್ತು ಪರಿಸರದಂತಹ ಕ್ಷೇತ್ರಗಳಲ್ಲಿ ಯುವಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಕರೆ ನೀಡಿದೆ. ಇದಲ್ಲದೆ, ಬ್ರಿಕ್ಸ್ ಯುವ ಸಹಕಾರ ಚೌಕಟ್ಟಿನಲ್ಲಿ ಆಗಿರುವ ಪ್ರಗತಿಯನ್ನು ಸ್ವಾಗತಿಸಲಾಯಿತು. ಮಹಿಳಾ ನಾಯಕತ್ವ: ಕೊಚ್ಚಿಯಲ್ಲಿ ನಡೆದ ಬ್ರಿಕ್ಸ್ ಮಹಿಳಾ ಸಚಿವರ ಸಭೆಯು ಮಹಿಳಾ ನೇತೃತ್ವದ ಅಭಿವೃದ್ಧಿಯ ದೃಷ್ಟಿಕೋನದ ಮೇಲೆ ಕೇಂದ್ರೀಕರಿಸಿತು, ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಪರಿವರ್ತನೆಯ ಹಿಂದಿನ ಪ್ರೇರಕ ಶಕ್ತಿಗಳೆಂದು ಮಹಿಳೆಯರನ್ನು ಗುರುತಿಸಿತು. ಮಹಿಳೆಯರ ಡಿಜಿಟಲ್ ಸಾಮರ್ಥ್ಯ ವರ್ಧನೆಗಾಗಿ ಬ್ರಿಕ್ಸ್ ಮಾರ್ಗಸೂಚಿಗಳ ಅಭಿವೃದ್ಧಿಯನ್ನು ಸಭೆ ಸ್ವಾಗತಿಸಿತು. ಹೆಚ್ಚುವರಿಯಾಗಿ, ಭಾರತದ ಸುಮಾರು 200 ಮಹಿಳಾ ವ್ಯಾಪಾರ ನಾಯಕರು ಬ್ರಿಕ್ಸ್ ಮಹಿಳಾ ವ್ಯಾಪಾರ ಒಕ್ಕೂಟದ (ಡಬ್ಲ್ಯುಬಿಎ) 2026 ರ ಚಟುವಟಿಕೆಗಳಲ್ಲಿ ಭಾಗವಹಿಸಿದರು, ಇದು ಮಹಿಳಾ ನೇತೃತ್ವದ ಉದ್ಯಮಗಳಿಗೆ ಹಣಕಾಸು, ಮಾರುಕಟ್ಟೆಗಳು, ತಂತ್ರಜ್ಞಾನ

> **“ಸಾಂಕ್ರಾಮಿಕ ರೋಗಗಳು, ಹವಾಮಾನ ವಿಪತ್ತುಗಳು ಮತ್ತು ಪೂರೈಕೆ ಸರಪಳಿ ಅಡೆತಡೆಗಳು ಇಂದಿನ ಅಂತರ್ ಸಂಪರ್ಕಿತ ಜಗತ್ತಿನಲ್ಲಿ, ಯಾವುದೇ ಬಿಕ್ಕಟ್ಟು ಒಂದೇ ಪ್ರದೇಶಕ್ಕೆ ಸೀಮಿತವಾಗಿಲ್ಲ ಎಂಬುದನ್ನು ತೋರಿಸಿದೆ. ಆದ್ದರಿಂದ, ಬ್ರಿಕ್ಸ್ ಗುಂಪಿನೊಳಗೆ ಬಿಕ್ಕಟ್ಟುಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು ನಾವು ವಿಶೇಷ ಒತ್ತು ನೀಡಿದ್ದೇವೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಮತ್ತು ಕೌಶಲ್ಯ ಅಭಿವೃದ್ಧಿಯ ಪ್ರವೇಶವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಯುವ ಉತ್ಸಾಹ ಮತ್ತು ಮಹಿಳಾ ನಾಯಕತ್ವದ ಈ ಪ್ರದರ್ಶನವು ಭಾರತದ ಅಧ್ಯಕ್ಷತೆಯಲ್ಲಿ, ಬ್ರಿಕ್ಸ್ ರಾಜತಾಂತ್ರಿಕತೆ ಮತ್ತು ಆರ್ಥಿಕತೆಯ ಕೇವಲ ವೇದಿಕೆಯನ್ನು ಮೀರಿ ವಿಕಸನಗೊಂಡಿದೆ ಎಂಬುದನ್ನು ವಿವರಿಸುತ್ತದೆ; ಇದು ಗುಂಪಿನ ನಿಜವಾದ ಭವಿಷ್ಯವನ್ನು ಪ್ರತಿನಿಧಿಸುವ ಲಕ್ಷಾಂತರ ಜನರನ್ನು ತಲುಪಿತು. ಇಪ್ಪತ್ತು ವರ್ಷಗಳ ಹಿಂದೆ ಭಾರತ ಸೇರಿದಂತೆ ನಾಲ್ಕು ರಾಷ್ಟ್ರಗಳು ಮೊದಲ ಬಾರಿಗೆ ಬ್ರಿಕ್ ಅನ್ನು ಕಲ್ಪಿಸಿಕೊಂಡಾಗ, ಈ ಗುಂಪು ಒಂದು ದಿನ ವಿಶ್ವದ ಅರ್ಧದಷ್ಟು ಜನಸಂಖ್ಯೆ ಮತ್ತು ಅದರ ಆರ್ಥಿಕತೆಯ ಶೇಕಡಾ 40 ರಷ್ಟನ್ನು

ಭಾರತವು 2014ರ ನಂತರ ಈ ಅಂತಾರಾಷ್ಟ್ರೀಯ ವೇದಿಕೆಗಳ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು

- 2016: ಭಾರತವು ಬ್ರಿಕ್ಸ್ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2018: ಭಾರತವು ಜನವರಿ 1, 2018 ರಿಂದ ಎರಡು ವರ್ಷಗಳ ಅವಧಿಗೆ ಅಂತಾರಾಷ್ಟ್ರೀಯ ಥರ್ಮೋನ್ಯೂಕ್ಲಿಯರ್ ಪ್ರಾಯೋಗಿಕ ರಿಯಾಕ್ಟರ್ (ಐಟಿಇಆರ್) ಕೌನ್ಸಿಲ್ ನ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2018-2020: ಭಾರತವು ಐಎಸ್ಎ ಅಸೆಂಬ್ಲಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿತು. ಫ್ರಾನ್ಸ್ ಸಹ ಅಧ್ಯಕ್ಷರಾಗಿ ಸೇವೆ ಸಲ್ಲಿಸಿತು.
- 2019: ಭಾರತವು ಕಿಂಬರ್ಲಿ ಪ್ರಕ್ರಿಯೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2019-2020 (GFDRR): ಭಾರತವು ವಿಪತ್ತು ಕಡಿತ ಮತ್ತು ಚೇತರಿಕೆಗಾಗಿ ಜಾಗತಿಕ ಸೌಲಭ್ಯ (GFDRR) ದ ಸಲಹಾ ಗುಂಪಿನ ಸಹ-ಅಧ್ಯಕ್ಷರಾಗಿ ಸೇವೆ ಸಲ್ಲಿಸಿತು.
- 2020-2021: ಭಾರತವು ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತು. ಡಾ. ಹರ್ಷವರ್ಧನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.
- 2020-2021: ಭಾರತವು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್ಒ) ಆಡಳಿತ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2020-2022: ಭಾರತ ಮತ್ತು ಫ್ರಾನ್ಸ್ ಐಎಸ್ಎ ಅಸೆಂಬ್ಲಿಯ ಅಧ್ಯಕ್ಷರು ಮತ್ತು ಸಹ-ಅಧ್ಯಕ್ಷರಾಗಿ ಮರು ಆಯ್ಕೆಯಾದವು.
- 2021: ಭಾರತವು 2021 ರ ಜನವರಿಯಿಂದ ಡಿಸೆಂಬರ್ ವರೆಗೆ ಬ್ರಿಕ್ಸ್ ಅಧ್ಯಕ್ಷ ಸ್ಥಾನವನ್ನು ಹೊಂದಿತ್ತು.
- 2021: ಭಾರತವು ಆಗಸ್ಟ್ 2021 ರಲ್ಲಿ ಯು.ಎನ್.ಎಸ್.ಸಿ.ಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು.
- 2022: ಭಾರತವು ಡಿಸೆಂಬರ್ 2022 ರಲ್ಲಿ ಯು.ಎನ್.ಎಸ್.ಸಿ.ಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು.
- 2022–2023: ಭಾರತವು ಸೆಪ್ಟೆಂಬರ್ 17, 2022 ರಿಂದ ಜುಲೈ 4, 2023 ರವರೆಗೆ ಶಾಂಘೈ ಸಹಕಾರ ಸಂಘಟನೆಯ (ಎಸ್ ಸಿ ಒ) ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು.
- 2022–2024: ಭಾರತವು ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್ಎ) ಅಸೆಂಬ್ಲಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿತು.
- 2022-2023: ಭಾರತವು ಡಿಸೆಂಬರ್ 1, 2022 ರಿಂದ ನವೆಂಬರ್ 30, 2023 ರವರೆಗೆ ಜಿ 20 ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು.
- 2023: ಭಾರತವು 2023 ರಲ್ಲಿ ವಾಸ್ಸೆನಾರ್ ವ್ಯವಸ್ಥೆಯ ಪೂರ್ಣ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು. ಭಾರತವು 2017 ರಲ್ಲಿ ಗುಂಪಿನ ಸದಸ್ಯತ್ವವನ್ನು ಪಡೆದುಕೊಂಡಿತು.
- 2024-2026: ಭಾರತವು 2024-26 ಅವಧಿಗೆ ಐಎಸ್ಎ ಅಸೆಂಬ್ಲಿಯ ಅಧ್ಯಕ್ಷತೆಯನ್ನು ಹೊಂದಿದೆ.
- 2024-2026: ಭಾರತವು 2024-26 ಅವಧಿಗೆ ಮೊದಲ ಬಾರಿಗೆ ಮೇ 29, 2024 ರಂದು ಕೊಲಂಬೊ ಪ್ರಕ್ರಿಯೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2024-2025: ಭಾರತವು ಜುಲೈ 2024 ರಲ್ಲಿ ಏಷ್ಯನ್ ವಿಪತ್ತು ಸನ್ನದ್ಧತೆ ಕೇಂದ್ರದ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2026: ಭಾರತವು 2026 ರ ಪ್ರಜಾಪ್ರಭುತ್ವ ಮತ್ತು ಮತದಾರರ ನೆರವು ಕುರಿತ ಅಂತಾರಾಷ್ಟ್ರೀಯ ಸಂಸ್ಥೆ (ಇಂಟರ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಅಂಡ್ ಎಲೆಕ್ಟೋರಲ್ ಅಸಿಸ್ಟೆನ್ಸ್)ಯ ಸದಸ್ಯ ರಾಷ್ಟ್ರಗಳ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತು.
- 2026: ಭಾರತವು ಜನವರಿ 1, 2026 ರಂದು ನಾಲ್ಕನೇ ಬಾರಿಗೆ ಬ್ರಿಕ್ಸ್ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿತು.

ಪ್ರತಿನಿಧಿಸುವ ವೇದಿಕೆಯಾಗಿ ವಿಕಸನಗೊಳ್ಳುತ್ತದೆ ಎಂದು ಕೆಲವರು ಊಹಿಸಿರಲಿಲ್ಲ.


2026 ರಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ನಡೆದ 18 ನೇ ಶೃಂಗಸಭೆಯು ಈ ಪ್ರಯಾಣದಲ್ಲಿ ಒಂದು ಪ್ರಮುಖ ಮೈಲಿಗಲ್ಲು ಎಂದು ಸಾಬೀತಾಯಿತು. ಭಾರತದ ಅಧ್ಯಕ್ಷತೆಯ ಅವಧಿಯಲ್ಲಿ, ಜವಾಬ್ದಾರಿಗಳನ್ನು ಆಕಾಂಕ್ಷೆಗಳೊಂದಿಗೆ ಜೋಡಿಸಲಾಯಿತು ಮತ್ತು ಸಾಮೂಹಿಕ ಶಕ್ತಿಯನ್ನು ಸ್ಪಷ್ಟವಾದ, ಪ್ರಾಯೋಗಿಕ ಫಲಿತಾಂಶಗಳಾಗಿ ಪರಿವರ್ತಿಸಲಾಯಿತು. ವರ್ಷದ ಅವಧಿಯಲ್ಲಿ 400 ಕ್ಕೂ ಹೆಚ್ಚು ಸಭೆಗಳು, ಡಜನ್ ಗಟ್ಟಲೆ ಘೋಷಣೆಗಳು ಮತ್ತು ಹಲವಾರು ಉಪಕ್ರಮಗಳ ಮೂಲಕ, ರೈತರು, ಮಹಿಳೆಯರು, ಯುವಕರು, ಉದ್ಯಮಿಗಳು ಮತ್ತು ಸಂಶೋಧಕರನ್ನು ತಲುಪಲು ಬ್ರಿಕ್ಸ್ ಸಹಕಾರವು ಸರ್ಕಾರಗಳನ್ನು ಮೀರಿ ವಿಸ್ತರಿಸಿದೆ ಎಂದು ಭಾರತ ತೋರಿಸಿದೆ. ಭಯೋತ್ಪಾದನೆಯ ವಿರುದ್ಧ ಸ್ಪಷ್ಟ ಮತ್ತು ದೃಢವಾದ ನಿಲುವು, ಜಾಗತಿಕ ಸಂಸ್ಥೆಗಳನ್ನು ಸುಧಾರಿಸುವ ಧ್ವನಿಯ ಬೇಡಿಕೆಗಳು, ಗಾಜಾ, ಸುಡಾನ್ ಮತ್ತು ಸಿರಿಯಾದಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಸಮತೋಲಿತ ರಾಜತಾಂತ್ರಿಕತೆ, ಜೊತೆಗೆ ನ್ಯೂ ಡೆವಲಪ್ಮೆಂಟ್ ಬ್ಯಾಂಕ್, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಕೃತಕ ಬುದ್ಧಿಮತ್ತೆ ಮತ್ತು ಹವಾಮಾನ ಸಹಕಾರದಂತಹ ಭವಿಷ್ಯದ ಕ್ಷೇತ್ರಗಳಲ್ಲಿನ ದೃಢವಾದ ಉಪಕ್ರಮಗಳು - ಈ ಎಲ್ಲಾ ಅಂಶಗಳು 'ನವದೆಹಲಿ ಘೋಷಣೆ'ಯನ್ನು ಐತಿಹಾಸಿಕ ದಾಖಲೆಯನ್ನಾಗಿ ಮಾಡಿದವು. ಭಾರತದ ಅಧ್ಯಕ್ಷತೆಯಲ್ಲಿ, ಬ್ರಿಕ್ಸ್ 2026 ಕೇವಲ ಯಶಸ್ವಿ ಶೃಂಗಸಭೆಯಾಗಿ ಮಾತ್ರವಲ್ಲದೆ ಸಮನ್ವಯ, ಸಾಮರಸ್ಯ ಮತ್ತು ಮಾನವೀಯತೆಯ ಸಾಮೂಹಿಕ ಜವಾಬ್ದಾರಿಯ ಅಳಿಸಲಾಗದ ಉದಾಹರಣೆಯಾಗಿದೆ. 2027 ರಲ್ಲಿ ನಾಯಕತ್ವದ ಹೊಣೆಯನ್ನು ಚೀನಾಕ್ಕೆ ವರ್ಗಾಯಿಸಿದರೆ, ಈ ವರ್ಷ ಭಾರತವು ಸ್ಥಾಪಿಸಿದ ಮಾನದಂಡಗಳು ಮತ್ತು ನಂಬಿಕೆಯು ಮುಂಬರುವ ವರ್ಷಗಳಲ್ಲಿ ಬ್ರಿಕ್ಸ್ ನ ದಿಕ್ಕು ಮತ್ತು ಪಥವನ್ನು ರೂಪಿಸುವುದನ್ನು ಮುಂದುವರಿಸುತ್ತದೆ.



ಪ್ರಧಾನಮಂತ್ರಿ ನರೇಂದ್ರ ಮೋದಿ: 25 ವರ್ಷಗಳ ಉತ್ತಮ ಆಡಳಿತ

25 ವರ್ಷಗಳ ಪಯಣ

ಸವಾಲುಗಳ ನಡುವೆಯೂ ದೃಢ ನಿರ್ಧಾರಗಳು ಮತ್ತು ಪರಿವರ್ತನೆಗೆ ಮುಡಿಪು



ಸ್ವತಂತ್ರ ಭಾರತದ ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು "ಸೇವೆಯೇ ಸಂಕಲ್ಪ" ಎಂಬುದನ್ನು ನವ ಭಾರತದ ಮಾರ್ಗದರ್ಶಿ ತತ್ವವನ್ನಾಗಿ ಮಾಡಿಕೊಂಡಿದ್ದಾರೆ. ಇಡೀ ದೇಶವನ್ನೇ ತಮ್ಮ ಸ್ವಂತ ಕುಟುಂಬವೆಂದು ಭಾವಿಸಿರುವ ಪ್ರಧಾನಿ ಮೋದಿ ಅವರಿಗೆ "ರಾಷ್ಟ್ರವೇ ಮೊದಲು" ಎಂಬುದೊಂದೇ ಪರಮ ಧ್ಯೇಯವಾಗಿದೆ. ಅವರ ನೇತೃತ್ವದ ಸರ್ಕಾರಕ್ಕೆ ಸಂವಿಧಾನವೇ ಪವಿತ್ರ ಗ್ರಂಥ, ಭಾರತಾಂಬೆಯ ಸೇವೆಯೇ ಭಕ್ತಿ, 140 ಕೋಟಿ ಜನರ ಜನಶಕ್ತಿಯೇ ಬಲ ಹಾಗೂ ಪ್ರತಿಯೊಬ್ಬ ಭಾರತೀಯನ ಸುರಕ್ಷತೆ ಮತ್ತು ಸಮೃದ್ಧಿಯೇ ಮೂಲ ಮೌಲ್ಯವಾಗಿದೆ. ಅವರ ಸರ್ಕಾರದ ಮೂಲ ಮಂತ್ರ: "ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಸಬ್ಕಾ ಪ್ರಯಾಸ್". ಈ ಉತ್ತಮ ಆಡಳಿತದ ತತ್ವವನ್ನು ಅವರು ಮೊದಲು 13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿ, ನಂತರ 12 ವರ್ಷ ಪ್ರಧಾನಮಂತ್ರಿಯಾಗಿ ಮುನ್ನಡೆಸುತ್ತಾ ದೇಶಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ. ಅಕ್ಟೋಬರ್ 7, 2001 ರಂದು ಅವರು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಪ್ರಮುಖ ಮೈಲಿಗಲ್ಲು ಅವರ 25 ವರ್ಷಗಳ ಸುದೀರ್ಘ, ಅಪರಿಮಿತ ಸೇವೆ ಮತ್ತು ಸಮರ್ಪಣಾ ಮನೋಭಾವದ ಯಶೋಗಾಥೆಯನ್ನು ಸೂಚಿಸುತ್ತದೆ. ಇಲ್ಲಿದೆ ಆ ಕುರಿತ ವಿಶೇಷ ವರದಿ...

ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು, ನರೇಂದ್ರ ಮೋದಿ ಅವರೊಂದಿಗೆ ಸುದೀರ್ಘ ಹಾಗೂ ನಿಕಟ ಒಡನಾಟ ಹೊಂದಿದ್ದು, ಅವರು ಒಮ್ಮೆ ಹೀಗೆ ಹೇಳಿದ್ದರು: "ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಒಬ್ಬ ಸಮರ್ಪಿತ ಕಾರ್ಯಕರ್ತನ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ; ಒಬ್ಬ ಮುತ್ಸದ್ದಿಯಂತೆ ದೇಶದ ಹಿರಿಮೆಯನ್ನು ಹೆಚ್ಚಿಸುತ್ತಾರೆ; ಒಬ್ಬ ನಿಜವಾದ ತಂಡದ ನಾಯಕನಂತೆ ಇಡೀ ದೇಶವನ್ನು ಮುನ್ನಡೆಸುತ್ತಾರೆ; ಭಾವನಾತ್ಮಕವಾಗಿ ಸ್ಪಂದಿಸುವ ನಾಯಕನಂತೆ ಸಹಾನುಭೂತಿಯಿಂದ ಸೂಕ್ಷ್ಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ; ಮತ್ತು ಒಬ್ಬ ನಿರ್ಭೀತ ಸೇನಾಧಿಪತಿಯಂತೆ ದೇಶದ ರಕ್ಷಣೆಗೆ ಅಚಲ ಬಂಡೆಯಾಗಿ ನಿಲ್ಲುತ್ತಾರೆ. ದೀಪದ ಜ್ವಾಲೆಯಂತೆ, ಅವರ ಆಲೋಚನೆಗಳು ಯಾವಾಗಲೂ ಮೇಲ್ಮುಖವಾಗಿಯೇ ಇರುತ್ತವೆ." ಈ ಮಾತುಗಳ ಹಿಂದಿನ ಸಂದೇಶ ಸ್ಪಷ್ಟವಾಗಿತ್ತು - ಅದೇನೆಂದರೆ, ಮೋದಿ ಅವರ ಸಾರ್ವಜನಿಕ ಜೀವನವು ಈ ಮೈಲಿಗಲ್ಲನ್ನು ತಲುಪುವ ಪ್ರಯಾಣದಲ್ಲಿ ಅನೇಕ ಏಳು-ಬೀಳುಗಳನ್ನು ಕಂಡಿದ್ದರೂ, ಅವರು ಎಲ್ಲೂ ನಿಲ್ಲಲಿಲ್ಲ. ರಾಜಕೀಯವನ್ನು ರಾಜತಾಂತ್ರಿಕತೆಯ ದೃಷ್ಟಿಕೋನದಿಂದ ಅಧ್ಯಯನ ಮಾಡಿ, ಅದನ್ನು ತಮ್ಮ ವೈಯಕ್ತಿಕ ಶಿಸ್ತನ್ನಾಗಿ ಮಾಡಿಕೊಂಡಿರುವುದು ಹಾಗೂ ಹಾದಿಯುದ್ದಕ್ಕೂ ಎಲ್ಲರನ್ನೂ ಒಳಗೊಳ್ಳುವಂತಹ ಹೊಸ ಅಭಿವೃದ್ಧಿಯ ಕಥನವನ್ನು ರೂಪಿಸಿರುವುದೇ ಅವರ ಈ ಸ್ಥಿರತೆಗೆ ಕಾರಣವಾಗಿದೆ. ಎಂದಿಗೂ ನಿಲ್ಲದೆ, ಎಂದಿಗೂ ದಣಿಯದೆ, ಎಂದಿಗೂ ಹಿಂಜರಿಯದೆ-ನಿರಂತರ ಪರಿಶ್ರಮದಿಂದ ಮುನ್ನಡೆಯುತ್ತಾ, ಹೊಸ ಗುರಿಗಳನ್ನು ನಿಗದಿಪಡಿಸುತ್ತಾ ಮತ್ತು ಅಭಿವೃದ್ಧಿಯ ಒಂದು ಶಕ್ತಿಶಾಲಿ ಕಥೆಯನ್ನು ಬರೆಯಲು ಆ ಗುರಿಗಳನ್ನು ಪೂರ್ಣಗೊಳಿಸುವುದು ಪ್ರಧಾನಿ ಮೋದಿ ಅವರ ನಾಯಕತ್ವದ ವಿಶೇಷ ಹೆಗ್ಗುರುತಾಗಿದೆ. ಅವರ ಸ್ವಂತ ಕುಟುಂಬವು ಇಂದಿಗೂ ಸಾಮಾನ್ಯ ಜೀವನವನ್ನೇ ನಡೆಸುತ್ತಿದೆ, ಏಕೆಂದರೆ ಅವರಿಗೆ ದೇಶದ 140 ಕೋಟಿಗೂ ಹೆಚ್ಚು ನಾಗರಿಕರೆಲ್ಲರೂ ತಮ್ಮದೇ ಕುಟುಂಬವಾಗಿದ್ದಾರೆ.

ಈ ಅಕ್ಟೋಬರ್ 7ಕ್ಕೆ ನರೇಂದ್ರ ಮೋದಿ ಅವರು ಸರ್ಕಾರದ ಮುಖ್ಯಸ್ಥರಾಗಿ 25 ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಈ 25 ವರ್ಷಗಳ ಪ್ರಯಾಣವನ್ನು ಕೇವಲ ಅವರು ವಹಿಸಿಕೊಂಡ ರಾಜಕೀಯ ಹುದ್ದೆಗಳು ಮತ್ತು ಗಳಿಸಿದ ಚುನಾವಣಾ ಗೆಲುವುಗಳ ಸರಣಿಯಾಗಿ ನೋಡಲಾಗುವುದಿಲ್ಲ; ಇದು ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳ ನಡುವೆ ತೆಗೆದುಕೊಂಡ ನಿರ್ಧಾರಗಳು ಮತ್ತು ಅವುಗಳಿಂದ ಹೊರಹೊಮ್ಮಿದ ಹೊಸ ಹಾದಿಗಳ ಕಥೆಯೂ ಹೌದು. ಅವರ ಈ ಪ್ರಯಾಣವು ಗುಜರಾತ್‌ನಲ್ಲಿ ಭೂಕಂಪ, ಬಡತನ/ಬರಗಾಲ, ನೀರಿನ ಅಭಾವ ಮತ್ತು ಕೋಮು ಹಿಂಸಾಚಾರದಂತಹ ತೀವ್ರ ಸವಾಲುಗಳ ಹಿನ್ನೆಲೆಯಲ್ಲಿ ಪ್ರಾರಂಭವಾಯಿತು. ತದನಂತರ, ರಾಜ್ಯವು ಭಯೋತ್ಪಾದನೆ ಮತ್ತು ಪ್ರವಾಹದಂತಹ ವಿಕೋಪಗಳೊಂದಿಗೆ ಹೆಣಗಾಡುತ್ತಲೇ ಹೊಸ ಹಾದಿಯನ್ನು ಕಂಡುಕೊಂಡಿತು. ರಾಷ್ಟ್ರಮಟ್ಟದಲ್ಲಿ, ಆರ್ಥಿಕ ಸುಧಾರಣೆಗಳು, ಬ್ಯಾಂಕಿಂಗ್ ಕ್ಷೇತ್ರ, ನಕ್ಸಲಿಸಂ, ಗಡಿ ಸವಾಲುಗಳು, ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿ, ಸಾಂಕ್ರಾಮಿಕ ರೋಗ (ಕೊರೊನಾ) ಮತ್ತು ಜಾಗತಿಕ ಸಂಘರ್ಷಗಳಂತಹ ವಿಷಯಗಳು ಅವರ ನಾಯಕತ್ವವನ್ನು ಪರೀಕ್ಷೆಗೆ ಒಡ್ಡಿದವು. ಆದಾಗ್ಯೂ, ಈ 25 ವರ್ಷಗಳಲ್ಲಿ ಒಂದು ಸ್ಥಿರವಾದ ಅಂಶ ಎದ್ದು ಕಾಣುತ್ತದೆ: ಅದೇನೆಂದರೆ, ಬಿಕ್ಕಟ್ಟುಗಳನ್ನು ಅಡೆತಡೆಗಳಾಗಿ ನೋಡದೆ, ಬದಲಾವಣೆಯ ಅವಕಾಶಗಳಾಗಿ ಪರಿವರ್ತಿಸುವುದು. ವಾಸ್ತವವಾಗಿ, ಪ್ರಧಾನಿ ಮೋದಿ ಅವರು ದೇಶದ ಏಳಿಗೆ ಮತ್ತು ಅದರ ಘನತೆಯನ್ನು ಹೆಚ್ಚಿಸಲು ಸಮರ್ಪಿತರಾದ ಒಬ್ಬ ಆದರ್ಶಪ್ರಾಯ ನಾಯಕನಾಗಿ ತಮ್ಮನ್ನು ತಾವು ಸ್ಥಾಪಿಸಿಕೊಂಡಿದ್ದಾರೆ. ಆಡಳಿತದಲ್ಲಿ ತಮ್ಮ 25 ವರ್ಷಗಳ ಪ್ರಯಾಣದಲ್ಲಿ, ಅವರು ವಿಷಯಗಳನ್ನು ತುಣುಕುಗಳನ್ನಾಗಿ ನೋಡುವ ಬದಲು ಸಮಗ್ರವಾಗಿ ಆಲೋಚಿಸುವ; ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಆಲೋಚನೆಗಳು ಸಾಕಾರಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಒಬ್ಬ ದೂರದೃಷ್ಟಿಯ ನಾಯಕನಾಗಿ ಬೆಳೆದಿದ್ದಾರೆ.

ಗುಜರಾತ್ ನ ಮುಖ್ಯಮಂತ್ರಿಯಾದ ನಂತರ, ಅವರು ಶಾಲಾ ಶಿಕ್ಷಣಕ್ಕೆ ವಿಶೇಷ ಒತ್ತು ನೀಡುವ ಮೂಲಕ ಅಭಿವೃದ್ಧಿಯ ವಿಶಿಷ್ಟ ಮಾದರಿಯನ್ನು ರೂಪಿಸುವತ್ತ ಕೆಲಸ ಮಾಡಲು ಪ್ರಾರಂಭಿಸಿದರು. ಆದಾಗ್ಯೂ, ಗುಜರಾತ್ ಗಲಭೆಗಳು ಅವರ ವಿರೋಧಿಗಳಿಗೆ ಅವರ ವಿರುದ್ಧ ಸಂಘಟಿತ ದಾಳಿ ನಡೆಸಲು ಅವಕಾಶ ಮಾಡಿಕೊಟ್ಟವು. ಆದರೆ, ಪ್ರಧಾನಿ ಮೋದಿ ಈ ತೀವ್ರ ದಾಳಿಗಳಿಗೆ ಕುಗ್ಗಲಿಲ್ಲ; ಬದಲಾಗಿ, ದೃಢ ಸಂಕಲ್ಪದಿಂದ ತಮ್ಮ ಕೆಲಸವನ್ನು ಮುಂದುವರಿಸಿದರು. ಪರಿಣಾಮವಾಗಿ, ಅವರ ವಿರೋಧಿಗಳು ಪದೇ ಪದೇ ಸೋಲನುಭವಿಸಬೇಕಾಯಿತು. ಪ್ರಧಾನಿ ಮೋದಿ ಅವರಲ್ಲಿರುವ ಯಾವ ಗುಣವು ಅವರ ವಿರೋಧಿಗಳಿಗೆ ಅವರನ್ನು ಕಟ್ಟಿಹಾಕಲು ಬಿಡುವುದಿಲ್ಲ? ಇದನ್ನು ಅರ್ಥಮಾಡಿಕೊಳ್ಳಲು, ಅವರ ಕೆಲಸದ ಶೈಲಿ ಮತ್ತು ಅವರ ಆಲೋಚನಾ ಪ್ರಕ್ರಿಯೆಯ ಸೂಕ್ಷ್ಮ ವ್ಯತ್ಯಾಸಗಳನ್ನು ಗಮನಿಸಬೇಕು. ವಾಸ್ತವವಾಗಿ, ಪ್ರಧಾನಿ ಮೋದಿ ಅವರು ಯಾವುದೇ ಯೋಜನೆಯನ್ನು ಪರಿಗಣಿಸಿದಾಗ, ಮೊದಲು ಅದರ ಅಂತಿಮ ಫಲಿತಾಂಶವನ್ನು ಕಲ್ಪಿಸಿಕೊಂಡು ಪ್ರಾರಂಭಿಸುತ್ತಾರೆ - ಅಂದರೆ, ಒಂದು ನೀತಿ, ಹೇಳಿಕೆ ಅಥವಾ ಯೋಜನೆಯನ್ನು ನೆಲಮಟ್ಟದಲ್ಲಿ ಜಾರಿಗೊಳಿಸಿದಾಗ ಅದು ಎಂತಹ ಪ್ರಭಾವ ಬೀರುತ್ತದೆ ಎಂಬುದನ್ನು ಅವರು ಮೌಲ್ಯಮಾಪನ ಮಾಡುತ್ತಾರೆ. ಈ ವಿಶಿಷ್ಟ ವಿಧಾನವು ಅವರನ್ನು ಇತರ ರಾಜಕಾರಣಿಗಳಿಗಿಂತ ಭಿನ್ನವಾಗಿಸುತ್ತದೆ. ಈ ಮನಸ್ಥಿತಿಯ ಫಲಿತಾಂಶವೇನೆಂದರೆ, ಪ್ರಧಾನಿ ಮೋದಿ ಅವರು ಯಾವುದೇ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಂಪೂರ್ಣ ಸಿದ್ಧರಾದಾಗ ಮಾತ್ರ ಅದನ್ನು ಅನಾವರಣಗೊಳಿಸುತ್ತಾರೆ.

ಈ ಅವಧಿಯು ಕೇವಲ 25 ವರ್ಷಗಳ ಪಯಣವಷ್ಟೇ ಅಲ್ಲ, ಬದಲಾಗಿ ಸೇವೆ, ಉತ್ತಮ ಆಡಳಿತ ಮತ್ತು ಬಡವರ ಕಲ್ಯಾಣಕ್ಕೆ ಸಮರ್ಪಿತವಾದ ಒಂದು ಮಹಾ ಅಭಿಯಾನವಾಗಿದೆ. ಇದು ರಾಷ್ಟ್ರೀಯ ಅಭಿವೃದ್ಧಿಗಾಗಿ ಮಾಡಿದ ಮರೆಯಲಾಗದ ಉಪಕ್ರಮಗಳನ್ನು ಒಳಗೊಂಡಿದೆ – ವಂಚಿತ ವರ್ಗಗಳ ಕಲ್ಯಾಣ ಮತ್ತು ಮಧ್ಯಮ ವರ್ಗದ ಸಬಲೀಕರಣದಿಂದ ಹಿಡಿದು ಮಹಿಳಾ ಸಬಲೀಕರಣ ಮತ್ತು 'ನಾರಿ ಶಕ್ತಿ'ಯ ನೇತೃತ್ವದ ಅಭಿವೃದ್ಧಿಯವರೆಗೆ ಇವು ವ್ಯಾಪಿಸಿವೆ. ಇದರಲ್ಲಿ ರೈತ ಸ್ನೇಹಿ ನೀತಿಗಳ ಮೂಲಕ ಕೃಷಿಯ ಪ್ರತಿಯೊಂದು ಹಂತದಲ್ಲೂ ರೈತರ ಕಳಕಳಿಗಳನ್ನು ಪರಿಹರಿಸುವುದು, ಯುವಜನರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಸಾಮಾಜಿಕ ನ್ಯಾಯವನ್ನು ಖಚಿತಪಡಿಸುವುದು ಸೇರಿವೆ. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸುವ ಗುರಿಗೆ ಈ ಯುಗವು ಬುನಾದಿಯಾಗಿದೆ. ಪ್ರತಿಯೊಂದು ಯೋಜನೆಯಲ್ಲೂ ಪ್ರಧಾನಿ ಮೋದಿಯವರ ಸ್ವಂತ ಜೀವನದ ಛಾಪು ಎದ್ದು ಕಾಣುತ್ತದೆ; ಅವರು ಸ್ವತಃ ಕಠಿಣ ಹೋರಾಟದ ಬದುಕನ್ನು ಕಂಡವರು ಮತ್ತು ಆ ಸಂಕಷ್ಟಗಳನ್ನು ನೇರವಾಗಿ ಅನುಭವಿಸಿದವರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಗುಜರಾತಿನ ಮುಖ್ಯಮಂತ್ರಿಯಿಂದ ಪ್ರಧಾನ ಮಂತ್ರಿಯವರೆಗಿನ ಅವರ ಪಯಣವನ್ನು ಹೀಗೆ ವಿವರಿಸಬಹುದು: ಅವರು ಅಭಿವೃದ್ಧಿಯ ಚಿಂತನೆಯನ್ನು ಮುಖ್ಯವಾಹಿನಿಗೆ ತಂದರು, ವಿವಿಧ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಿದರು ಹಾಗೂ ದೇಶದ ರಾಜಕೀಯ, ಕಾರ್ಯನಿರ್ವಹಣಾ ತಂತ್ರಗಳು ಮತ್ತು ರಾಷ್ಟ್ರೀಯ ನೀತಿಯಲ್ಲಿ ಅಭಿವೃದ್ಧಿಯನ್ನು ಪ್ರಮುಖ ಆಧಾರಸ್ತಂಭವನ್ನಾಗಿ ಸ್ಥಾಪಿಸಿದರು.

ಪ್ರಧಾನಿ ಮೋದಿಯವರ ವಿಶಿಷ್ಟ ಕಾರ್ಯಶೈಲಿ, ಕ್ರಮಗಳು ಮತ್ತು ಅವುಗಳ ಫಲಿತಾಂಶಗಳ ಮೂಲಕ ಅವರ 25 ವರ್ಷಗಳ ಆಡಳಿತದ ಪಯಣವನ್ನು ನಾವೀಗ ಅವಲೋಕಿಸೋಣ...

25 ಸವಾಲುಗಳು, 25 ವರ್ಷಗಳು ನಾಯಕನೊಬ್ಬನ ಪಯಣ

ಈ 25 ವರ್ಷಗಳ ಪ್ರಯಾಣವು ಕೇವಲ 25 ಸವಾಲುಗಳ ಪಟ್ಟಿಯಲ್ಲ; ಇದು ಬಿಕ್ಕಟ್ಟುಗಳ ನಡುವೆ ತೆಗೆದುಕೊಂಡ ನಿರ್ಧಾರಗಳು ಮತ್ತು ಅದರಿಂದಾದ ಬದಲಾವಣೆಗಳ ಕಥೆಯಾಗಿದೆ. ಬಿಕ್ಕಟ್ಟನ್ನು ಕೊನೆ ಎಂದು ನೋಡದೆ, ಹೊಸ ಸಂಕಲ್ಪದ ಆರಂಭವಾಗಿ ನೋಡುವುದೇ ಈ ಪಯಣದ ಮಾರ್ಗದರ್ಶಿ ಸೂತ್ರವಾಗಿದೆ. ಈ ತತ್ವದೊಂದಿಗೆ, ಪ್ರಧಾನಮಂತ್ರಿ ಮೋದಿಯವರು ಕಳೆದ 25 ವರ್ಷಗಳಲ್ಲಿ ದೇಶವನ್ನು ಮುನ್ನಡೆಸಿದ್ದಾರೆ...

1. ಗುಜರಾತ್‌ನಲ್ಲಿ ಎದುರಾದ ಸವಾಲುಗಳು: ಹೊಸ ಆರಂಭಕ್ಕೊಂದು ಅವಕಾಶ

ಅಕ್ಟೋಬರ್ 2001 ರಲ್ಲಿ, ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆ ಸಮಯದಲ್ಲಿ ರಾಜ್ಯವು ಭೂಕಂಪ, ಬರಗಾಲ ಮತ್ತು ಸಹಕಾರಿ ಬ್ಯಾಂಕ್ ಬಿಕ್ಕಟ್ಟಿನಿಂದ ಸಂಕಷ್ಟಕ್ಕೊಳಗಾಗಿತ್ತು. ಪುನರ್ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಲು ಹಿರಿಯ ಅಧಿಕಾರಿಗಳನ್ನು ಕಚ್‌ಗೆ ಕಳುಹಿಸಲಾಯಿತು. ಚೆಕ್ ಡ್ಯಾಮ್‌ಗಳು, ಕಾಲುವೆಗಳ ವಿಸ್ತರಣೆ ಮತ್ತು ಜಲ ಸಂರಕ್ಷಣೆಗೆ ಆದ್ಯತೆ ನೀಡಲಾಯಿತು. 2003 ರಲ್ಲಿ, ದೇಶದ ಮೊದಲ ರಾಜ್ಯ ವಿಪತ್ತು ನಿರ್ವಹಣಾ ಕಾಯ್ದೆಯನ್ನು ಜಾರಿಗೆ ತರಲಾಯಿತು.

2. ಹಿಂಸಾಚಾರದಿಂದ ಮುಕ್ತಿ

ಫೆಬ್ರವರಿ 2002 ರ ಗೋಧ್ರಾ ಘಟನೆ ಮತ್ತು ತದನಂತರದ ಹಿಂಸಾಚಾರವು ಗಂಭೀರವಾದ ಪರಿಸ್ಥಿತಿಯನ್ನು ಸೃಷ್ಟಿಸಿತು. ಮುಖ್ಯಮಂತ್ರಿ ನರೇಂದ್ರ ಮೋದಿಯವರು ಕಾನೂನು ಮತ್ತು ಸುವ್ಯವಸ್ಥೆ, ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿಯತ್ತ ಗಮನ ಹರಿಸುವ ಮೂಲಕ ಹಿಂಸಾಚಾರಕ್ಕೆ ತಡೆ ಒಡ್ಡಿದರು; ಕಳೆದ 24 ವರ್ಷಗಳಲ್ಲಿ ಅಂತಹ ಹಿಂಸಾಚಾರವು ಮತ್ತೆ ಸಂಭವಿಸಿಲ್ಲ.



3. ಮೊದಲ ಚುನಾವಣಾ ಪರೀಕ್ಷೆ: ಮತ್ತಷ್ಟು ಪ್ರಬಲವಾಗಿ ಹೊರಹೊಮ್ಮಿದ್ದು

2002 ರಲ್ಲಿ, ನರೇಂದ್ರ ಮೋದಿಯವರು ವಿಧಾನಸಭೆಯನ್ನು ವಿಸರ್ಜಿಸಿ, ಕೇವಲ 14 ತಿಂಗಳ ಕೆಲಸದ ಆಧಾರದ ಮೇಲೆ ಜನಾದೇಶವನ್ನು ಕೋರಿದರು. ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ, ಬಿಜೆಪಿ 182 ಸ್ಥಾನಗಳಲ್ಲಿ 127 ಸ್ಥಾನಗಳನ್ನು ಗೆದ್ದು, ಶೇಕಡಾ 49.85 ರಷ್ಟು ಮತಗಳನ್ನು ಪಡೆಯಿತು.

4. ಭಯೋತ್ಪಾದನೆಯ ಬೆದರಿಕೆಯ ನಡುವೆಯೂ ಸ್ಥಿರತೆ

ಸೆಪ್ಟೆಂಬರ್ 2002 ರಲ್ಲಿ ಅಕ್ಷರಧಾಮದ ಮೇಲೆ ದಾಳಿ ನಡೆಯಿತು, ತದನಂತರ ಜುಲೈ 2008 ರಲ್ಲಿ ಅಹಮದಾಬಾದ್‌ನಲ್ಲಿ ಕೇವಲ 70 ನಿಮಿಷಗಳ ಅವಧಿಯಲ್ಲಿ 21 ಬಾಂಬ್ ಸ್ಫೋಟಗಳು ಸಂಭವಿಸಿದವು. ಅಧಿಕಾರಿಗಳು ಈ ಘಟನೆಗಳು ಕೋಮು ಹಿಂಸಾಚಾರವಾಗಿ ಹರಡದಂತೆ ತಡೆದರು, ಭದ್ರತೆಯನ್ನು ಬಲಪಡಿಸಿದರು ಮತ್ತು ರಾಜ್ಯದ ಅಭಿವೃದ್ಧಿಯ ಹಾದಿಯನ್ನು ಕಾಯ್ದುಕೊಂಡರು.

5. ನೀರಿನ ಅಭಾವದಿಂದ ಜಲ ಭದ್ರತೆಯತ್ತ

1961 ರ ನಂತರ ನರ್ಮದಾ ಅಣೆಕಟ್ಟು ಯೋಜನೆ ದಶಕಗಳ ಕಾಲ ಸ್ಥಗಿತಗೊಂಡಿತ್ತು. 1,80,000 ಕ್ಕೂ ಹೆಚ್ಚು ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಯಿತು ಮತ್ತು 'ಸುಜಲಾಂ ಸುಫಲಾಂ' ಹಾಗೂ 'ಸೌನಿ' ಯಂತಹ ಯೋಜನೆಗಳ ಮೂಲಕ ನೀರನ್ನು ಪೂರೈಸಲಾಯಿತು. 2017 ರಲ್ಲಿ ಅಣೆಕಟ್ಟು ತನ್ನ ಪೂರ್ಣ ಎತ್ತರವನ್ನು ತಲುಪಿತು, ಇದರಿಂದ 9,000 ಕ್ಕೂ ಹೆಚ್ಚು ಹಳ್ಳಿಗಳಿಗೆ ಮತ್ತು 170 ಕ್ಕೂ ಹೆಚ್ಚು ನಗರಗಳಿಗೆ ಕುಡಿಯುವ ನೀರನ್ನು ಪೂರೈಸಲಾಯಿತು. ಕೇವಲ ನೀರಿಗಾಗಿ ಕಾಯುವ ಬದಲು, ಗುಜರಾತ್ ನೀರು ನಿರ್ವಹಣೆಯೊಂದಿಗೆ ಅಭಿವೃದ್ಧಿಯನ್ನೂ ಮುನ್ನಡೆಸಲು ಪ್ರಾರಂಭಿಸಿತು.

6. ಪ್ರವಾಹದ ನಂತರದ ಹೊಸ ವ್ಯವಸ್ಥೆ

2006 ರಲ್ಲಿ, ತಾಪಿ ನದಿಯ ಪ್ರವಾಹವು ಸೂರತ್‌ನ ಸುಮಾರು ಶೇಕಡಾ 95 ರಷ್ಟು ಭಾಗವನ್ನು ಮುಳುಗಿಸಿತು. ಇದು ಒಳಚರಂಡಿ ವ್ಯವಸ್ಥೆ ಮತ್ತು ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆಗಳನ್ನು ಬಲಪಡಿಸಲು ಪ್ರೇರೇಪಿಸಿತು. ಎಂಟು ವರ್ಷಗಳ ನಂತರ, ಜಮ್ಮು ಮತ್ತು ಕಾಶ್ಮೀರದ ಪ್ರವಾಹದ ಸಮಯದಲ್ಲಿ, ಪ್ರಧಾನಿ ನರೇಂದ್ರ ಮೋದಿಯವರು ಶ್ರೀನಗರಕ್ಕೆ ಭೇಟಿ ನೀಡಿದರು ಮತ್ತು ನಂತರ ದೀಪಾವಳಿಯನ್ನು ಆಚರಿಸಲು ಅಲ್ಲಿಗೆ ಮರಳಿದರು. ಪ್ರತಿಯೊಂದು ಸನ್ನಿವೇಶದಲ್ಲೂ ಅವರ ವಿಧಾನ ಒಂದೇ ಆಗಿತ್ತು: ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು, ತ್ವರಿತವಾಗಿ ಕಾರ್ಯನಿರ್ವಹಿಸುವುದು ಮತ್ತು ವಾಸ್ತವದ ಸಂಕೀರ್ಣತೆಗಳನ್ನು ಪರಿಹರಿಸುವುದು.

7. ಆರೋಪಗಳ ನಡುವೆಯೂ ಬದಲಾವಣೆಯ ದಶಕ

2002ರ ನಂತರ, ನರೇಂದ್ರ ಮೋದಿಯವರು ಹಲವಾರು ಆರೋಪಗಳನ್ನು ಎದುರಿಸಿದರು, ಆದರೂ ಅವರು ಪ್ರತೀಕಾರ ತೀರಿಸಿಕೊಳ್ಳುವ ಬದಲು ತಮ್ಮ ಕೆಲಸವೇ ಅದಕ್ಕೆ ಉತ್ತರವಾಗಲಿ ಎಂದು ನಿರ್ಧರಿಸಿದರು. ಗುಜರಾತ್ ನ ಜನತೆ 2007 ಮತ್ತು 2012 ಎರಡೂ ಚುನಾವಣೆಗಳಲ್ಲಿಯೂ ಅವರನ್ನು ಮತ್ತೆ ಆಯ್ಕೆ ಮಾಡಿದರು.

8. ಪಾಟ್ನಾ ಬಾಂಬ್ ಸ್ಫೋಟಗಳು

ಅಕ್ಟೋಬರ್ 27, 2013 ರಂದು, ಪಾಟ್ನಾದಲ್ಲಿ ನಡೆದ ಸಮಾವೇಶವೊಂದರ ಸಮೀಪದಲ್ಲಿ ಏಳು ಬಾಂಬ್ ಸ್ಫೋಟಗಳು ಸಂಭವಿಸಿ, ಆರು ಜನರು ಸಾವನ್ನಪ್ಪಿದರು ಮತ್ತು 85 ಜನರು ಗಾಯಗೊಂಡರು. ಸ್ಫೋಟಗಳು ನಡೆದಾಗಲೂ ಮೋದಿಯವರು ತಮ್ಮ ಭಾಷಣವನ್ನು ಮುಂದುವರಿಸಿ, ಸಮಾವೇಶವನ್ನು ಪೂರ್ಣಗೊಳಿಸಿದರು ಹಾಗೂ ಜನರಲ್ಲಿ ಶಾಂತಿ ಕಾಪಾಡುವಂತೆ ಮನವಿ ಮಾಡಿದರು.

9. 30 ವರ್ಷಗಳ ನಂತರ ಸ್ಪಷ್ಟ ಬಹುಮತದ ಸರ್ಕಾರ

ನರೇಂದ್ರ ಮೋದಿಯವರು ಒಂಬತ್ತು ತಿಂಗಳ ಅವಧಿಯಲ್ಲಿ ಸುಮಾರು 400 ರ್ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರು ಮತ್ತು 3,00,000 ಕಿಲೋಮೀಟರ್ ಪ್ರಯಾಣಿಸಿದರು. 2014 ರಲ್ಲಿ, ಬಿಜೆಪಿ 282 ಸ್ಥಾನಗಳನ್ನು ಗೆದ್ದುಕೊಂಡಿತು, ಇದರ ಪರಿಣಾಮವಾಗಿ 30 ವರ್ಷಗಳ ಅಂತರದ ನಂತರ ಸ್ಪಷ್ಟ ಬಹುಮತದ ಸರ್ಕಾರ ರಚನೆಯಾಯಿತು.

10. 'ಫ್ರಾಜೈಲ್ ಫೈವ್' (ದುರ್ಬಲ ಐದು) ನಿಂದ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯತ್ತ

2013ರಲ್ಲಿ, ಭಾರತವು ಶೇಕಡಾ 10ರಷ್ಟಿದ್ದ ಹಣದುಬ್ಬರದೊಂದಿಗೆ 'ಫ್ರಾಜೈಲ್ ಫೈವ್' ದೇಶಗಳ ಪಟ್ಟಿಯಲ್ಲಿ ಸೇರಿತ್ತು. ಹಣದುಬ್ಬರ ನಿಯಂತ್ರಣ, ಐಬಿಸಿ ಮತ್ತು ಜಿ.ಎಸ್.ಟಿಯಂತಹ ಸುಧಾರಣೆಗಳ ನಂತರ, ವಿವಿಧ ಜಾಗತಿಕ ಬಿಕ್ಕಟ್ಟುಗಳ ನಡುವೆಯೂ ಅರ್ಥವ್ಯವಸ್ಥೆಯು ಬೆಳವಣಿಗೆಯನ್ನು ಕಾಯ್ದುಕೊಂಡಿತು; 2027ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಬೆಳವಣಿಗೆಯ ದರವು ಶೇಕಡಾ 7.8 ರಷ್ಟಿತ್ತು.

11. ಸುಲಭವಾಗಿ ವ್ಯಾಪಾರ ಮಾಡುವ ವಾತಾವರಣ

2014ರಲ್ಲಿ, 'ಈಸ್ ಆಫ್ ಡೂಯಿಂಗ್ ಬಿಸಿನೆಸ್' (ಸುಲಭವಾಗಿ ವ್ಯಾಪಾರ ಮಾಡುವ ವಾತಾವರಣ) ಸೂಚ್ಯಂಕದಲ್ಲಿ ಭಾರತವು 142ನೇ ಸ್ಥಾನದಲ್ಲಿತ್ತು. ಜಿಎಸ್ಟಿ, ಡಿಜಿಟಲ್ ಅನುಮೋದನೆಗಳು, ಸಾಗಣೆ ಕಾರಿಡಾರ್‌ಗಳು ಮತ್ತು ಐಬಿಸಿಯಂತಹ ಉಪಕ್ರಮಗಳು ಭಾರತವು 2020 ರ ವೇಳೆಗೆ 63 ನೇ ಸ್ಥಾನಕ್ಕೆ ಏರಲು ನೆರವಾದವು.

12. ಬ್ಯಾಂಕಿಂಗ್ ಕ್ಷೇತ್ರದ ಶುದ್ಧೀಕರಣ

'ಫೋನ್ ಬ್ಯಾಂಕಿಂಗ್' ಮತ್ತು 'ಲೋನ್ ಎವರ್ ಗ್ರೀನಿಂಗ್' (ಹಳೆಯ ಸಾಲ ತೀರಿಸಲು ಹೊಸ ಸಾಲ ನೀಡುವುದು) ನಂತಹ ಪದ್ಧತಿಗಳು ಬ್ಯಾಂಕುಗಳ ನೈಜ ಸ್ಥಿತಿಯನ್ನು ಮರೆಮಾಚಿದ್ದವು. ಆಸ್ತಿಯ ಗುಣಮಟ್ಟದ ಪರಿಶೀಲನೆಯು ವಸೂಲಾಗದ ಸಾಲಗಳು ಸುಮಾರು ಶೇಕಡಾ 15 ರಷ್ಟಿವೆ ಎಂಬುದನ್ನು ಬಹಿರಂಗಪಡಿಸಿತು. '4R' ಸುಧಾರಣಾ ತಂತ್ರವನ್ನು ಅಳವಡಿಸಿಕೊಳ್ಳಲಾಯಿತು, ಇದನ್ನು ಐಬಿಸಿ ಮತ್ತಷ್ಟು ಬಲಪಡಿಸಿತು.

13. ನಕ್ಸಲಿಸಂ ಅಂತ್ಯ

2010ರ ದಂತೇವಾಡ ದಾಳಿಯಲ್ಲಿ 76 ಭದ್ರತಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದರು; 2014 ರಲ್ಲಿ 126 ಜಿಲ್ಲೆಗಳು ನಕ್ಸಲ್ ಪೀಡಿತವಾಗಿದ್ದವು. ಭದ್ರತಾ ಕಾರ್ಯಾಚರಣೆಗಳ ಜೊತೆಗೆ ರಸ್ತೆಗಳು, ಶಾಲೆಗಳು ಮತ್ತು ಬ್ಯಾಂಕಿಂಗ್ ಸೌಲಭ್ಯಗಳನ್ನು ವಿಸ್ತರಿಸಲಾಯಿತು, ಇದರಿಂದಾಗಿ ಪ್ರತಿವರ್ಷ ಮುಖ್ಯವಾಹಿನಿಗೆ ಮರಳುವ ವ್ಯಕ್ತಿಗಳ ಸಂಖ್ಯೆ 421 ರಿಂದ 6,558 ಕ್ಕೆ ಏರಿಕೆಯಾಯಿತು. ಮಾರ್ಚ್ 2026 ರ ವೇಳೆಗೆ, ಯಾವುದೇ ಜಿಲ್ಲೆಯೂ ನಕ್ಸಲ್ ಪೀಡಿತವಾಗಿ ಉಳಿಯಲಿಲ್ಲ.

14. ಸಾರ್ವಭೌಮತ್ವದ ರಕ್ಷಣೆ

2017ರಲ್ಲಿ ಡೋಕ್ಲಮ್ ನಲ್ಲಿ ಭಾರತ ಮತ್ತು ಚೀನಾ ಪಡೆಗಳ ನಡುವಿನ 73 ದಿನಗಳ ಮುಖಾಮುಖಿಯಿಂದಾಗಿ ಉದ್ವಿಗ್ನತೆ ಉಂಟಾಯಿತು, ಆದರೆ ಭಾರತ ಹಿಂದೆ ಸರಿಯಲಿಲ್ಲ. 2020ರ ಗಲ್ವಾನ್ ಘಟನೆಯ ಸಂದರ್ಭದಲ್ಲೂ ಸೇನೆ ದೃಢವಾಗಿ ನಿಂತಿತು. 'ರಾಷ್ಟ್ರವೇ ಮೊದಲು' ಎಂಬುದು ಮಾರ್ಗದರ್ಶಕ ತತ್ವವಾಯಿತು.

15. ಜಿ ಎಸ್ ಟಿ: ಒಂದು ರಾಷ್ಟ್ರ, ಒಂದು ತೆರಿಗೆ ವ್ಯವಸ್ಥೆ

17 ವರ್ಷಗಳ ಸುದೀರ್ಘ ಪ್ರಯತ್ನದ ಫಲವಾಗಿ ಜುಲೈ 2017ರಲ್ಲಿ ಜಿ ಎಸ್ ಟಿ ಜಾರಿಗೆ ಬಂದಿತು. ಹಳೆಯ ಬಾಕಿಗಳನ್ನು ಪಾವತಿಸುವ ಮತ್ತು ಆದಾಯದ ಬೆಳವಣಿಗೆಯನ್ನು ಖಾತ್ರಿಪಡಿಸುವ ನಿಬಂಧನೆಗಳ ಮೂಲಕ ಒಮ್ಮತ ಮೂಡಿಸಲಾಯಿತು, ಇದರಿಂದ ದೇಶವು ಏಕೀಕೃತ ಮಾರುಕಟ್ಟೆಯಾಗಿ ಪರಿವರ್ತನೆಗೊಂಡಿತು.

16. ಈಶಾನ್ಯ ರಾಜ್ಯಗಳು & ಕಾಶ್ಮೀರಕ್ಕೆ ಸಂಪರ್ಕ ಸೌಲಭ್ಯ

ಸೆಪ್ಟೆಂಬರ್ 2025 ರಲ್ಲಿ ಐಜ್ವಾಲ್ ರೈಲು ಸಂಪರ್ಕವನ್ನು ಪಡೆಯಿತು; 28 ವರ್ಷಗಳ ಕಾಯುವಿಕೆಯ ನಂತರ ಉಧಂಪುರ-ಶ್ರೀನಗರ-ಬಾರಾಮುಲ್ಲಾ ಮಾರ್ಗವು ಜೂನ್ 2025 ರಲ್ಲಿ ಕಾರ್ಯಾರಂಭ ಮಾಡಿತು. ಚೆನಾಬ್ ಸೇತುವೆಯು ಕಾಶ್ಮೀರದ ಸಂಪರ್ಕ ಜಾಲಕ್ಕೆ ಹೊಸ ವೇಗವನ್ನು ನೀಡಿತು.

17. ಈಶಾನ್ಯ ಪ್ರದೇಶದಲ್ಲಿ ಶಾಂತಿ

2019 ರಿಂದ, ಸ್ವಾಯತ್ತತೆ, ಆರ್ಥಿಕ ನೆರವು ಮತ್ತು ಪುನರ್ವಸತಿಯನ್ನು ಒದಗಿಸುವ 12 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಸುಮಾರು 11,000 ಬಂಡುಕೋರರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದರು; ಹಿಂಸಾತ್ಮಕ ಘಟನೆಗಳು ಶೇಕಡಾ 71 ರಷ್ಟು ಕಡಿಮೆಯಾದವು ಮತ್ತು ಏಪ್ರಿಲ್ 2022 ರಲ್ಲಿ ಬೋಡೋಲ್ಯಾಂಡ್ ನಿಂದ ಎ.ಎಫ್.ಎಸ್.ಪಿ.ಎ (AFSPA) ಕಾಯ್ದೆಯನ್ನು ಹಿಂಪಡೆಯಲಾಯಿತು.



18. ಭಯೋತ್ಪಾದನೆಯ ವಿರುದ್ಧ ಹೊಸ ನೀತಿ

2016ರ ಸರ್ಜಿಕಲ್ ದಾಳಿ ಮತ್ತು 2019ರ ಬಾಲಾಕೋಟ್ ವಾಯುದಾಳಿಗಳ ನಂತರ, 2025ರ ಮೇ ತಿಂಗಳಲ್ಲಿ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಆರಂಭಿಸಲಾಯಿತು. ಒಂದೇ ರಾತ್ರಿಯಲ್ಲಿ ಭಯೋತ್ಪಾದಕರ ಒಂಬತ್ತು ಅಡಗುತಾಣಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಯಿತು. ಭಯೋತ್ಪಾದಕ ದಾಳಿಗಳಿಗೆ ಸೇನಾ ಕಾರ್ಯಾಚರಣೆಯ ಮೂಲಕ ಪ್ರತಿಕ್ರಿಯೆ ನೀಡಲಾಗುವುದು ಎಂಬುದನ್ನು ಈ ನೀತಿ ಸ್ಪಷ್ಟಪಡಿಸಿತು. ಭಯೋತ್ಪಾದಕರು ಮತ್ತು ಅವರಿಗೆ ಆಶ್ರಯ ನೀಡುವವರ ನಡುವೆ ಯಾವುದೇ ವ್ಯತ್ಯಾಸ ಮಾಡಲಾಗುವುದಿಲ್ಲ ಎಂಬ ನಿಲುವನ್ನು ಸಹ ಇದು ಸ್ಪಷ್ಟಪಡಿಸಿತು.

19. 370ನೇ ವಿಧಿ: ಒಂದೇ ರಾಷ್ಟ್ರ, ಒಂದೇ ಸಂವಿಧಾನ

ಸುಮಾರು 70 ವರ್ಷಗಳಿಂದ ಜಾರಿಯಲ್ಲಿದ್ದ 370ನೇ ವಿಧಿಯನ್ನು 2019ರಲ್ಲಿ ರದ್ದುಗೊಳಿಸಲಾಯಿತು. ರಾಷ್ಟ್ರಪತಿಗಳ ಆದೇಶ, ಸಂಸತ್ತಿನ ನಿರ್ಣಯ ಮತ್ತು ಪುನರ್‌ರಚನಾ ಕಾಯ್ದೆ-ಈ ಮೂರನ್ನೂ ಒಂದೇ ದಿನ ಅಂಗೀಕರಿಸಲಾಯಿತು. 2023ರ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಈ ಪ್ರಕ್ರಿಯೆಯನ್ನು ಎತ್ತಿಹಿಡಿಯಿತು. 2024ರಲ್ಲಿ ವಿಧಾನಸಭಾ ಚುನಾವಣೆಗಳು ನಡೆದವು.

20. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ

ಐದು ಶತಮಾನಗಳ ಸುದೀರ್ಘ ಕಾಯುವಿಕೆಯ ಬಳಿಕ, 2019ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ವಿವಾದಿತ ಸ್ಥಳವನ್ನು ಮಂದಿರ ನಿರ್ಮಾಣಕ್ಕಾಗಿ ಹಸ್ತಾಂತರಿಸಿತು. 2024ರ ಜನವರಿ 22ರಂದು ಪ್ರಾಣಪ್ರತಿಷ್ಠಾಪನೆ ಸಮಾರಂಭ ನೆರವೇರಿತು. 2025ರ ನವೆಂಬರ್‌ನಲ್ಲಿ ಧರ್ಮಧ್ವಜ ಹಾರಿಸುವ ಮೂಲಕ ಮಂದಿರದ ಮುಖ್ಯ ನಿರ್ಮಾಣ ಕಾರ್ಯ ಪೂರ್ಣಗೊಂಡಿತು.

21. ರೈಲು ಹಳಿಗಳಿಂದ ಭಾರತದ ಪ್ರಗತಿಗೆ ವೇಗ

ಸರಕು ಸಾಗಣೆ ರೈಲು ಮಾರ್ಗ ಯೋಜನೆಗೆ 2008ರಲ್ಲಿ ಅನುಮೋದನೆ ದೊರೆತಿದ್ದರೂ, 2014ರ ವೇಳೆಗೆ ಒಂದೇ ಒಂದು ಕಿಲೋಮೀಟರ್ ಹಳಿಯನ್ನೂ ನಿರ್ಮಿಸಲಾಗಿರಲಿಲ್ಲ. ನಂತರ ನಿರ್ಮಾಣ ಕಾರ್ಯ ಮತ್ತು ಹೂಡಿಕೆಗೆ ವೇಗ ದೊರೆಯಿತು. ಹಿಂದೆ ಖರ್ಚು ಮಾಡಲಾಗಿದ್ದ ಕೇವಲ ₹4,000 ಕೋಟಿಗೆ ಹೋಲಿಸಿದರೆ, ₹45,000 ಕೋಟಿಗೂ ಅಧಿಕ ಮೊತ್ತವನ್ನು ವೆಚ್ಚ ಮಾಡುವ ಮೂಲಕ ಸರಕು ಸಾಗಣೆ ಸಾರಿಗೆಗೆ ವೇಗ ನೀಡಲಾಯಿತು.

22. ಎರಡು ಬಿಲಿಯನ್ ಲಸಿಕೆ ಡೋಸ್‌ಗಳು

ಭಾರತ್ ಬಯೋಟೆಕ್–ಐಸಿಎಂಆರ್‌ನ ಕೋವ್ಯಾಕ್ಸಿನ್ ಮತ್ತು ಪುಣೆಯಲ್ಲಿ ತಯಾರಿಸಲಾದ ಕೋವಿಶೀಲ್ಡ್ ಲಸಿಕೆಗಳ ಉತ್ಪಾದನೆಯ ನೆರವಿನಿಂದ, 2021ರ ಜನವರಿಯಲ್ಲಿ ಆರಂಭವಾದ ಲಸಿಕಾ ಅಭಿಯಾನವು 200 ಕೋಟಿ ಡೋಸ್‌ಗಳ ಮೈಲಿಗಲ್ಲನ್ನು ತಲುಪಿತು. ಲಸಿಕೆ ವಿತರಣೆಯ ವ್ಯವಸ್ಥಾಪನೆಯನ್ನು ಕೋವಿನ್ ವೇದಿಕೆ ನಿರ್ವಹಿಸಿತು. ಭಾರತವು ಸುಮಾರು 100 ದೇಶಗಳಿಗೆ ಲಸಿಕೆಗಳನ್ನು ಪೂರೈಸಿತು.

23. ನದಿಗಳ ಸಾಮರ್ಥ್ಯದ ಸದುಪಯೋಗ

2024ರ ಡಿಸೆಂಬರ್‌ನಲ್ಲಿ ಕೆನ್–ಬೆಟ್ವಾ ಯೋಜನೆಗೆ ಚಾಲನೆ ನೀಡಲಾಯಿತು. ಬುಂದೇಲ್‌ಖಂಡ್ ಪ್ರದೇಶದ 11 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಜಲಮಾರ್ಗಗಳ ಮೂಲಕ ಸರಕು ಸಾಗಣೆ ಪ್ರಮಾಣವು 2013–14ರಲ್ಲಿ 1.8 ಕೋಟಿ ಟನ್‌ಗಳಿಂದ 2024–25ರಲ್ಲಿ 14.5 ಕೋಟಿ ಟನ್‌ಗಳಿಗೆ ಏರಿಕೆಯಾಯಿತು. 2025ರ ಏಪ್ರಿಲ್‌ನಲ್ಲಿ ಪಹಲ್ಗಾಮ್ ದಾಳಿಯ ನಂತರ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಲಾಯಿತು.

24. ರಷ್ಯಾ–ಉಕ್ರೇನ್ ಯುದ್ಧ

2022ರ ಫೆಬ್ರವರಿಯಲ್ಲಿ ಯುದ್ಧ ಆರಂಭವಾದ ಬಳಿಕ, 'ಆಪರೇಷನ್ ಗಂಗಾ' ಕಾರ್ಯಾಚರಣೆಯಡಿ 90 ವಿಮಾನಗಳ ಮೂಲಕ 22,500 ಭಾರತೀಯರನ್ನು ಸ್ಥಳಾಂತರಿಸಲಾಯಿತು. ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಶೇಕಡಾ 2ರಿಂದ ಮೂರನೇ ಒಂದು ಭಾಗಕ್ಕೆ ಏರಿಕೆಯಾದರೂ, ಹಣದುಬ್ಬರವು ಎರಡಂಕಿಗಳ ಮಟ್ಟವನ್ನು ತಲುಪಲಿಲ್ಲ.

25. ಪಶ್ಚಿಮ ಏಷ್ಯಾ ಸಂಘರ್ಷ

2026ರ ಫೆಬ್ರವರಿ 28ರ ನಂತರ ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿದ್ದರಿಂದ ಇಂಧನ ಪೂರೈಕೆಯ ಮೇಲೆ ಒತ್ತಡ ಉಂಟಾಯಿತು. ಭಾರತದ ಕಚ್ಚಾ ತೈಲ ಆಮದಿನ ಅರ್ಧದಷ್ಟು ಪ್ರಮಾಣವು ಈ ಮಾರ್ಗದ ಮೂಲಕ ಸಾಗುತ್ತಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಟೆಹ್ರಾನ್ ಮತ್ತು ವಾಷಿಂಗ್ಟನ್ ಎರಡರೊಂದಿಗೂ ಮಾತುಕತೆ ನಡೆಸಿದರು. ಆಮದು ಸುಂಕ ಕಡಿತ ಮತ್ತು ಪೂರೈಕೆ ನಿರಂತರವಾಗಿ ಮುಂದುವರಿದ ಕಾರಣ, ಆರ್ಥಿಕತೆಯು ಶೇಕಡಾ 7.8ರ ದರದಲ್ಲಿ ಬೆಳೆಯಿತು.



"ಇಂದು ಭಯೋತ್ಪಾದನೆಯನ್ನು ಹರಡುವವರು ಹಿನ್ನಡೆ ಅನುಭವಿಸುತ್ತಿದ್ದಾರೆ. ಪಾಕಿಸ್ತಾನವು ಯಾವುದೇ ದುರುದ್ದೇಶಪೂರಿತ ಚಟುವಟಿಕೆಯಲ್ಲಿ ತೊಡಗಿಕೊಂಡರೆ, ಭಾರತೀಯ ಸೇನಾಪಡೆಗಳು ಅವರದೇ ಭೂಪ್ರದೇಶದೊಳಗೆ ನುಗ್ಗಿ ದಾಳಿ ನಡೆಸುತ್ತವೆ. ಜಮ್ಮು ಮತ್ತು ಕಾಶ್ಮೀರದಿಂದ ಈಶಾನ್ಯ ಪ್ರದೇಶದವರೆಗೆ ಶಾಂತಿ ನೆಲೆಸಿದೆ. ಮಾವೋವಾದಿ ಭಯೋತ್ಪಾದನೆ ಮತ್ತು ನಕ್ಸಲಿಸಂನ ಬೆನ್ನೆಲುಬನ್ನು ಮುರಿಯಲಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

25 ಸುಧಾರಣೆಗಳು ಭಾರತದಲ್ಲಿ ಆಡಳಿತ ಸುಧಾರಣೆಗಳ ಹೊಸ ಯುಗ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 25 ವರ್ಷಗಳ ಉತ್ತಮ ಆಡಳಿತದ ಪಯಣವು ಭಾರತದಲ್ಲಿ ಸುಧಾರಣೆಗಳ ಹೊಸ ಯುಗಕ್ಕೆ ನಾಂದಿ ಹಾಡಿದೆ. ಈ ಅವಧಿಯಲ್ಲಿ ಗುಜರಾತ್‌ನಿಂದ ಕೇಂದ್ರ ಸರ್ಕಾರದವರೆಗೆ ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡ ಸಾಂಸ್ಥಿಕ ಬದಲಾವಣೆಗಳು, ಯೋಜನೆಗಳು, ಪ್ರಕ್ರಿಯೆಗಳು ಮತ್ತು ಕಾರ್ಯನಿರ್ವಹಣಾ ವಿಧಾನಗಳನ್ನು ಪರಿವರ್ತಿಸಿವೆ. ನೀರಿನ ನಿರ್ವಹಣೆಯಿಂದ ಬ್ಯಾಂಕಿಂಗ್‌ವರೆಗೆ, ತೆರಿಗೆ ವ್ಯವಸ್ಥೆಯಿಂದ ಕಾರ್ಮಿಕ ಕ್ಷೇತ್ರದವರೆಗೆ, ಶಿಕ್ಷಣದಿಂದ ಬಾಹ್ಯಾಕಾಶದವರೆಗೆ, ಕಾನೂನು ಚೌಕಟ್ಟುಗಳಿಂದ ಸಾಮಾಜಿಕ ಸುಧಾರಣೆಗಳವರೆಗೆ - ಈ ಎಲ್ಲಾ ಉಪಕ್ರಮಗಳಲ್ಲಿ ಆಡಳಿತ ಪದ್ಧತಿಗಳ ಪರಿವರ್ತನೆಗೆ ಪ್ರಮುಖ ಸ್ಥಾನ ನೀಡಲಾಯಿತು...

ಗುಜರಾತ್‌ನಲ್ಲಿ ಜಾರಿಗೆ ತಂದ ಸುಧಾರಣೆಗಳು

1. ನೀರಿನ ಸುಧಾರಣೆಗಳು, 2003

ಬರಪೀಡಿತ ಗುಜರಾತ್‌ನಲ್ಲಿ ಕಿರು ಅಣೆಕಟ್ಟುಗಳು, ಕೃಷಿ ಹೊಂಡಗಳು, ಅಂತರ್ಜಲ ಮರುಪೂರಣ ಬಾವಿಗಳು ಮತ್ತು ಕಾಲುವೆಗಳನ್ನು ಒಂದೇ ಸಮಗ್ರ ಯೋಜನೆಯಡಿ ಸಂಯೋಜಿಸಲಾಯಿತು. 'ಸುಜಲಾಂ ಸುಫಲಾಂ' ಮತ್ತು 'ಸೌನಿ'ಯಂತಹ ಉಪಕ್ರಮಗಳು ನೀರಿನ ಲಭ್ಯತೆ ಮತ್ತು ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಿದವು. 2019ರ ವೇಳೆಗೆ 1.85 ಲಕ್ಷಕ್ಕೂ ಹೆಚ್ಚು ಕಿರು ಅಣೆಕಟ್ಟುಗಳನ್ನು ನಿರ್ಮಿಸಲಾಗಿತ್ತು.

2. ನಿರ್ಮಲ ಗುಜರಾತ್, 2006

ನೈರ್ಮಲ್ಯದ ಜವಾಬ್ದಾರಿಯನ್ನು ಪಂಚಾಯಿತಿಗಳು, ಶಾಲೆಗಳು, ಮಹಿಳಾ ಸಂಘಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಯಿತು. ಇದೇ ವಿಧಾನವು ಮುಂದೆ 'ಸ್ವಚ್ಛ ಭಾರತ್ ಮಿಷನ್'ಗೆ ಅಡಿಪಾಯವಾಯಿತು.

3. ಹೂಡಿಕೆದಾರರಿಗಾಗಿ ಏಕಗವಾಕ್ಷಿ ವ್ಯವಸ್ಥೆ – 2013

ಅನುಮೋದನೆಗಳನ್ನು ಪಡೆಯಲು ಏಕಗವಾಕ್ಷಿ ವ್ಯವಸ್ಥೆಯನ್ನು ಪರಿಚಯಿಸಲಾಯಿತು. ಈ ಮಾದರಿಯನ್ನು ನಂತರ ರಾಷ್ಟ್ರಮಟ್ಟಕ್ಕೆ ವಿಸ್ತರಿಸಲಾಯಿತು. ಇಂದು ಇದು 32 ಕೇಂದ್ರ ಸಚಿವಾಲಯಗಳನ್ನು 33 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಂಪರ್ಕಿಸುತ್ತದೆ.

4. ಗುಜರಾತ್‌ನಲ್ಲಿ ಬಂದರು ಕ್ರಾಂತಿ



ಕರಾವಳಿ ಪ್ರದೇಶವನ್ನು ಕೈಗಾರಿಕಾ ಮೂಲಸೌಕರ್ಯವಾಗಿ ಅಭಿವೃದ್ಧಿಪಡಿಸಲಾಯಿತು. ಬಂದರುಗಳನ್ನು ರಸ್ತೆ, ರೈಲು, ವಿದ್ಯುತ್ ಮತ್ತು ಕೈಗಾರಿಕಾ ಜಾಲಗಳೊಂದಿಗೆ ಸಂಯೋಜಿಸಲಾಯಿತು. ಮುಂದ್ರಾ, ಹಜೀರಾ ಮತ್ತು ಪಿಪಾವಾವ್ ಬಂದರುಗಳು ಈ ಅಭಿವೃದ್ಧಿಯ ಪ್ರಮುಖ ಉದಾಹರಣೆಗಳಾಗಿ ಹೊರಹೊಮ್ಮಿದವು.

ಪಾವತಿಗಳು, ಕೃಷಿ ಮತ್ತು ಮಾನವ ಸಂಪನ್ಮೂಲ

5. ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ), 2014

ಜನಧನ್, ಆಧಾರ್ ಮತ್ತು ಮೊಬೈಲ್ (ಜೆಎಎಂ) ಎಂಬ ಮೂರು ವ್ಯವಸ್ಥೆಗಳ ಮೂಲಕ ಪರಿಶೀಲಿಸಲಾದ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರಯೋಜನಗಳು ತಲುಪಲು ಆರಂಭಿಸಿದವು. 320 ಯೋಜನೆಗಳ ಮೂಲಕ ₹53 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ವರ್ಗಾಯಿಸಲಾಯಿತು. ಇದರಿಂದ ಅಂದಾಜು ₹5 ಲಕ್ಷ ಕೋಟಿಗೂ ಹೆಚ್ಚು ಉಳಿತಾಯವಾಗಿದೆ.

6. ಬೇವು ಲೇಪಿತ ಯೂರಿಯಾ, 2015

ಯೂರಿಯಾಕ್ಕೆ ಬೇವಿನ ಲೇಪನ ಮಾಡುವ ಮೂಲಕ ಕಾಳಸಂತೆ ಮತ್ತು ಕೈಗಾರಿಕಾ ಉದ್ದೇಶಗಳಿಗೆ ಅದರ ಅಕ್ರಮ ತಿರುಗಿಸುವಿಕೆಯನ್ನು ನಿಯಂತ್ರಿಸಲಾಯಿತು. ರೈತರಿಗೆ ಯೂರಿಯಾದ ಲಭ್ಯತೆ ಸುಧಾರಿಸಿತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಅಂದಾಜು ₹10,000 ಕೋಟಿಯಷ್ಟು ಉಳಿತಾಯವಾಗಿದೆ.

7. ರಾಷ್ಟ್ರೀಯ ಶಿಕ್ಷಣ ನೀತಿ, 2020

2020ರ ಜುಲೈ 29ರಂದು ಅನುಮೋದಿಸಲಾದ ಈ ನೀತಿಯು 1968ರಿಂದ ಜಾರಿಯಲ್ಲಿದ್ದ 10+2 ಶಿಕ್ಷಣ ವ್ಯವಸ್ಥೆಯ ಬದಲಿಗೆ 5+3+3+4 ಚೌಕಟ್ಟನ್ನು ಪರಿಚಯಿಸಿತು. ಬಾಲ್ಯದ ಆರಂಭಿಕ ಶಿಕ್ಷಣವನ್ನು ಶಿಕ್ಷಣ ವ್ಯವಸ್ಥೆಯೊಳಗೆ ಸೇರಿಸಲಾಯಿತು. ಕಲೆ, ವಿಜ್ಞಾನ, ವಾಣಿಜ್ಯ ಮತ್ತು ವೃತ್ತಿಪರ ಶಿಕ್ಷಣಗಳ ನಡುವಿನ ಕಠಿಣ ವಿಭಾಗಗಳನ್ನು ಕಡಿಮೆ ಮಾಡಲಾಯಿತು.

8. ರಾಷ್ಟ್ರೀಯ ವೈದ್ಯಕೀಯ ಆಯೋಗ ಕಾಯ್ದೆ, 2019

ವೈದ್ಯಕೀಯ ಶಿಕ್ಷಣದ ನಿಯಂತ್ರಣವನ್ನು ಬಹು-ಮಂಡಳಿ ವ್ಯವಸ್ಥೆಗೆ ಪರಿವರ್ತಿಸಲಾಯಿತು. ವೈದ್ಯಕೀಯ ಕಾಲೇಜುಗಳ ಸಂಖ್ಯೆ 2014ರಲ್ಲಿದ್ದ 387ರಿಂದ 846ಕ್ಕೆ ಏರಿಕೆಯಾಯಿತು. ಎಂಬಿಬಿಎಸ್ ಸೀಟುಗಳ ಸಂಖ್ಯೆ 51,348ರಿಂದ 1,39,864ಕ್ಕೆ ಹೆಚ್ಚಾಯಿತು. ಸ್ನಾತಕೋತ್ತರ ಸೀಟುಗಳ ಸಂಖ್ಯೆ 30,191ರಿಂದ ಸುಮಾರು 86,360ಕ್ಕೆ ಏರಿಕೆಯಾಯಿತು.







ಆರ್ಥಿಕತೆಯ ಪುನರ್‌ನಿರ್ಮಾಣ

9. ಬ್ಯಾಂಕಿಂಗ್ ಸುಧಾರಣೆಗಳು, 2014

ಆಸ್ತಿ ಗುಣಮಟ್ಟ ಪರಿಶೀಲನೆಯು ಬ್ಯಾಂಕುಗಳ ನೈಜ ಸ್ಥಿತಿಯನ್ನು ಬಹಿರಂಗಪಡಿಸಿತು. ಬಂಡವಾಳ ಒದಗಿಸುವುದು, ಬ್ಯಾಂಕುಗಳ ವಿಲೀನ ಮತ್ತು ದಿವಾಳಿತನ ಪರಿಹಾರ ಪ್ರಕ್ರಿಯೆಗಳ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಪಡಿಸಲಾಯಿತು.

10. ಉದಾರೀಕೃತ ವಿದೇಶಿ ನೇರ ಹೂಡಿಕೆ ನೀತಿ, 2014

ವಿವಿಧ ಕ್ಷೇತ್ರಗಳಲ್ಲಿ ವಿದೇಶಿ ಹೂಡಿಕೆಗೆ ಇದ್ದ ಮಿತಿಗಳು ಮತ್ತು ಅನುಮೋದನಾ ಪ್ರಕ್ರಿಯೆಗಳನ್ನು ಸರಳಗೊಳಿಸಲಾಯಿತು. 2014ರಿಂದ 2025ರ ಅವಧಿಯಲ್ಲಿ ಭಾರತವು 748.78 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಆಕರ್ಷಿಸಿತು.

11. ಎಫ್‌ಇಎಂಎ ಮತ್ತು ಜಾಗತಿಕ ಹಣಕಾಸು ಏಕೀಕರಣ

ವಿದೇಶಿ ವಿನಿಮಯ, ಬಾಹ್ಯ ಸಾಲ, ವಿದೇಶಿ ಹೂಡಿಕೆ ಮತ್ತು ಗಡಿಯಾಚೆಗಿನ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ನಿಯಮಗಳನ್ನು ಸರಳಗೊಳಿಸಲಾಯಿತು. ಇದರಿಂದ ಕಾನೂನುಬದ್ಧ ವ್ಯವಹಾರಗಳಿಗೆ ಇದ್ದ ಅಡೆತಡೆಗಳು ಕಡಿಮೆಯಾದವು. ಭಾರತೀಯ ಕಂಪನಿಗಳು ವಿದೇಶಗಳಲ್ಲಿ ವ್ಯವಹಾರ ನಡೆಸುವುದು ಸುಲಭವಾಯಿತು.

12. ದಿವಾಳಿತನ ಮತ್ತು ಋಣಭಾರ ಸಂಹಿತೆ (ಐಬಿಸಿ), 2016

ಹಣಕಾಸಿನ ಸಂಕಷ್ಟದಲ್ಲಿರುವ ಕಂಪನಿಗಳಿಗೆ ಕಾಲಮಿತಿಯೊಳಗಿನ ಪರಿಹಾರ ಪ್ರಕ್ರಿಯೆಯನ್ನು ಪರಿಚಯಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಸಾಲದಾತರಿಗೆ ಪ್ರಮುಖ ಸ್ಥಾನ ನೀಡಲಾಯಿತು. 2026ರ ಮಾರ್ಚ್ ವೇಳೆಗೆ 1,419 ಪ್ರಕರಣಗಳಿಗೆ ಸಂಬಂಧಿಸಿದ ಪರಿಹಾರ ಯೋಜನೆಗಳಿಗೆ ಅನುಮೋದನೆ ದೊರೆತಿದ್ದು, ಇದರಿಂದ ಸುಮಾರು ₹4.32 ಲಕ್ಷ ಕೋಟಿ ಮೊತ್ತವನ್ನು ವಸೂಲಿ ಮಾಡಲಾಗಿದೆ.

13. ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ), 2017

ಕೇಂದ್ರ ಮತ್ತು ರಾಜ್ಯಗಳ ವಿವಿಧ ತೆರಿಗೆಗಳ ಬದಲಿಗೆ ಏಕೀಕೃತ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಇದರಿಂದ ಭಾರತವು ಏಕೈಕ ಮಾರುಕಟ್ಟೆಯಾಗಿ ಪರಿವರ್ತನೆಯಾಯಿತು. ನೋಂದಾಯಿತ ತೆರಿಗೆದಾರರ ಸಂಖ್ಯೆ ಮತ್ತು ತೆರಿಗೆ ಸಂಗ್ರಹ ಎರಡರಲ್ಲೂ ಹೆಚ್ಚಳ ಕಂಡುಬಂದಿತು.

14. ಆದಾಯ ತೆರಿಗೆ ಸುಧಾರಣೆಗಳು, 2014

'ಮುಖಾಮುಖಿರಹಿತ ಮೌಲ್ಯಮಾಪನ' ವ್ಯವಸ್ಥೆಯು ತೆರಿಗೆದಾರರು ಮತ್ತು ಅಧಿಕಾರಿಗಳ ನಡುವಿನ ನೇರ ಸಂಪರ್ಕವನ್ನು ಕಡಿಮೆ ಮಾಡಿತು. ಹೊಸ ತೆರಿಗೆ ಪದ್ಧತಿ ಮತ್ತು 2025ರ ಆದಾಯ ತೆರಿಗೆ ಕಾನೂನುಗಳು ತೆರಿಗೆ ದರಗಳು ಹಾಗೂ ಪ್ರಕ್ರಿಯೆಗಳನ್ನು ಸರಳಗೊಳಿಸಿದವು. 2025ರ ಬಜೆಟ್ ಪ್ರಕಾರ, ₹12.75 ಲಕ್ಷದವರೆಗೆ ವೇತನ ಆದಾಯಕ್ಕೆ ಯಾವುದೇ ಆದಾಯ ತೆರಿಗೆ ಪಾವತಿಸಬೇಕಾಗಿಲ್ಲ.

15. ಎಂಎಸ್‌ಎಂಇಗಳ ಪರಿಷ್ಕೃತ ವ್ಯಾಖ್ಯಾನ, 2020 ಮತ್ತು 2025

ಹೂಡಿಕೆ ಮತ್ತು ವಹಿವಾಟು ಎಂಬ ಎರಡೂ ಮಾನದಂಡಗಳನ್ನು ಒಟ್ಟಿಗೆ ಬಳಸುವ ಮೂಲಕ ಸಣ್ಣ ಕಂಪನಿಗಳ ಬೆಳವಣಿಗೆಗೆ ಇದ್ದ ಅಡೆತಡೆಗಳನ್ನು ಕಡಿಮೆ ಮಾಡಲಾಯಿತು. 2025ರಲ್ಲಿ ಮಿತಿಗಳನ್ನು ಮತ್ತಷ್ಟು ಹೆಚ್ಚಿಸಲಾಯಿತು. ಇದರಿಂದ ಕಂಪನಿಗಳು ತಮಗೆ ದೊರೆಯುತ್ತಿದ್ದ ಪ್ರಯೋಜನಗಳನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಲಾಯಿತು.

16. ಉತ್ಪಾದನೆ ಆಧಾರಿತ ಪ್ರೋತ್ಸಾಹಧನ (ಪಿಎಲ್‌ಐ) ಯೋಜನೆಗಳು, 2020

ಉತ್ಪಾದನೆ ಮತ್ತು ಮಾರಾಟದ ಆಧಾರದ ಮೇಲೆ ಪ್ರೋತ್ಸಾಹಧನ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. 2026ರ ಮಾರ್ಚ್ ವೇಳೆಗೆ ₹2.40 ಲಕ್ಷ ಕೋಟಿ ಮೊತ್ತದ ಹೂಡಿಕೆಗಳು ಸಾಕಾರಗೊಂಡಿದ್ದು, ಉತ್ಪಾದನೆಯ ಮೌಲ್ಯ ₹20 ಲಕ್ಷ ಕೋಟಿಯನ್ನು ಮೀರಿದೆ. ₹15.2 ಲಕ್ಷ ಕೋಟಿ ಮೌಲ್ಯದ ರಫ್ತು ದಾಖಲಾಗಿದೆ. ಇದೇ ಅವಧಿಯಲ್ಲಿ ಸುಮಾರು 14 ಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ.

"ಭಾರತದ ನೀತಿ ನಿರ್ಧಾರಗಳಲ್ಲಿನ ವೇಗವನ್ನು ಜಗತ್ತಿನ ಇತರ ರಾಷ್ಟ್ರಗಳು ಗಮನಿಸುತ್ತಿವೆ ಮತ್ತು ಅರ್ಥಮಾಡಿಕೊಳ್ಳುತ್ತಿವೆ. ಅದಕ್ಕಾಗಿಯೇ ಅವು ಭಾರತದೊಂದಿಗೆ ತಮ್ಮ ಪಾಲುದಾರಿಕೆಯನ್ನು ಬಲಪಡಿಸುತ್ತಿವೆ. ಕಳೆದ ಒಂದು ದಶಕದಲ್ಲಿ ಸುಮಾರು 40 ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ



ಕಾನೂನು, ನ್ಯಾಯ ಮತ್ತು ಸುಗಮ ಜೀವನ

17. ವಾಣಿಜ್ಯ ನ್ಯಾಯಾಲಯಗಳು, 2015

ವಾಣಿಜ್ಯ ವಿವಾದಗಳಿಗಾಗಿ ಪ್ರತ್ಯೇಕ ವ್ಯವಸ್ಥೆ, ನಿಗದಿತ ಕಾಲಮಿತಿಗಳು ಮತ್ತು ವಿದ್ಯುನ್ಮಾನ ಪ್ರಕ್ರಿಯೆಗಳನ್ನು ಪರಿಚಯಿಸಲಾಯಿತು. ನಗರಗಳಲ್ಲಿ ವಿವಾದಗಳ ಪರಿಹಾರಕ್ಕೆ ಬೇಕಾಗುತ್ತಿದ್ದ ಸಮಯವನ್ನು ವರ್ಷಗಳಿಂದ ತಿಂಗಳುಗಳಿಗೆ ಇಳಿಸಲಾಯಿತು. ನ್ಯಾಯಾಂಗ ಇಲಾಖೆಯ ಪ್ರಕಾರ, ತೀರ್ಪು ನೀಡಲು ತೆಗೆದುಕೊಳ್ಳುವ ಸಮಯ ದೆಹಲಿಯಲ್ಲಿ 424 ದಿನಗಳಿಗೆ ಮತ್ತು ಮುಂಬೈನಲ್ಲಿ 306 ದಿನಗಳಿಗೆ ಇಳಿಕೆಯಾಯಿತು.

18. ಬಳಕೆಯಲ್ಲಿಲ್ಲದ ಕಾನೂನುಗಳ ರದ್ದುಪಡಿಸುವಿಕೆ ಮತ್ತು ಜನ ವಿಶ್ವಾಸ ಕಾಯ್ದೆ , 2023

2014ರಿಂದ 1,500ಕ್ಕೂ ಹೆಚ್ಚು ಕೇಂದ್ರೀಯ ಕಾನೂನುಗಳನ್ನು ರದ್ದುಪಡಿಸಲಾಗಿದೆ. 183 ನಿಬಂಧನೆಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡುವ ಮೂಲಕ, ಸಣ್ಣಪುಟ್ಟ ತಾಂತ್ರಿಕ ಉಲ್ಲಂಘನೆಗಳಿಗೆ ಕ್ರಿಮಿನಲ್ ಶಿಕ್ಷೆಯ ಬದಲಿಗೆ ನಾಗರಿಕ ದಂಡ ವಿಧಿಸುವತ್ತ ಬದಲಾವಣೆ ತರಲಾಯಿತು.

19. ಭಾರತೀಯ ನ್ಯಾಯ ಸಂಹಿತೆ, 2023

ಭಾರತೀಯ ನ್ಯಾಯ ಸಂಹಿತೆಯು 1860ರ ಭಾರತೀಯ ದಂಡ ಸಂಹಿತೆಯ ಬದಲಿಗೆ ಜಾರಿಗೆ ಬಂದಿತು. ಇದು 2024ರ ಜುಲೈ 1ರಿಂದ ಜಾರಿಗೆ ಬಂತು. ವಸಾಹತುಶಾಹಿ ಮನೋಭಾವದಿಂದ ಮುಕ್ತಿಯ ಸಂಕೇತವಾಗಿ ಇದನ್ನು ಪರಿಗಣಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳನ್ನು ಪರಿಹರಿಸಲು ಆದ್ಯತೆ ನೀಡಲಾಯಿತು. ಸಂಘಟಿತ ಅಪರಾಧ, ಭಯೋತ್ಪಾದನೆ ಮತ್ತು ಗುಂಪು ಹಿಂಸಾಚಾರಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಸೇರಿಸಲಾಯಿತು.

20. ಕಾರ್ಮಿಕ ಸಂಹಿತೆಗಳು, 2025

ವೇತನ, ಕೈಗಾರಿಕಾ ಸಂಬಂಧಗಳು, ಸಾಮಾಜಿಕ ಭದ್ರತೆ ಮತ್ತು ಕೆಲಸದ ಸ್ಥಳದ ಸುರಕ್ಷತೆಯನ್ನು ಒಳಗೊಂಡ ನಾಲ್ಕು ಸಂಹಿತೆಗಳನ್ನು ಜಾರಿಗೆ ತರಲಾಯಿತು. ಇವು 29 ಹಳೆಯ ಕಾರ್ಮಿಕ ಕಾನೂನುಗಳ ಬದಲಿಗೆ ಜಾರಿಗೆ ಬಂದವು. ಇದರಿಂದ ಕಾನೂನು ಪಾಲನೆಯ ಪ್ರಕ್ರಿಯೆ ಸರಳಗೊಂಡಿದ್ದು, ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರನ್ನೂ ಸಾಮಾಜಿಕ ಭದ್ರತೆಯ ವ್ಯಾಪ್ತಿಗೆ ತರಲಾಗಿದೆ.

ಕಾರ್ಯತಂತ್ರದ ಸಾಮರ್ಥ್ಯಗಳು

21. ಬಾಹ್ಯಾಕಾಶ ಕ್ಷೇತ್ರದ ಸುಧಾರಣೆಗಳು, 2020

ಬಾಹ್ಯಾಕಾಶ ಚಟುವಟಿಕೆಗಳಲ್ಲಿ ಖಾಸಗಿ ವಲಯದ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಯಿತು. ಇನ್-ಸ್ಪೇಸ್ ಮೂಲಕ ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. 2026ರ ವೇಳೆಗೆ ಸುಮಾರು 440 ನವೋದ್ಯಮಗಳು ನೋಂದಣಿಯಾಗಿದ್ದು, ಖಾಸಗಿ ಹೂಡಿಕೆ 618 ಮಿಲಿಯನ್ ಅಮೆರಿಕನ್ ಡಾಲರ್‌ಗಳನ್ನು ಮೀರಿದೆ. 2026ರ ಜುಲೈ 18ರಂದು ಸ್ಕೈರೂಟ್ ಸಂಸ್ಥೆಯ ವಿಕ್ರಮ್-1 ರಾಕೆಟ್ ಶ್ರೀಹರಿಕೋಟಾದಿಂದ ಉಡಾವಣೆಯಾಗಿ, ತನ್ನ ಮೊದಲ ಪ್ರಯತ್ನದಲ್ಲೇ ಕಕ್ಷೆಯನ್ನು ತಲುಪಿತು.

22. ರಕ್ಷಣಾ ಕ್ಷೇತ್ರದ ಸುಧಾರಣೆಗಳು, 2020

ರಕ್ಷಣಾ ಉತ್ಪಾದನೆಯಲ್ಲಿ 'ಭಾರತದಲ್ಲೇ ವಿನ್ಯಾಸಗೊಳಿಸಿ, ತಯಾರಿಸಿ' ಎಂಬುದಕ್ಕೆ ಆದ್ಯತೆ ನೀಡಲಾಯಿತು. ರಕ್ಷಣಾ ರಫ್ತು ಪ್ರಮಾಣವು 2013–14ರಲ್ಲಿ ಸುಮಾರು ₹680 ಕೋಟಿಯಿಂದ ₹38,400 ಕೋಟಿಗೂ ಅಧಿಕ ಮೊತ್ತಕ್ಕೆ ಏರಿಕೆಯಾಯಿತು. ಒಂದು ಕಾಲದಲ್ಲಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ರಾಷ್ಟ್ರವು ಇದೀಗ ಶಸ್ತ್ರಾಸ್ತ್ರಗಳನ್ನು ತಯಾರಿಸುವ ರಾಷ್ಟ್ರವಾಗಿ ಪರಿವರ್ತನೆಯಾಗಿದೆ.

23. ಸೆಮಿಕಂಡಕ್ಟರ್ ಮಿಷನ್, 2021

ಚಿಪ್ ತಯಾರಿಕೆ, ಪ್ಯಾಕೇಜಿಂಗ್ ಮತ್ತು ವಿನ್ಯಾಸ ಸೇರಿದಂತೆ ಸಂಪೂರ್ಣ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ಭಾರತದಲ್ಲೇ ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸಲಾಯಿತು. ಸುಮಾರು ₹1.6 ಲಕ್ಷ ಕೋಟಿ ಮೌಲ್ಯದ 10 ಯೋಜನೆಗಳಿಗೆ ಅನುಮೋದನೆ ನೀಡಲಾಯಿತು. ಈ ಸಾಮರ್ಥ್ಯವನ್ನು ಹಲವು ಪ್ರದೇಶಗಳಲ್ಲಿ ಬೆಳೆಸುವ ಉದ್ದೇಶದಿಂದ ಯೋಜನೆಗಳನ್ನು ಗುಜರಾತ್, ಅಸ್ಸಾಂ ಮತ್ತು ಇತರ ರಾಜ್ಯಗಳಲ್ಲಿ ಹಂಚಿಕೆ ಮಾಡಲಾಗಿದೆ.

ಸಾಮಾಜಿಕ ಸುಧಾರಣೆಗಳು

24. ತ್ರಿವಳಿ ತಲಾಖ್, 2019

ತಕ್ಷಣದ ತ್ರಿವಳಿ ತಲಾಖ್ ಅನ್ನು ಅಮಾನ್ಯಗೊಳಿಸಿ, ಶಿಕ್ಷಾರ್ಹ ಅಪರಾಧವೆಂದು ಘೋಷಿಸಲಾಯಿತು. ಅಪ್ರಾಪ್ತ ವಯಸ್ಸಿನ ಮಕ್ಕಳ ಪಾಲನೆ ಮತ್ತು ಪೋಷಣೆ ಹಾಗೂ ಅವರ ಪಾಲಕತ್ವಕ್ಕೆ ಸಂಬಂಧಿಸಿದ ನಿಬಂಧನೆಗಳನ್ನೂ ಪರಿಚಯಿಸಲಾಯಿತು. ಕಾನೂನು ಜಾರಿಗೆ ಬಂದ ಒಂದು ವರ್ಷದೊಳಗೆ ವರದಿಯಾದ ಪ್ರಕರಣಗಳಲ್ಲಿ ಶೇಕಡಾ 82ರಷ್ಟು ಇಳಿಕೆ ಕಂಡುಬಂದಿತು. ದೀರ್ಘಕಾಲ ಕಾನೂನು ವ್ಯವಸ್ಥೆಯಿಂದ ಕಡೆಗಣಿಸಲ್ಪಟ್ಟಿದ್ದ ಮಹಿಳೆಯರಿಗೆ ಸಾಂವಿಧಾನಿಕ ರಕ್ಷಣೆ ದೊರೆಯುವಂತಾಯಿತು.

25. ವಕ್ಫ್ ಸುಧಾರಣೆಗಳು, 2025

ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ಕ್ಲೇಮುಗಳ ಕುರಿತು ವಿಚಾರಣೆ ಮತ್ತು ಮೇಲ್ಮನವಿ ಸಲ್ಲಿಸುವ ವ್ಯವಸ್ಥೆಯನ್ನು ಬಲಪಡಿಸಲಾಯಿತು. ಸರ್ಕಾರಿ ಭೂಮಿಗೆ ಸಂಬಂಧಿಸಿದ ಕ್ಲೇಮುಗಳನ್ನು ಹಿರಿಯ ಅಧಿಕಾರಿಗಳು ಪರಿಶೀಲಿಸುವಂತೆ ಹಾಗೂ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಇನ್ನು ಮುಂದೆ ವಕ್ಫ್ ಕ್ಲೇಮುಗಳು ಸಾಕ್ಷ್ಯಾಧಾರಗಳನ್ನು ಆಧರಿಸಿರುತ್ತವೆ.





'ನವ ಭಾರತ'ದಲ್ಲಿ ನಿರ್ಮಾಣ ಕ್ಷೇತ್ರಕ್ಕೆ ವೇಗ ನೀಡುವುದು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತದ ಚುಕ್ಕಾಣಿ ಹಿಡಿದ 25 ವರ್ಷಗಳ ಪಯಣವನ್ನು 'ಭಾರತದ ವಾಸ್ತುಶಿಲ್ಪದ ಅದ್ಭುತ ನಿರ್ಮಾಣಗಳು' ಎಂದು ಕರೆಯಬಹುದಾದ ಸಾಧನೆಗಳಿಂದ ಗುರುತಿಸಬಹುದು. ಈ ವರ್ಷಗಳಲ್ಲಿ ದೇಶದಾದ್ಯಂತ ನಿರ್ಮಿಸಲಾದ ಹಲವಾರು ಭವ್ಯ ಕಟ್ಟಡಗಳು ಮತ್ತು ಮೂಲಸೌಕರ್ಯ ಯೋಜನೆಗಳು ಭಾರತದ ಬದಲಾಗುತ್ತಿರುವ ಅಭಿವೃದ್ಧಿಯ ಪಥದ ವೈಭವಯುತ ಚಿತ್ರಣವನ್ನು ನೀಡುತ್ತವೆ. ಸೇತುವೆಗಳು ಮತ್ತು ಸುರಂಗಗಳಿಂದ ಹಿಡಿದು ವಿಮಾನ ನಿಲ್ದಾಣಗಳು, ಬಂದರುಗಳು, ನಗರ ಸಾರಿಗೆ ವ್ಯವಸ್ಥೆಗಳು, ಸಂಸತ್ ಭವನ, ಸ್ಮಾರಕಗಳು, ವಸ್ತುಸಂಗ್ರಹಾಲಯಗಳು, ತೀರ್ಥಕ್ಷೇತ್ರಗಳು ಮತ್ತು ಸ್ಮಾರ್ಟ್ ನಗರಗಳವರೆಗೆ - ಈ ಯೋಜನೆಗಳು ಸಂಪರ್ಕ ವ್ಯವಸ್ಥೆ, ಸೌಲಭ್ಯಗಳು, ಪರಂಪರೆ ಮತ್ತು ಭವಿಷ್ಯದ ಅಭಿವೃದ್ಧಿಯಲ್ಲಿ ಮಹತ್ವದ ಪರಿವರ್ತನೆ ತಂದಿವೆ. 'ನವ ಭಾರತ'ದ ಭವ್ಯ ವಾಸ್ತುಶಿಲ್ಪ ಮತ್ತು ಅಭಿವೃದ್ಧಿಯ ರೂಪುರೇಷೆಯಲ್ಲಿ ನಿರ್ಮಾಣ ಕ್ಷೇತ್ರಕ್ಕೆ ಇದರಿಂದ ನಿರ್ಣಾಯಕ ಪಾತ್ರ ದೊರೆಯುತ್ತದೆ.

1. ಬೋಗಿಬೀಲ್ ಮತ್ತು ಡಾ. ಭೂಪೇನ್ ಹಜಾರಿಕಾ ಸೇತು -

ಈಶಾನ್ಯ ಭಾರತಕ್ಕೆ ಕಾರ್ಯತಂತ್ರದ ಸಂಪರ್ಕ. ಬ್ರಹ್ಮಪುತ್ರ ನದಿಯ ಮೇಲಿರುವ 4.94 ಕಿಲೋಮೀಟರ್ ಉದ್ದದ ಬೋಗಿಬೀಲ್ ಸೇತುವೆಯು ಭಾರತದ ಅತಿ ಉದ್ದದ ರೈಲು-ರಸ್ತೆ ಸಂಯೋಜಿತ ಸೇತುವೆಯಾಗಿದೆ. 2018ರ ಡಿಸೆಂಬರ್ 25ರಂದು ಉದ್ಘಾಟಿಸಲಾದ ಈ ಸೇತುವೆಯಿಂದ ದಿಬ್ರುಗಢ ಮತ್ತು ಇಟಾನಗರ ನಡುವಿನ ರಸ್ತೆ ದೂರವು 150 ಕಿಲೋಮೀಟರ್‌ಗಳಷ್ಟು ಹಾಗೂ ರೈಲು ಮಾರ್ಗದ ದೂರವು ಸುಮಾರು 200 ಕಿಲೋಮೀಟರ್‌ಗಳಷ್ಟು ಕಡಿಮೆಯಾಯಿತು. ಇದೇ ವೇಳೆ, 9.15 ಕಿಲೋಮೀಟರ್ ಉದ್ದದ ಡಾ. ಭೂಪೇನ್ ಹಜಾರಿಕಾ ಸೇತುವೆಯು ಮೇಲ್ಭಾಗದ ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಪೂರ್ವ ಭಾಗದ ನಡುವೆ ಶಾಶ್ವತ ರಸ್ತೆ ಸಂಪರ್ಕವನ್ನು ಸ್ಥಾಪಿಸಿತು. ಇದರಿಂದ ರಾಜ್ಯಗಳ ನಡುವಿನ ಪ್ರಯಾಣದ ದೂರವು ಸುಮಾರು 165 ಕಿಲೋಮೀಟರ್‌ಗಳಷ್ಟು ಕಡಿಮೆಯಾಯಿತು. ಎರಡೂ ಸೇತುವೆಗಳನ್ನು ಸೇನಾ ಪಡೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾಗಿದೆ.

2. ಅಟಲ್ ಸೇತು ಮತ್ತು ಸುದರ್ಶನ ಸೇತು -

ಸಮುದ್ರ ಸಂಪರ್ಕಕ್ಕೆ ಹೊಸ ಆಯಾಮಗಳು. ಮುಂಬೈನ 21.8 ಕಿಲೋಮೀಟರ್ ಉದ್ದದ, ಆರು ಪಥಗಳ ಅಟಲ್ ಬಿಹಾರಿ ವಾಜಪೇಯಿ ಸೇವ್ರಿ-ನ್ಹಾವಾ ಶೇವಾ ಅಟಲ್ ಸೇತುವೆಯು ಭಾರತದ ಅತಿ ಉದ್ದದ ಸೇತುವೆ ಹಾಗೂ ಅತಿ ಉದ್ದದ ಸಮುದ್ರ ಸೇತುವೆಯಾಗಿದೆ. ಇದರಿಂದ ಸೇವ್ರಿ ಮತ್ತು ನ್ಹಾವಾ ಶೇವಾ ನಡುವಿನ ಪ್ರಯಾಣದ ಸಮಯವು ಸುಮಾರು ಎರಡು ಗಂಟೆಗಳಿಂದ ಕೇವಲ 20 ನಿಮಿಷಗಳಿಗೆ ಇಳಿಕೆಯಾಗಿದೆ. ಗುಜರಾತ್‌ನ 2.32 ಕಿಲೋಮೀಟರ್ ಉದ್ದದ ಸುದರ್ಶನ ಸೇತುವೆಯು ಭಾರತದ ಅತಿ ಉದ್ದದ ಕೇಬಲ್ ಆಧಾರಿತ ಸೇತುವೆಯಾಗಿದ್ದು, ಬೆಟ್ ದ್ವಾರಕೆಗೆ ಶಾಶ್ವತ ರಸ್ತೆ ಸಂಪರ್ಕವನ್ನು ಒದಗಿಸುತ್ತದೆ. ಇದರ ಪಾದಚಾರಿ ಮಾರ್ಗಗಳಲ್ಲಿ ಭಗವದ್ಗೀತೆಯ ಶ್ಲೋಕಗಳನ್ನು ಅಳವಡಿಸಲಾಗಿದೆ. ಸೇತುವೆಯ ಮೇಲ್ಭಾಗದಲ್ಲಿ ಸುಮಾರು 1 ಮೆಗಾವಾಟ್ ಸಾಮರ್ಥ್ಯದ ಸೌರ ಫಲಕಗಳನ್ನು ಅಳವಡಿಸಲಾಗಿದೆ.

3. ಚೆನಾಬ್ ಮತ್ತು ಅಂಜಿ ಖಾಡ್ -

ಕಾಶ್ಮೀರ ರೈಲು ಜಾಲದ ಜೀವನಾಡಿ. ನದಿಯ ತಳಭಾಗದಿಂದ 359 ಮೀಟರ್ ಎತ್ತರದಲ್ಲಿ ನಿರ್ಮಿಸಲಾಗಿರುವ ಮತ್ತು 1,315 ಮೀಟರ್ ವ್ಯಾಪ್ತಿಯನ್ನು ಹೊಂದಿರುವ ಚೆನಾಬ್ ರೈಲು ಸೇತುವೆಯು ವಿಶ್ವದ ಅತಿ ಎತ್ತರದ ರೈಲು ಕಮಾನು ಸೇತುವೆಯಾಗಿದೆ. 2025ರ ಜೂನ್ 6ರಂದು ಉದ್ಘಾಟಿಸಲಾದ ಈ ಸೇತುವೆಯಿಂದ ಕಾಶ್ಮೀರ ರೈಲು ಮಾರ್ಗದ ಸವಾಲಿನ ವಿಭಾಗದ ಸಂಪರ್ಕ ಕಾರ್ಯ ಪೂರ್ಣಗೊಂಡಿತು. ಭಾರತದ ಮೊದಲ ಕೇಬಲ್ ಆಧಾರಿತ ರೈಲು ಸೇತುವೆಯಾದ ಅಂಜಿ ಖಾಡ್ ಸೇತುವೆಯನ್ನೂ ಅದೇ ದಿನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು. 725 ಮೀಟರ್ ಉದ್ದದ ಈ ಸೇತುವೆಯು 193 ಮೀಟರ್ ಎತ್ತರಕ್ಕೆ ಏರಿರುವ ವೈ-ಆಕಾರದ ಕಂಬವನ್ನು ಹೊಂದಿದೆ.

4. ಹೊಸ ಪಾಂಬನ್ ಸೇತುವೆ -

ಸಮುದ್ರದ ಮೇಲಿನ ಆಧುನಿಕ ರೈಲು ಸಂಪರ್ಕ. ಭಾರತದ ಮೊದಲ ಲಂಬವಾಗಿ ಮೇಲಕ್ಕೆತ್ತಬಹುದಾದ ರೈಲು ಸಮುದ್ರ ಸೇತುವೆಯು ರಾಮೇಶ್ವರಂಗೆ ರೈಲು ಸಂಪರ್ಕವನ್ನು ಪುನಃ ಸ್ಥಾಪಿಸಿದೆ. ₹₹550 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಈ ಸೇತುವೆಯು 72.5 ಮೀಟರ್ ಉದ್ದದ ನೌಕಾಯಾನ ಮಾರ್ಗವನ್ನು ಹೊಂದಿದ್ದು, ಅದನ್ನು 17 ಮೀಟರ್ ಎತ್ತರದವರೆಗೆ ಮೇಲಕ್ಕೆತ್ತಬಹುದು. ಸಮುದ್ರ ಪರಿಸರದಿಂದ ಉಂಟಾಗುವ ಹಾನಿಯಿಂದ ದೀರ್ಘಕಾಲದ ರಕ್ಷಣೆ ಒದಗಿಸುವ ಉದ್ದೇಶದಿಂದ ವಿಶೇಷ ಲೇಪನ ಹೊಂದಿರುವ ಸ್ಟೇನ್‌ಲೆಸ್ ಸ್ಟೀಲ್ ಬಲವರ್ಧಕಗಳನ್ನು ಇದರಲ್ಲಿ ಬಳಸಲಾಗಿದೆ.

5. ಅಟಲ್ ಸುರಂಗ ಮತ್ತು ಸೇಲಾ ಸುರಂಗ -

ಗಡಿ ಪ್ರದೇಶಗಳಿಗೆ ವರ್ಷಪೂರ್ತಿ ಸಂಪರ್ಕ. 9.02 ಕಿಲೋಮೀಟರ್ ಉದ್ದದ ಅಟಲ್ ಸುರಂಗವು ಲಾಹೌಲ್-ಸ್ಪಿತಿ ಪ್ರದೇಶಕ್ಕೆ ವರ್ಷಪೂರ್ತಿ ಸಂಪರ್ಕವನ್ನು ಒದಗಿಸುತ್ತದೆ. ಇದರಿಂದ ಮನಾಲಿ ಮತ್ತು ಸರ್ಚು ನಡುವಿನ ದೂರವು 46 ಕಿಲೋಮೀಟರ್‌ಗಳಷ್ಟು ಕಡಿಮೆಯಾಗಿದೆ. ಭಾರೀ ಹಿಮಪಾತಕ್ಕೆ ಸಾಮಾನ್ಯವಾಗಿ ಒಳಗಾಗುವ ಮಾರ್ಗದ ಮೂಲಕ ತವಾಂಗ್‌ಗೆ ಎಲ್ಲ ಹವಾಮಾನಗಳಲ್ಲಿಯೂ ಸಂಪರ್ಕ ಕಲ್ಪಿಸುವುದನ್ನು ಸೇಲಾ ಸುರಂಗ ಖಚಿತಪಡಿಸುತ್ತದೆ. ಈ ಸುರಂಗವು 1,555 ಮೀಟರ್ ಉದ್ದವಿದ್ದು, ಇದಕ್ಕೆ ಹೆಚ್ಚುವರಿಯಾಗಿ 8.6 ಕಿಲೋಮೀಟರ್ ಉದ್ದದ ಸಂಪರ್ಕ ರಸ್ತೆಗಳನ್ನು ನಿರ್ಮಿಸಲಾಗಿದೆ.



6. ಕೆಂಪೇಗೌಡ ಮತ್ತು ಗುವಾಹಟಿ ವಿಮಾನ ನಿಲ್ದಾಣಗಳು - ವಿಮಾನಯಾನ ಸಾಮರ್ಥ್ಯದ ವಿಸ್ತರಣೆ. ಬೆಂಗಳೂರಿನ ಟರ್ಮಿನಲ್-2ರ ವಿಸ್ತರಣೆಯಿಂದ ವಿಮಾನ ನಿಲ್ದಾಣದ ವಾರ್ಷಿಕ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವು ಸುಮಾರು 2.5 ಕೋಟಿಯಿಂದ 5–6 ಕೋಟಿಗೆ ಹೆಚ್ಚಾಗಿದೆ; ಇದರ ಪ್ರಮುಖ ಆಕರ್ಷಣೆಗಳಲ್ಲಿ 'ಹಸಿರು ಗೋಡೆ', ನೇತಾಡುವ ಉದ್ಯಾನಗಳು ಮತ್ತು ಹೊರಾಂಗಣ ಉದ್ಯಾನಗಳು ಸೇರಿವೆ. ಇದೇ ವೇಳೆ, ಗುವಾಹಟಿಯ ಹೊಸ ಟರ್ಮಿನಲ್‌ನಿಂದ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವು 34 ಲಕ್ಷದಿಂದ 1.3 ಕೋಟಿಗೂ ಅಧಿಕಕ್ಕೆ ಏರಿಕೆಯಾಗಿದೆ. ಇಲ್ಲಿ ಸುಮಾರು 140 ಮೆಟ್ರಿಕ್ ಟನ್ ಬಿದಿರು ಮತ್ತು ಸುಮಾರು ಒಂದು ಲಕ್ಷ ಸ್ಥಳೀಯ ಸಸ್ಯಗಳನ್ನು ಒಳಗೊಂಡ 'ಸ್ಕೈ ಫಾರೆಸ್ಟ್' ನಿರ್ಮಿಸಲಾಗಿದೆ.

7. ಜೇವಾರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ - ಎನ್‌ಸಿಆರ್‌ನ ಎರಡನೇ ಪ್ರಮುಖ ವಿಮಾನಯಾನ ದ್ವಾರ. ₹11,200 ಕೋಟಿ ವೆಚ್ಚದ ಮೊದಲ ಹಂತವನ್ನು 2026ರ ಮಾರ್ಚ್ 28ರಂದು ಉದ್ಘಾಟಿಸಲಾಯಿತು. ಹೆಚ್ಚುತ್ತಿರುವ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು ಮತ್ತು ಪಶ್ಚಿಮ ಉತ್ತರ ಪ್ರದೇಶದ ವಿಮಾನ ಸಂಪರ್ಕದ ಅಗತ್ಯಗಳನ್ನು ಪೂರೈಸುವುದು ಇದರ ಉದ್ದೇಶವಾಗಿದೆ. ಸಂಪೂರ್ಣವಾಗಿ ಅಭಿವೃದ್ಧಿಗೊಂಡ ಬಳಿಕ, ಇದು ಭಾರತದ ಅತಿ ದೊಡ್ಡ ವಿಮಾನ ನಿಲ್ದಾಣಗಳ ಪೈಕಿ ಒಂದಾಗುವ ನಿರೀಕ್ಷೆಯಿದೆ.

8. ವಿಳಿಂಜಂ ಬಂದರು - ಭಾರತದ ಸಾಗರ ಸರಕು ಮರುಸಾಗಣೆ ಕೇಂದ್ರ. 2025ರ ಮೇ 2ರಂದು ಉದ್ಘಾಟಿಸಲಾದ ವಿಳಿಂಜಂ, ಭಾರತದ ಮೊದಲ ಸಮರ್ಪಿತ ಕಂಟೇನರ್ ಮರುಸಾಗಣೆ ಬಂದರು ಹಾಗೂ ಮೊದಲ ಅರೆ-ಸ್ವಯಂಚಾಲಿತ ಟ್ರಾನ್ಸ್‌ಶಿಪ್‌ಮೆಂಟ್ ಬಂದರು ಆಗಿದೆ. ಸುಮಾರು 20 ಮೀಟರ್‌ಗಳಷ್ಟು ನೈಸರ್ಗಿಕ ಆಳವಿರುವುದರಿಂದ ದೊಡ್ಡ ಸರಕು ಹಡಗುಗಳು ಇಲ್ಲಿ ಲಂಗರು ಹಾಕಲು ಸಾಧ್ಯವಾಗುತ್ತದೆ. ಪ್ರಸ್ತುತ ವಿದೇಶಿ ಬಂದರುಗಳಲ್ಲಿ ನಡೆಯುತ್ತಿರುವ ಸರಕು ಟ್ರಾನ್ಸ್‌ಶಿಪ್‌ಮೆಂಟ್ ಚಟುವಟಿಕೆಗಳನ್ನು ಭಾರತಕ್ಕೆ ತಂದು, ಅದರಿಂದ ದೊರೆಯುವ ಆದಾಯವನ್ನು ದೇಶದಲ್ಲೇ ಉಳಿಸಿಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ.

9. ಕೊಚ್ಚಿ ವಾಟರ್ ಮೆಟ್ರೋ ಮತ್ತು ನಮೋ ಭಾರತ್ - ನಗರ ಸಾರಿಗೆಯ ಹೊಸ ಮಾದರಿಗಳು. ಕೊಚ್ಚಿ ವಾಟರ್ ಮೆಟ್ರೋ ಭಾರತದ ಮೊದಲ ಜಲ ಮೆಟ್ರೋ ವ್ಯವಸ್ಥೆಯಾಗಿದೆ. 78 ಬ್ಯಾಟರಿ-ವಿದ್ಯುತ್ ಹೈಬ್ರಿಡ್ ದೋಣಿಗಳ ಸಮೂಹವು 15 ಮಾರ್ಗಗಳ ಮೂಲಕ 38 ಟರ್ಮಿನಲ್‌ಗಳನ್ನು ಸಂಪರ್ಕಿಸುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬ್ಯಾಟರಿ ಶಕ್ತಿಯಿಂದ ಕಾರ್ಯನಿರ್ವಹಿಸುವ ವಿಶ್ವದ ಮೊದಲ ಜಲ ಮೆಟ್ರೋ ಜಾಲ ಇದಾಗಿದೆ. ಇದೇ ವೇಳೆ, 82.15 ಕಿಲೋಮೀಟರ್ ಉದ್ದದ ದೆಹಲಿ–ಗಾಜಿಯಾಬಾದ್–ಮೀರತ್ ನಮೋ ಭಾರತ್ ಕ್ಷಿಪ್ರ ರೈಲು ವ್ಯವಸ್ಥೆಯನ್ನು ಗಂಟೆಗೆ ಗರಿಷ್ಠ 180 ಕಿಲೋಮೀಟರ್ ವೇಗದಲ್ಲಿ ಸಂಚರಿಸುವಂತೆ ವಿನ್ಯಾಸಗೊಳಿಸಲಾಗಿದೆ.



10. ನಮೋ ಘಾಟ್ ಮತ್ತು ವಾರಾಣಸಿ ಬಹುಮಾದರಿ ಟರ್ಮಿನಲ್ ನದಿ ಆಧಾರಿತ ಸಂಪರ್ಕ ವ್ಯವಸ್ಥೆ. ₹95 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾದ ನಮೋ ಘಾಟ್‌ನಲ್ಲಿ ವೀಕ್ಷಣಾ ವೇದಿಕೆಗಳು, ಕೆಫೆಟೇರಿಯಾಗಳು, ಪರಂಪರೆಯನ್ನು ಬಿಂಬಿಸುವ ಭಿತ್ತಿ ಚಿತ್ರಗಳು ಮತ್ತು ಕ್ರೂಸ್ ಹಡಗುಗಳ ನಿಲುಗಡೆ ಸ್ಥಳಗಳಿವೆ. ವಾರಾಣಸಿ ಬಹುಮಾದರಿ ಟರ್ಮಿನಲ್ ರಾಷ್ಟ್ರೀಯ ಜಲಮಾರ್ಗ-1ರಲ್ಲಿ ಈ ರೀತಿಯ ಮೊದಲ ಟರ್ಮಿನಲ್ ಆಗಿದ್ದು, 1,500–2,000 ಟನ್ ಸಾಮರ್ಥ್ಯದ ಹಡಗುಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಸ್ವಾತಂತ್ರ್ಯಾನಂತರ ಭಾರತದ ಮೊದಲ ಆಂತರಿಕ ಜಲಮಾರ್ಗ ಕಂಟೇನರ್ ಸೇವೆಯನ್ನು ಇಲ್ಲಿಂದಲೇ ಆರಂಭಿಸಲಾಯಿತು.

11. ಸ್ವರ್ಣಿಮ ಸಂಕುಲ ಮತ್ತು ಹೊಸ ಸಂಸತ್ ಭವನ - ಉತ್ತಮ ಆಡಳಿತಕ್ಕಾಗಿ ಹೊಸ ಸಂಕೀರ್ಣಗಳು. ಗಾಂಧಿನಗರದ ಸ್ವರ್ಣಿಮ ಸಂಕುಲವು ವಿವಿಧ ರಾಜ್ಯ ಸರ್ಕಾರಿ ಇಲಾಖೆಗಳನ್ನೆಲ್ಲ ಒಂದೇ ಸೂರಿನಡಿ ತರಲು ಕೈಗೊಂಡ ಉಪಕ್ರಮವಾಗಿದ್ದು, ಹಂಚಿಕೆಯ ಸೇವೆಗಳು ಮತ್ತು ಆಡಳಿತಾತ್ಮಕ ಕಾರ್ಯಾಚರಣೆಗಳಿಗೆ ಅನುಕೂಲ ಕಲ್ಪಿಸುತ್ತದೆ. ನವದೆಹಲಿಯಲ್ಲಿರುವ ಹೊಸ ಸಂಸತ್ ಭವನದ ತ್ರಿಕೋನಾಕಾರದ ಸಂಕೀರ್ಣದಲ್ಲಿ ಲೋಕಸಭೆಗೆ 888 ಮತ್ತು ರಾಜ್ಯಸಭೆಗೆ 384 ಆಸನಗಳಿವೆ. 2023ರ ಮೇ 28ರಂದು ಉದ್ಘಾಟಿಸಲಾದ ಈ ಕಟ್ಟಡದಲ್ಲಿ ದೇಶದ ವಿವಿಧ ರಾಜ್ಯಗಳ ವೈವಿಧ್ಯಮಯ ಅಂಶಗಳನ್ನು ಒಳಗೊಂಡಿದ್ದು, 'ಸೆಂಗೋಲ್' ಅನ್ನು ಸಹ ಇಲ್ಲಿ ಇರಿಸಲಾಗಿದೆ.

12. ಸೆಂಟ್ರಲ್ ವಿಸ್ತಾ - ಕರ್ತವ್ಯ ಪಥ, ಕರ್ತವ್ಯ ಭವನ ಮತ್ತು ಸೇವಾ ತೀರ್ಥ. 19 ತಿಂಗಳ ಅವಧಿಯಲ್ಲಿ ಪುನರ್‌ಅಭಿವೃದ್ಧಿಗೊಳಿಸಲಾದ ಕರ್ತವ್ಯ ಪಥವನ್ನು 2022ರ ಸೆಪ್ಟೆಂಬರ್ 8ರಂದು ಉದ್ಘಾಟಿಸಲಾಯಿತು. ವಿವಿಧ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಚಿವಾಲಯಗಳನ್ನು ಒಂದೇ ಹಂಚಿಕೆಯ ಸಚಿವಾಲಯ ಸಂಕೀರ್ಣದಡಿ ಒಗ್ಗೂಡಿಸುವ ಪ್ರಕ್ರಿಯೆಯು ಕರ್ತವ್ಯ ಭವನ-3 ಮತ್ತು ಸೇವಾ ತೀರ್ಥದ ಉದ್ಘಾಟನೆಯೊಂದಿಗೆ ಆರಂಭವಾಯಿತು. ಕರ್ತವ್ಯ ಭವನ-3 ಅನ್ನು ಸಾಂಪ್ರದಾಯಿಕ ಕಟ್ಟಡಗಳಿಗೆ ಹೋಲಿಸಿದರೆ ಶೇಕಡಾ 30ರಷ್ಟು ಕಡಿಮೆ ವಿದ್ಯುತ್ ಬಳಕೆಯಾಗುವಂತೆ ವಿನ್ಯಾಸಗೊಳಿಸಲಾಗಿದೆ.

13. ಏಕತಾ ಪ್ರತಿಮೆ - ರಾಷ್ಟ್ರೀಯ ಚೈತನ್ಯದ ಭವ್ಯ ಸಂಕೇತ. 182 ಮೀಟರ್ ಎತ್ತರದ ಈ ಪ್ರತಿಮೆಯು ವಿಶ್ವದ ಅತಿ ಎತ್ತರದ ಪ್ರತಿಮೆಯಾಗಿದೆ. 2018ರ ಅಕ್ಟೋಬರ್ 31ರಂದು ಉದ್ಘಾಟಿಸಲಾದ ಈ ಪ್ರತಿಮೆಯ ಎತ್ತರವು ಗುಜರಾತ್ ವಿಧಾನಸಭೆಯ 182 ಸ್ಥಾನಗಳನ್ನು ಪ್ರತಿನಿಧಿಸುತ್ತದೆ. ದೇಶಾದ್ಯಂತದ ರೈತರು ಹಳೆಯ ಕೃಷಿ ಉಪಕರಣಗಳಿಂದ ಪಡೆದ ಕಬ್ಬಿಣವನ್ನು ಕಳುಹಿಸುವ ಮೂಲಕ ಜನಸಹಭಾಗಿತ್ವದ ಮೂಲಕ ಈ ಯೋಜನೆಗೆ ಕೊಡುಗೆ ನೀಡಿದರು.



14. ರಾಷ್ಟ್ರೀಯ ಯುದ್ಧ ಸ್ಮಾರಕ ಮತ್ತು ರಾಷ್ಟ್ರೀಯ ಪೊಲೀಸ್ ಸ್ಮಾರಕ - ತ್ಯಾಗಗಳನ್ನು ಸ್ಮರಿಸುವ ಸ್ಮಾರಕಗಳು. ರಾಷ್ಟ್ರೀಯ ಯುದ್ಧ ಸ್ಮಾರಕವು ಸ್ವಾತಂತ್ರ್ಯಾನಂತರ ದೇಶಕ್ಕಾಗಿ ಸರ್ವೋಚ್ಚ ತ್ಯಾಗ ಮಾಡಿದ ಸೈನಿಕರಿಗೆ ಸಮರ್ಪಿಸಲಾದ ಭಾರತದ ಮೊದಲ ರಾಷ್ಟ್ರೀಯ ಸ್ಮಾರಕವಾಗಿದೆ; ಇದರಲ್ಲಿ 25,942 ಸೈನಿಕರ ಹೆಸರುಗಳನ್ನು ದಾಖಲಿಸಲಾಗಿದೆ. ರಾಷ್ಟ್ರೀಯ ಪೊಲೀಸ್ ಸ್ಮಾರಕವು ಕರ್ತವ್ಯ ನಿರ್ವಹಿಸುವ ವೇಳೆ ಹುತಾತ್ಮರಾದ ಪೊಲೀಸ್ ಸಿಬ್ಬಂದಿಗೆ ಸಮರ್ಪಿಸಲಾದ ಮೊದಲ ರಾಷ್ಟ್ರೀಯ ಸ್ಮಾರಕವಾಗಿದೆ; ಹುತಾತ್ಮರಾದ ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ಅದರ 'ಶೌರ್ಯ ಗೋಡೆ'ಯಲ್ಲಿ ಕೆತ್ತಲಾಗಿದೆ.

15. ಸ್ಮೃತಿವನ ಮತ್ತು ಜಲಿಯನ್‌ವಾಲಾ ಬಾಗ್ - ದುರಂತ ಇತಿಹಾಸದ ಸ್ಮರಣೆ. ಭುಜ್‌ನಲ್ಲಿ 470 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾದ ಸ್ಮೃತಿವನದಲ್ಲಿ 13,000ಕ್ಕೂ ಹೆಚ್ಚು ಸಂತ್ರಸ್ತರ ಹೆಸರುಗಳನ್ನು ದಾಖಲಿಸಲಾಗಿದೆ. ಇಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮರಗಳನ್ನು ಒಳಗೊಂಡ ಮಿಯಾವಾಕಿ ಅರಣ್ಯ ಮತ್ತು 5ಡಿ ಭೂಕಂಪನ ಅನುಕರಣ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಪುನರ್‌ಅಭಿವೃದ್ಧಿಪಡಿಸಲಾದ ಜಲಿಯನ್‌ವಾಲಾ ಬಾಗ್ ಸಂಕೀರ್ಣದಲ್ಲಿ ಜನರಲ್ ಡಯರ್ ಸೈನಿಕರು ಪ್ರವೇಶಿಸಿದ ಮಾರ್ಗವನ್ನು ಶಿಲ್ಪಗಳ ಮೂಲಕ ಪ್ರದರ್ಶಿಸಲಾಗಿದೆ. ಹೊಸ ಗ್ಯಾಲರಿಗಳನ್ನು ನಿರ್ಮಿಸಲಾಗಿದ್ದು, ಧ್ವನಿ ಮತ್ತು ಬೆಳಕಿನ ಪ್ರದರ್ಶನವನ್ನೂ ಸೇರ್ಪಡೆ ಮಾಡಲಾಗಿದೆ.

16. ನಳಂದಾ ವಿಶ್ವವಿದ್ಯಾಲಯ - ಜ್ಞಾನ ಪರಂಪರೆಯ ಆಧುನಿಕ ವಿಸ್ತರಣೆ. 455 ಎಕರೆ ಪ್ರದೇಶದಲ್ಲಿ ನಿರ್ಮಿಸಲಾದ ನೂತನ ಆವರಣವನ್ನು 2024ರ ಜೂನ್ 19ರಂದು ಉದ್ಘಾಟಿಸಲಾಯಿತು. ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಮತ್ತು ನಿವ್ವಳ ಶೂನ್ಯ ಇಂಗಾಲ ಹೊರಸೂಸುವಿಕೆಯ ಈ ಆವರಣದಲ್ಲಿ 2,000 ಆಸನಗಳ ಸಭಾಂಗಣ ಹಾಗೂ 100 ಎಕರೆಗೂ ಹೆಚ್ಚು ವಿಸ್ತೀರ್ಣದ 'ಕಮಲ ಸಾಗರ'ವಿದೆ. ಮಳೆನೀರು ಸಂಗ್ರಹಣೆಗಾಗಿ ಬಿಹಾರದ ಸಾಂಪ್ರದಾಯಿಕ 'ಆಹರ್-ಪೈನ್' ವ್ಯವಸ್ಥೆಯನ್ನು ಬಳಸಲಾಗಿದೆ.

17. ಪ್ರಧಾನಮಂತ್ರಿ ಸಂಗ್ರಹಾಲಯ ಮತ್ತು ದಂಡಿ ಕುಟೀರ

- ಆಧುನಿಕ ಪ್ರಸ್ತುತಿಯ ಮೂಲಕ ಇತಿಹಾಸ ಪರಿಚಯ. ಪ್ರಧಾನಮಂತ್ರಿ ಸಂಗ್ರಹಾಲಯವನ್ನು 2022ರ ಏಪ್ರಿಲ್ 14ರಂದು ತೆರೆಯಲಾಯಿತು. ಇದು ಭಾರತದ ಪ್ರತಿಯೊಬ್ಬ ಪ್ರಧಾನಮಂತ್ರಿಗೆ ಸಮರ್ಪಿಸಲಾದ ಮೊದಲ ಸಂಗ್ರಹಾಲಯವಾಗಿದೆ. ಸ್ವಾತಂತ್ರ್ಯಾನಂತರ ಭಾರತದ ಪಯಣವನ್ನು ಹೊಲೊಗ್ರಾಮ್‌ಗಳು ಮತ್ತು ಸಂವಾದಾತ್ಮಕ ಕೊಠಡಿಗಳ ಮೂಲಕ ಇಲ್ಲಿ ಪ್ರದರ್ಶಿಸಲಾಗಿದೆ. ದಂಡಿ ಕುಟೀರದಲ್ಲಿ 41 ಮೀಟರ್ ಎತ್ತರದ ಶಂಕುವಿನಾಕಾರದ ಗುಮ್ಮಟದೊಳಗೆ 3ಡಿ ಮ್ಯಾಪಿಂಗ್, ಹೊಲೊಗ್ರಫಿ ಮತ್ತು 360 ಡಿಗ್ರಿ ಪ್ರೊಜೆಕ್ಷನ್ ತಂತ್ರಜ್ಞಾನಗಳ ಮೂಲಕ ಮಹಾತ್ಮ ಗಾಂಧೀಜಿಯವರ ಜೀವನವನ್ನು ಪರಿಚಯಿಸಲಾಗಿದೆ.



18. ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ಸಂಗ್ರಹಾಲಯಗಳು ಮತ್ತು ರಾಷ್ಟ್ರೀಯ ಸಾಗರ ಪರಂಪರೆ ಸಂಕೀರ್ಣ - ಸ್ವಾತಂತ್ರ್ಯ ಹೋರಾಟಕ್ಕೆ ಬುಡಕಟ್ಟು ಸಮುದಾಯಗಳು ನೀಡಿದ ಕೊಡುಗೆಗೆ ಸಮರ್ಪಿಸಲಾದ ರಾಷ್ಟ್ರೀಯ ಸಂಗ್ರಹಾಲಯ ಕಾರ್ಯಕ್ರಮದಡಿ ಪ್ರಸ್ತಾಪಿಸಲಾದ 11 ಸಂಗ್ರಹಾಲಯಗಳ ಪೈಕಿ ನಾಲ್ಕನ್ನು 2026ರ ವೇಳೆಗೆ ಉದ್ಘಾಟಿಸಲು ಉದ್ದೇಶಿಸಲಾಗಿದೆ. ಇವುಗಳಲ್ಲಿ ಮೊದಲನೆಯದು ರಾಂಚಿಯ ಹಳೆಯ ಕೇಂದ್ರ ಕಾರಾಗೃಹದಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಲೋಥಲ್‌ನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ರಾಷ್ಟ್ರೀಯ ಸಾಗರ ಪರಂಪರೆ ಸಂಕೀರ್ಣವು ಭಾರತದ 4,500 ವರ್ಷಗಳಷ್ಟು ಹಳೆಯ ಸಾಗರ ಪರಂಪರೆಗೆ ಸಮರ್ಪಿತವಾಗಿದೆ.

19. ಮಹಾತ್ಮ ಮಂದಿರ, ಭಾರತ ಮಂಟಪಂ ಮತ್ತು ಯಶೋಭೂಮಿ

- ಸಮ್ಮೇಳನ ಸಾಮರ್ಥ್ಯದ ವಿಸ್ತರಣೆ. ಗಾಂಧಿನಗರದ ಮಹಾತ್ಮ ಮಂದಿರವು ಸುಮಾರು 40 ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ; ಇದರ ಮುಖ್ಯ ಸಭಾಂಗಣದಲ್ಲಿ 6,000 ಜನರಿಗೆ ಆಸನ ವ್ಯವಸ್ಥೆಯಿದೆ. ಭಾರತ ಮಂಟಪಂನಲ್ಲಿ 7,000 ಜನರ ಸಾಮರ್ಥ್ಯದ ಸಭಾಂಗಣ ಮತ್ತು 3,000 ಜನರಿಗೆ ಅವಕಾಶವಿರುವ ಬಯಲು ರಂಗಮಂದಿರವಿದೆ. ಯಶೋಭೂಮಿಯಲ್ಲಿ 1.07 ಲಕ್ಷ ಚದರ ಮೀಟರ್‌ಗಿಂತಲೂ ಹೆಚ್ಚಿನ ಪ್ರದರ್ಶನ ಸ್ಥಳವಿದ್ದು, 11,000ಕ್ಕೂ ಹೆಚ್ಚು ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸುವ ಸಮ್ಮೇಳನ ಕೊಠಡಿಗಳಿವೆ.

20. ರುದ್ರಾಕ್ಷ ಮತ್ತು ನರೇಂದ್ರ ಮೋದಿ ಕ್ರೀಡಾಂಗಣ - ಸಂಸ್ಕೃತಿಯಿಂದ ಕ್ರೀಡೆಯವರೆಗೆ. ವಾರಾಣಸಿಯ ರುದ್ರಾಕ್ಷ ಅಂತಾರಾಷ್ಟ್ರೀಯ ಸಹಕಾರ ಮತ್ತು ಸಮ್ಮೇಳನ ಕೇಂದ್ರವನ್ನು ಶಿವಲಿಂಗದ ಆಕಾರದಲ್ಲಿ ನಿರ್ಮಿಸಲಾಗಿದ್ದು, 108 ಅಲ್ಯೂಮಿನಿಯಂ ರುದ್ರಾಕ್ಷ ವಿನ್ಯಾಸಗಳಿಂದ ಅಲಂಕರಿಸಲಾಗಿದೆ. ಸುಮಾರು 1,200 ಜನರಿಗೆ ಆಸನ ಸಾಮರ್ಥ್ಯ ಹೊಂದಿರುವ ಇದು ಭಾರತ ಮತ್ತು ಜಪಾನ್ ನಡುವಿನ ವಾಸ್ತುಶಿಲ್ಪ ಹಾಗೂ ತಾಂತ್ರಿಕ ಸಹಭಾಗಿತ್ವಕ್ಕೆ ಸಾಕ್ಷಿಯಾಗಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಿದ್ದು, ಸುಮಾರು 1,32,000 ಪ್ರೇಕ್ಷಕರಿಗೆ ಅವಕಾಶ ಕಲ್ಪಿಸುತ್ತದೆ.

21. ಸಾಬರಮತಿ ನದಿ ತೀರದ ಅಭಿವೃದ್ಧಿ ಮತ್ತು ಕಾಂಕರಿಯಾ ಕೆರೆ - ನಗರ ಸಾರ್ವಜನಿಕ ಸ್ಥಳಗಳ ಪುನರುಜ್ಜೀವನ. ಸಾಬರಮತಿ ನದಿ ತೀರದ ಅಭಿವೃದ್ಧಿ ಯೋಜನೆಯಡಿ ಸುಮಾರು 205 ಹೆಕ್ಟೇರ್ ಪ್ರದೇಶವನ್ನು ಪುನರ್‌ಅಭಿವೃದ್ಧಿಪಡಿಸಿ, 11.25 ಕಿಲೋಮೀಟರ್ ಉದ್ದದ ಸಾರ್ವಜನಿಕ ನದಿ ತೀರವನ್ನು ನಿರ್ಮಿಸಲಾಯಿತು. ಗಾಳಿಪಟದ ಆಕಾರದಿಂದ ಪ್ರೇರಿತವಾದ 300 ಮೀಟರ್ ಉದ್ದದ ಅಟಲ್ ಪಾದಚಾರಿ ಸೇತುವೆ ಇಲ್ಲಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ. 15ನೇ ಶತಮಾನದ ಕಾಂಕರಿಯಾ ಕೆರೆಯನ್ನು ಪುನರ್‌ಅಭಿವೃದ್ಧಿಪಡಿಸಿ, 2.3 ಕಿಲೋಮೀಟರ್ ಉದ್ದದ ಕೆರೆ ದಂಡೆಯನ್ನು ನಿರ್ಮಿಸಲಾಗಿದೆ. ಇಲ್ಲಿ ವಿವಿಧ ಮನರಂಜನಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.



22. ಕಾಶಿ ವಿಶ್ವನಾಥ ಧಾಮ ಮತ್ತು ಮಹಾಕಾಲ ಲೋಕ - ತೀರ್ಥಯಾತ್ರೆಯ ಅನುಭವಕ್ಕೆ ಹೊಸ ರೂಪ. ಕಾಶಿ ವಿಶ್ವನಾಥ ಧಾಮದಲ್ಲಿ ಈಗ 23 ಕಟ್ಟಡಗಳು ಲಲಿತಾ ಘಾಟ್ ಅನ್ನು ದೇವಾಲಯದೊಂದಿಗೆ ಸಂಪರ್ಕಿಸುತ್ತವೆ. ಇದರಿಂದ ಗಂಗಾ ನದಿಯಿಂದ ದೇವಾಲಯದವರೆಗೆ ಭಕ್ತರು ಯಾವುದೇ ಅಡಚಣೆಯಿಲ್ಲದೆ ಸಾಗಲು ಅನುಕೂಲವಾಗಿದೆ. ಉಜ್ಜಯಿನಿಯ ಮಹಾಕಾಲ ಲೋಕವು ಸುಮಾರು 900 ಮೀಟರ್ ಉದ್ದವಿದ್ದು, ಭಗವಾನ್ ಶಿವನ ಆನಂದ ತಾಂಡವದ ಭಂಗಿಗಳನ್ನು ಕೆತ್ತಲಾಗಿರುವ 108 ಮರಳುಗಲ್ಲಿನ ಕಂಬಗಳಿಂದ ಅಲಂಕರಿಸಲಾಗಿದೆ.

23. ಕೇದಾರನಾಥ, ಸೋಮನಾಥ ಮತ್ತು ಅಂಬಾಜಿ - 'ಪರಂಪರೆಯೂ, ಅಭಿವೃದ್ಧಿಯೂ' ಎಂಬ ಮಂತ್ರವನ್ನು ಅಳವಡಿಸಿಕೊಳ್ಳುವುದು. 2013ರ ಪ್ರವಾಹದ ನಂತರ ಕೇದಾರನಾಥವನ್ನು ನೈಸರ್ಗಿಕ ವಿಕೋಪಗಳನ್ನು ಎದುರಿಸುವ ಸಾಮರ್ಥ್ಯ ಹೊಂದುವಂತೆ ಪುನರ್‌ಅಭಿವೃದ್ಧಿಪಡಿಸಲಾಯಿತು. ಇದರಲ್ಲಿ 35 ಟನ್ ತೂಕದ ಆದಿ ಶಂಕರಾಚಾರ್ಯರ ಪ್ರತಿಮೆಯ ಸ್ಥಾಪನೆಯೂ ಸೇರಿದೆ. ಸೋಮನಾಥದಲ್ಲಿ 1.48 ಕಿಲೋಮೀಟರ್ ಉದ್ದದ 'ಸಮುದ್ರ ದರ್ಶನ ಪಥ', ವಿಶೇಷ ಗ್ಯಾಲರಿ ಮತ್ತು ಹಳೆಯ ದೇವಾಲಯದ ಆವರಣದ ಪುನರ್‌ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಅಂಬಾಜಿಯಲ್ಲಿ ₹1,632 ಕೋಟಿ ವೆಚ್ಚದ ಶಕ್ತಿ ಕಾರಿಡಾರ್ ಯೋಜನೆಯು ದೇವಾಲಯ, ಗಬ್ಬರ್ ಬೆಟ್ಟ ಮತ್ತು ಮಾನಸ ಸರೋವರವನ್ನು ಸಂಪರ್ಕಿಸುವ ಗುರಿ ಹೊಂದಿದೆ. ಇದರ ಜೊತೆಗೆ ವಾಹನ ನಿಲುಗಡೆ ಸೌಲಭ್ಯಗಳು, ಕೆಳಸೇತುವೆಗಳು ಮತ್ತು ಯಾತ್ರಿಕರ ಕೇಂದ್ರಗಳಂತಹ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

24. ತ್ರಿಪುರ ಸುಂದರಿ ಮತ್ತು ಶ್ರೀರಾಮ ಜನ್ಮಭೂಮಿ ದೇವಸ್ಥಾನ - ಪರಂಪರೆ ಮತ್ತು ಪುನರುತ್ಥಾನ. ತಾಯಿ ತ್ರಿಪುರ ಸುಂದರಿ ದೇವಾಲಯದ ಸಮೀಪದಲ್ಲಿರುವ '51 ಶಕ್ತಿಪೀಠ ಉದ್ಯಾನ'ದಲ್ಲಿ ವಿವಿಧ ಶಕ್ತಿಪೀಠಗಳ ಪ್ರತಿಕೃತಿಗಳನ್ನು ಸ್ಥಾಪಿಸಲಾಗಿದೆ. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ದೇವಸ್ಥಾನದ ಪ್ರಾಣಪ್ರತಿಷ್ಠಾಪನೆಯು 2024ರ ಜನವರಿ 22ರಂದು ನೆರವೇರಿತು. ದೇವಾಲಯದ ಮುಖ್ಯ ಭಾರ ಹೊರುವ ರಚನೆಯಲ್ಲಿ ಕಬ್ಬಿಣವನ್ನು ಬಳಸಲಾಗಿಲ್ಲ. ಇಲ್ಲಿ ಸೊಗಸಾದ ಕಲ್ಲಿನ ಕೆತ್ತನೆಗಳೊಂದಿಗೆ ಸಾಂಪ್ರದಾಯಿಕ ಕರಕುಶಲ ಕಲೆಗೂ ಆದ್ಯತೆ ನೀಡಲಾಗಿದೆ.

25. ಗಿಫ್ಟ್ ಸಿಟಿ, ಧೋಲೆರಾ ಮತ್ತು ಚರಣ್ಕಾ - ಭವಿಷ್ಯದ ಆರ್ಥಿಕತೆ ಮತ್ತು ಇಂಧನ. ಗಿಫ್ಟ್ ಸಿಟಿಯು ಭಾರತದ ಮೊದಲ ಕಾರ್ಯನಿರ್ವಹಣೆಯಲ್ಲಿರುವ ಅಂತಾರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರ ಐಎಫ್‌ಎಸ್‌ಸಿ ಮತ್ತು ಮೊದಲ ಹಸಿರುಭೂಮಿ ಸ್ಮಾರ್ಟ್ ಸಿಟಿಯಾಗಿದೆ. ಇದರ ಸಮಗ್ರ ಯೋಜನೆಯಲ್ಲಿ ಜಿಲ್ಲಾ ಮಟ್ಟದ ಶೀತಲೀಕರಣ ವ್ಯವಸ್ಥೆ, ಸ್ವಯಂಚಾಲಿತ ತ್ಯಾಜ್ಯ ಸಂಗ್ರಹ ವ್ಯವಸ್ಥೆ ಮತ್ತು ಉಪಯುಕ್ತತಾ ಸುರಂಗಗಳನ್ನು ಅಳವಡಿಸಲಾಗಿದೆ. ಧೋಲೆರಾದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವುದಕ್ಕೂ ಮುನ್ನವೇ ರಸ್ತೆಗಳು, ನೀರು, ವಿದ್ಯುತ್ ಮತ್ತು ಫೈಬರ್ ಸಂಪರ್ಕದಂತಹ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. 2024ರಲ್ಲಿ ಅನುಮೋದಿಸಲಾದ ಸೆಮಿಕಂಡಕ್ಟರ್ ಘಟಕವು ಇಲ್ಲಿ ಸ್ಥಾಪನೆಯಾಗುತ್ತಿರುವ ಮೊದಲ ಪ್ರಮುಖ ಕೈಗಾರಿಕಾ ಸೌಲಭ್ಯವಾಗಿದೆ. ಚರಣ್ಕಾ ಸೋಲಾರ್ ಪಾರ್ಕ್ ಹಂಚಿಕೆಯ ಭೂಮಿ, ರಸ್ತೆಗಳು ಮತ್ತು ವಿದ್ಯುತ್ ಪ್ರಸರಣ ಮೂಲಸೌಕರ್ಯವನ್ನು ಬಳಸಿಕೊಂಡು ಬೃಹತ್ ಪ್ರಮಾಣದ ಸೌರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ.





25 ವರ್ಷಗಳು, 25 ಉಪಕ್ರಮಗಳು
ಸಾರ್ವಜನಿಕ ಸೇವೆಯಿಂದ ಜನರ ಸಹಭಾಗಿತ್ವದತ್ತ

ಗುಜರಾತ್‌ನಲ್ಲಿ ಆರಂಭವಾದ ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ಪಯಣವು, ಕಟ್ಟಕಡೆಯ ವ್ಯಕ್ತಿಗೂ ಸೇವೆಗಳನ್ನು ತಲುಪಿಸುವ, ಅವಕಾಶಗಳನ್ನು ವಿಸ್ತರಿಸುವ ಮತ್ತು ನಾಗರಿಕರ ಬದುಕನ್ನು ಸುಗಮಗೊಳಿಸುವ ಉದ್ದೇಶದ ಹಲವಾರು ಉಪಕ್ರಮಗಳಿಗೆ ಸಾಕ್ಷಿಯಾಗಿದೆ. ಈ 25 ವರ್ಷಗಳ ಪಯಣದ ಸಾರವೆಂದರೆ ಉತ್ತಮ ಆಡಳಿತದಿಂದ ಸೇವೆಯತ್ತ, ಸೇವೆಯಿಂದ ಸಬಲೀಕರಣದತ್ತ ಮತ್ತು ಸಬಲೀಕರಣದಿಂದ ಅಭಿವೃದ್ಧಿ ಹೊಂದಿದ ಭಾರತದತ್ತ ಸಾಗಿದ ಪ್ರಗತಿ. ಈ 25 ವರ್ಷಗಳ ಪಯಣದ 25 ಪ್ರಮುಖ ಉಪಕ್ರಮಗಳು ಇಲ್ಲಿವೆ:

1. ಕನ್ಯಾ ಕೇವಾಣಿ ಮತ್ತು ಶಾಲಾ ಪ್ರವೇಶೋತ್ಸವ

ಒಟ್ಟು ದಾಖಲಾತಿ ಪ್ರಮಾಣದಲ್ಲಿ ಸುಧಾರಣೆ | ಶಾಲೆ ತೊರೆಯುವ ಪ್ರಮಾಣದಲ್ಲಿ ಇಳಿಕೆ

- 2003ರಲ್ಲಿ ಆರಂಭಿಸಲಾದ ಈ ಉಪಕ್ರಮಗಳು ಶಾಲಾ ದಾಖಲಾತಿಯನ್ನು ಕೇವಲ ಆಡಳಿತಾತ್ಮಕ ಗುರಿಯಾಗಿ ಪರಿಗಣಿಸುವುದರಿಂದ ಹೊರತಂದು, ಅದನ್ನು ಸಾಮಾಜಿಕ ಸಂಭ್ರಮವಾಗಿ ಪರಿವರ್ತಿಸಿದವು. ಮಕ್ಕಳನ್ನು - ವಿಶೇಷವಾಗಿ ಹೆಣ್ಣುಮಕ್ಕಳನ್ನು - ಶಾಲೆಗಳಿಗೆ ದಾಖಲಿಸುವಂತೆ ಉತ್ತೇಜಿಸಲು ಸಚಿವರು, ಅಧಿಕಾರಿಗಳು, ಶಿಕ್ಷಕರು ಮತ್ತು ಸಮುದಾಯದವರು ಗ್ರಾಮಗಳಿಗೆ ಭೇಟಿ ನೀಡಿದರು.

2. ಸ್ವಾಗತ್ (SWAGAT)

ಲಕ್ಷಾಂತರ ಕುಂದುಕೊರತೆಗಳು | ಶೇ. 99ರಷ್ಟು ಪರಿಹಾರ ಪ್ರಮಾಣ

- 2003ರಲ್ಲಿ ಆರಂಭಿಸಲಾದ 'ಸ್ವಾಗತ್' ವೇದಿಕೆಯು, ನಾಗರಿಕರ ಕುಂದುಕೊರತೆಗಳನ್ನು ನೇರವಾಗಿ ಮುಖ್ಯಮಂತ್ರಿಗಳಿಗೆ ತಲುಪಿಸುವ ಮತ್ತು ಅವುಗಳ ಪರಿಹಾರವನ್ನು ಪಾರದರ್ಶಕವಾಗಿ ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯನ್ನು ಸ್ಥಾಪಿಸಿತು. ಲಕ್ಷಾಂತರ ಕುಂದುಕೊರತೆಗಳಲ್ಲಿ ಶೇ. 99ರಷ್ಟು ಪರಿಹಾರ ಪ್ರಮಾಣದೊಂದಿಗೆ, ನಾಗರಿಕರು ಮತ್ತು ಆಡಳಿತದ ನಡುವಿನ ಪರಿಣಾಮಕಾರಿ ಸೇತುವೆಯಾಗಿ ತಂತ್ರಜ್ಞಾನ ರೂಪುಗೊಂಡಿತು.

3. ಜ್ಯೋತಿಗ್ರಾಮ ಯೋಜನೆ

18,000ಕ್ಕೂ ಹೆಚ್ಚು ಗ್ರಾಮಗಳು | ಫೀಡರ್‌ಗಳ ಪ್ರತ್ಯೇಕತೆಯೊಂದಿಗೆ 24x7 ವಿದ್ಯುತ್ ಪೂರೈಕೆ

- 2006ರಲ್ಲಿ ಫೀಡರ್‌ಗಳ ಪ್ರತ್ಯೇಕತೆಯ ಮೂಲಕ ಕೃಷಿ ಮತ್ತು ಗೃಹಬಳಕೆಯ ವಿದ್ಯುತ್ ಪೂರೈಕೆಯನ್ನು ಪ್ರತ್ಯೇಕಿಸಲಾಯಿತು. ವಿಶ್ವಾಸಾರ್ಹ, ಮೂರು ಹಂತದ, 24 ಗಂಟೆಗಳ ವಿದ್ಯುತ್ ಪೂರೈಕೆಯು 18,000ಕ್ಕೂ ಹೆಚ್ಚು ಗ್ರಾಮಗಳನ್ನು ತಲುಪಿತು. ಇದೇ ವೇಳೆ, ಕೃಷಿ ವಿದ್ಯುತ್ ಸಬ್ಸಿಡಿಯನ್ನು ಸುಮಾರು ಅರ್ಧದಷ್ಟು ಕಡಿಮೆ ಮಾಡಲಾಯಿತು.

4. ಗರೀಬ್ ಕಲ್ಯಾಣ ಮೇಳ

ಇಲ್ಲಿಯವರೆಗೆ ₹36,800 ಕೋಟಿಗೂ ಹೆಚ್ಚು | 1.66 ಕೋಟಿ ಫಲಾನುಭವಿಗಳು | 1,600 ಮೇಳಗಳು

- 2009ರಲ್ಲಿ ಆರಂಭಿಸಲಾದ ಈ ಉಪಕ್ರಮವು ಕಲ್ಯಾಣ ಯೋಜನೆಗಳನ್ನು ಆಡಳಿತಾತ್ಮಕ ಕಡತಗಳು ಮತ್ತು ಮಧ್ಯವರ್ತಿಗಳ ವ್ಯಾಪ್ತಿಯಿಂದ ಹೊರತಂದು, ಅವುಗಳ ಪ್ರಯೋಜನಗಳನ್ನು ನೇರವಾಗಿ ಉದ್ದೇಶಿತ ಫಲಾನುಭವಿಗಳಿಗೆ ತಲುಪಿಸಿತು. ಇಲ್ಲಿಯವರೆಗೆ 1,600ಕ್ಕೂ ಹೆಚ್ಚು ಮೇಳಗಳ ಮೂಲಕ 1.66 ಕೋಟಿ ಫಲಾನುಭವಿಗಳಿಗೆ ₹36,800 ಕೋಟಿಗೂ ಹೆಚ್ಚಿನ ಮೌಲ್ಯದ ಪ್ರಯೋಜನಗಳು ತಲುಪಿವೆ.

5. ವನಬಂಧು ಕಲ್ಯಾಣ ಯೋಜನೆ

10 ಅಂಶಗಳ ಅಭಿವೃದ್ಧಿ ಅಭಿಯಾನ

- 2007ರಲ್ಲಿ ಆರಂಭಿಸಲಾದ ಈ 10 ಅಂಶಗಳ ಉಪಕ್ರಮವು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ 'ಮಿಷನ್ ಮೋಡ್'ನಲ್ಲಿ ವೇಗ ನೀಡಿತು. ಶಿಕ್ಷಣ, ಆರೋಗ್ಯ, ವಸತಿ, ಜೀವನೋಪಾಯ, ಕೌಶಲ್ಯಾಭಿವೃದ್ಧಿ, ನೀರಾವರಿ, ಮೂಲಸೌಕರ್ಯ ಮತ್ತು ವಿದ್ಯುದೀಕರಣ ಸೇರಿದಂತೆ ವಿವಿಧ ಕ್ಷೇತ್ರಗಳ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಯ ಮುಖ್ಯವಾಹಿನಿಯೊಂದಿಗೆ ಸಂಯೋಜಿಸುವುದಕ್ಕೆ ಇದು ಒತ್ತು ನೀಡಿತು.



"ನಾನು ಸಣ್ಣ ಅಥವಾ ಸುಲಭ ಗುರಿಗಳೊಂದಿಗೆ ತೃಪ್ತಿಪಡುವ ವ್ಯಕ್ತಿಯಲ್ಲ. ರಾಷ್ಟ್ರಕ್ಕಾಗಿ ಮಹತ್ವಾಕಾಂಕ್ಷೆಯ ಗುರಿಗಳನ್ನು ನಿಗದಿಪಡಿಸುತ್ತೇನೆ ಮತ್ತು ಅವುಗಳನ್ನು ಸಾಧಿಸಲು ನನ್ನ ಹೃದಯ ಮತ್ತು ಆತ್ಮವನ್ನು ಸಂಪೂರ್ಣವಾಗಿ ಸಮರ್ಪಿಸುತ್ತೇನೆ"

ನರೇಂದ್ರ ಮೋದಿ, ಪ್ರಧಾನಮಂತ್ರಿ

6. ಸಾಗರಖೇಡು ಸರ್ವಾಂಗಿ ವಿಕಾಸ ಯೋಜನೆ

60 ಲಕ್ಷ ಜನರು | 3,000 ಕರಾವಳಿ ಗ್ರಾಮಗಳು

- 2007ರಲ್ಲಿ ಆರಂಭಿಸಲಾದ ಈ ಯೋಜನೆಯಡಿ 3,000 ಕರಾವಳಿ ಗ್ರಾಮಗಳು ಮತ್ತು 60 ಲಕ್ಷಕ್ಕೂ ಹೆಚ್ಚು ಜನರಿಗಾಗಿ ಮೂಲಸೌಕರ್ಯ, ಜೀವನೋಪಾಯ, ನೀರಾವರಿ, ಉಪ್ಪುನೀರಿನ ಸಮಸ್ಯೆ ನಿಯಂತ್ರಣ, ಮೀನುಗಾರಿಕೆ ಮತ್ತು ಕರಾವಳಿ ರಕ್ಷಣೆಯನ್ನು ಸಮಗ್ರವಾಗಿ ಒಳಗೊಳ್ಳಲಾಯಿತು. ಮೀನುಗಾರರಿಗೆ ಜಿಪಿಎಸ್, ಸುರಕ್ಷತಾ ಸಾಧನಗಳು, ಸೌರ ದೀಪಗಳು ಮತ್ತು ತುರ್ತು ಸಂಕೇತ ವ್ಯವಸ್ಥೆಗಳಂತಹ ಸೌಲಭ್ಯಗಳನ್ನೂ ಒದಗಿಸಲಾಯಿತು.

7. ಜನ್‌ಧನ್ & ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ)


59 ಕೋಟಿಗೂ ಹೆಚ್ಚು ಖಾತೆಗಳು | ₹3.17 ಲಕ್ಷ ಕೋಟಿಗೂ ಅಧಿಕ ಠೇವಣಿ

- 2014ರಲ್ಲಿ ಪ್ರಧಾನಮಂತ್ರಿ ಜನ್ ಧನ್ ಯೋಜನೆಯು ಪ್ರತಿಯೊಬ್ಬ ವ್ಯಕ್ತಿಗೂ ಬ್ಯಾಂಕಿಂಗ್ ಸೇವೆಗಳನ್ನು ತಲುಪಿಸುವ ಅಭಿಯಾನವನ್ನು ಆರಂಭಿಸಿತು. 2026ರ ಸೆಪ್ಟೆಂಬರ್ ವೇಳೆಗೆ 59 ಕೋಟಿಗೂ ಹೆಚ್ಚು ಖಾತೆಗಳನ್ನು ತೆರೆಯಲಾಗಿದ್ದು, ₹3.17 ಲಕ್ಷ ಕೋಟಿಗೂ ಅಧಿಕ ಠೇವಣಿ ಸಂಗ್ರಹವಾಗಿದೆ. ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಮೂಲಕ ಹಣವನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸಲಾಯಿತು; ₹53.24 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ವರ್ಗಾಯಿಸಲಾಗಿದ್ದು, ಇದರಿಂದ ₹5 ಲಕ್ಷ ಕೋಟಿಗೂ ಹೆಚ್ಚಿನ ಉಳಿತಾಯವಾಗಿದೆ ಎಂದು ಅಂದಾಜಿಸಲಾಗಿದೆ.

8. ಮೇಕ್ ಇನ್ ಇಂಡಿಯಾ

₹20 ಲಕ್ಷ ಕೋಟಿಗೂ ಅಧಿಕ ಮೌಲ್ಯದ ಉತ್ಪಾದನೆ | ಪಿಎಲ್‌ಐ ಮೂಲಕ 14 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ

- ಪಿಎಲ್‌ಐ, ಸೆಮಿಕಂಡಕ್ಟರ್ ಮತ್ತು ಬಿಡಿಭಾಗಗಳ ಉತ್ಪಾದನಾ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಉಪಕ್ರಮಗಳ ನೆರವಿನಿಂದ ಎಲೆಕ್ಟ್ರಾನಿಕ್ಸ್ ಉತ್ಪಾದನೆಯು 2014-15ರಲ್ಲಿ ₹1.9 ಲಕ್ಷ ಕೋಟಿಯಿಂದ 2025-26ರಲ್ಲಿ ₹13.11 ಲಕ್ಷ ಕೋಟಿಗೆ ಏರಿಕೆಯಾಗಿದೆ. 14 ಪಿಎಲ್‌ಐ ಕ್ಷೇತ್ರಗಳು 14 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿವೆ.



9. ಸ್ವಚ್ಛ ಭಾರತ್ ಮಿಷನ್

12 ಕೋಟಿಗೂ ಹೆಚ್ಚು ಶೌಚಾಲಯಗಳು

- 2014ರಲ್ಲಿ ಆರಂಭಿಸಲಾದ ಈ ಅಭಿಯಾನವು ಸ್ವಚ್ಛತೆಯನ್ನು ಜನಾಂದೋಲನವಾಗಿ ಪರಿವರ್ತಿಸಿತು. 12 ಕೋಟಿಗೂ ಹೆಚ್ಚು ಕುಟುಂಬ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, 2019ರ ವೇಳೆಗೆ ಗ್ರಾಮಗಳನ್ನು ಬಯಲು ಶೌಚಮುಕ್ತ (ಒಡಿಎಫ್) ಎಂದು ಘೋಷಿಸಲಾಯಿತು. 'ಸ್ವಚ್ಛತಾ ಸರ್ವೇಕ್ಷಣ್' (ಸ್ವಚ್ಛತಾ ಸಮೀಕ್ಷೆ) ನಗರಗಳು ಮತ್ತು ಪಟ್ಟಣಗಳಲ್ಲಿ ಆರೋಗ್ಯಕರ ಸ್ಪರ್ಧೆ ಹಾಗೂ ನಾಗರಿಕರ ಸಹಭಾಗಿತ್ವವನ್ನು ಉತ್ತೇಜಿಸಿತು. 2014ರ ಅಕ್ಟೋಬರ್ 2ರಂದು ಪೊರಕೆ ಹಿಡಿದು ಸ್ವತಃ ಸ್ವಚ್ಛತಾ ಕಾರ್ಯದಲ್ಲಿ ತೊಡಗುವ ಮೂಲಕ ಪ್ರಧಾನಮಂತ್ರಿ ಮೋದಿ ಅವರು ಈ ಉಪಕ್ರಮಕ್ಕೆ ವೈಯಕ್ತಿಕವಾಗಿ ನೇತೃತ್ವ ನೀಡಿದರು.

10. ಸಾಮಾಜಿಕ ಭದ್ರತೆ

94 ಕೋಟಿ ಜನರು | ಸಾಮಾಜಿಕ ಭದ್ರತಾ ವ್ಯಾಪ್ತಿ: ಶೇ. 64.3

- ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ, ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ ಮತ್ತು ಇ-ಶ್ರಮ್ ಸೇರಿದಂತೆ ವಿವಿಧ ಉಪಕ್ರಮಗಳ ಮೂಲಕ ಔಪಚಾರಿಕ ಉದ್ಯೋಗ ವಲಯದ ಹೊರಗಿರುವವರಿಗೂ ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. 2025ರ ವೇಳೆಗೆ 94.3 ಕೋಟಿ ಭಾರತೀಯರನ್ನು ಸಾಮಾಜಿಕ ಭದ್ರತಾ ವ್ಯಾಪ್ತಿಗೆ ತರಲಾಗಿದ್ದು, 2015ರಲ್ಲಿ ಶೇ. 19ರಷ್ಟಿದ್ದ ಸಾಮಾಜಿಕ ಭದ್ರತಾ ವ್ಯಾಪ್ತಿಯು ಶೇ. 64.3ಕ್ಕೆ ಏರಿಕೆಯಾಯಿತು.
- 2023ರ ನವೆಂಬರ್‌ನಲ್ಲಿ ಆರಂಭಿಸಲಾದ ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (ಪಿಎಂ-ಜನಮನ್)ವು ಭಾರತದ 75 ಅತ್ಯಂತ ದುರ್ಬಲ ಬುಡಕಟ್ಟು ಗುಂಪುಗಳು (ಪಿವಿಟಿಜಿ) ಅಭಿವೃದ್ಧಿಯ ಅಂಚಿನಲ್ಲಿ ಉಳಿಯದಂತೆ ಖಚಿತಪಡಿಸುವ ಉದ್ದೇಶದೊಂದಿಗೆ ರೂಪಿಸಲಾದ ಕೇಂದ್ರೀಕೃತ ಅಭಿಯಾನವಾಗಿದೆ. ಇದಕ್ಕಾಗಿ ₹24,000 ಕೋಟಿಗೂ ಹೆಚ್ಚಿನ ಅನುದಾನವನ್ನು ಒದಗಿಸಲಾಗಿದೆ.

11. ಸಾಗರಮಾಲಾ ಕಾರ್ಯಕ್ರಮ

845ಕ್ಕೂ ಹೆಚ್ಚು ಯೋಜನೆಗಳು | ₹6 ಲಕ್ಷ ಕೋಟಿಗೂ ಅಧಿಕ ಹೂಡಿಕೆ

- 2015ರಲ್ಲಿ ಆರಂಭಿಸಲಾದ ಸಾಗರಮಾಲಾ ಕಾರ್ಯಕ್ರಮವು ಬಂದರುಗಳನ್ನು ರಸ್ತೆಗಳು, ರೈಲುಮಾರ್ಗಗಳು, ಕೈಗಾರಿಕೆಗಳು ಮತ್ತು ಕರಾವಳಿ ಸಮುದಾಯಗಳೊಂದಿಗೆ ಸಂಪರ್ಕಿಸುವ ಗುರಿ ಹೊಂದಿದೆ. ₹6.06 ಲಕ್ಷ ಕೋಟಿ ಮೌಲ್ಯದ 845ಕ್ಕೂ ಹೆಚ್ಚು ಯೋಜನೆಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ 315 ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ. ಪ್ರಮುಖ ಬಂದರುಗಳಲ್ಲಿ ಹಡಗುಗಳ ಸರಾಸರಿ ನಿಲುಗಡೆ ಅವಧಿಯು 2014ರಲ್ಲಿ 96 ಗಂಟೆಗಳಿದ್ದದ್ದು 2025ರಲ್ಲಿ ಸುಮಾರು 49 ಗಂಟೆಗಳಿಗೆ ಇಳಿಕೆಯಾಗಿದೆ. ಭಾರತದ ಪ್ರಮುಖ ಬಂದರುಗಳ ಸಾಮರ್ಥ್ಯವು 2014ರಲ್ಲಿ 873 ಎಂಟಿಪಿಎಯಿಂದ 2026ರಲ್ಲಿ 1,728 ಎಂಟಿಪಿಎಗೆ ಏರಿಕೆಯಾಗಿದ್ದು, ಸುಮಾರು ದ್ವಿಗುಣಗೊಂಡಿದೆ.

12. ಪ್ರಧಾನಮಂತ್ರಿ ಮುದ್ರಾ ಯೋಜನೆ

57+ ಕೋಟಿ ಸಾಲಗಳು | ₹40 ಲಕ್ಷ ಕೋಟಿಗೂ ಅಧಿಕ ಮೊತ್ತ ವಿತರಣೆ

- 2015ರಲ್ಲಿ ಆರಂಭಿಸಲಾದ ಪ್ರಧಾನಮಂತ್ರಿ ಮುದ್ರಾ ಯೋಜನೆಯು ಸಣ್ಣ ಉದ್ಯಮಿಗಳಿಗೆ ಯಾವುದೇ ಖಾತರಿಯಿಲ್ಲದೆ ಸಾಲಗಳನ್ನು ಒದಗಿಸಿತು. 57 ಕೋಟಿಗೂ ಹೆಚ್ಚು ಸಾಲಗಳ ಮೂಲಕ ₹40 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ವಿತರಿಸಲಾಗಿದೆ. ಸಾಲ ಪಡೆದವರಲ್ಲಿ ಶೇ. 68ರಷ್ಟು ಮಹಿಳೆಯರಾಗಿದ್ದು, ಶೇ. 51ರಷ್ಟು ಸಾಲಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ (ಪ.ಜಾ./ಪ.ಪಂ./ಒಬಿಸಿ) ಫಲಾನುಭವಿಗಳಿಗೆ ನೀಡಲಾಗಿದೆ. 2024ರಲ್ಲಿ ಸಾಲದ ಮಿತಿಯನ್ನು ₹ 20 ಲಕ್ಷಕ್ಕೆ ಹೆಚ್ಚಿಸಲಾಯಿತು.



13. ಸ್ಟಾರ್ಟ್‌ಅಪ್ ಇಂಡಿಯಾ

2.5 ಲಕ್ಷಕ್ಕೂ ಹೆಚ್ಚು ನವೋದ್ಯಮಗಳು | 23.36 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು

- 2016ರಲ್ಲಿ ಆರಂಭಿಸಲಾದ ಈ ಉಪಕ್ರಮವು ಉದ್ಯಮಶೀಲತೆಯನ್ನು ರಾಷ್ಟ್ರೀಯ ಆಶಯವಾಗಿ ಪರಿವರ್ತಿಸಿತು. 2026ರ ಸೆಪ್ಟೆಂಬರ್ ವೇಳೆಗೆ 2.5 ಲಕ್ಷಕ್ಕೂ ಹೆಚ್ಚು ಮಾನ್ಯತೆ ಪಡೆದ ನವೋದ್ಯಮಗಳು 23 ಲಕ್ಷಕ್ಕೂ ಅಧಿಕ ನೇರ ಉದ್ಯೋಗಗಳನ್ನು ಸೃಷ್ಟಿಸಿವೆ. ಈ ನವೋದ್ಯಮಗಳಲ್ಲಿ ಸುಮಾರು ಅರ್ಧದಷ್ಟು 2 ಮತ್ತು 3ನೇ ಹಂತದ ನಗರಗಳಿಂದ ಬಂದಿದ್ದು, ಸುಮಾರು ಶೇ. 50ರಷ್ಟು ನವೋದ್ಯಮಗಳಲ್ಲಿ ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕಿ ಅಥವಾ ಪಾಲುದಾರರು ಇದ್ದಾರೆ.

14. ಪ್ರಧಾನಮಂತ್ರಿ ಉಜ್ವಲ ಯೋಜನೆ: ಹೊಗೆಯಿಂದ ಮುಕ್ತಿ

ಸುಮಾರು 11 ಕೋಟಿಗೂ ಹೆಚ್ಚು ಸಂಪರ್ಕಗಳು

- 2016ರಲ್ಲಿ ಆರಂಭಿಸಲಾದ ಉಜ್ವಲ ಯೋಜನೆಯಡಿ 2026ರ ಮೇ ವೇಳೆಗೆ 10.6 ಕೋಟಿಗೂ ಹೆಚ್ಚು ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಲಾಗಿದೆ. ಇದರಿಂದ ಹೊಗೆ ಉಂಟುಮಾಡುವ ಇಂಧನಗಳ ಮೇಲಿನ ಅವಲಂಬನೆ ಕಡಿಮೆಯಾಗಿ, ಮಹಿಳೆಯರ ಆರೋಗ್ಯ, ಸಮಯ ಮತ್ತು ಅವಕಾಶಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ.

15. ಡಿಜಿಟಲ್ ಪಾವತಿ ಕ್ರಾಂತಿ – ಯುಪಿಐ

24,162 ಕೋಟಿ ವಹಿವಾಟುಗಳು | 55 ಕೋಟಿಗೂ ಹೆಚ್ಚು ಬಳಕೆದಾರರು

- 2016ರಲ್ಲಿ ಆರಂಭಿಸಲಾದ ಯುಪಿಐ, ಡಿಜಿಟಲ್ ಪಾವತಿಯನ್ನು ದೈನಂದಿನ ಜೀವನದ ಸುಲಭ ಸೇವೆಯಾಗಿ ಪರಿವರ್ತಿಸಿತು. ವಾರ್ಷಿಕ ವಹಿವಾಟುಗಳು 2016ರಲ್ಲಿ 1.78 ಕೋಟಿಯಿಂದ 2025-26ರ ಹಣಕಾಸು ವರ್ಷದಲ್ಲಿ 24,162 ಕೋಟಿಗೆ ಏರಿಕೆಯಾದವು. 2026ರ ಜೂನ್ ವೇಳೆಗೆ ಈ ವೇದಿಕೆಯನ್ನು 55.5 ಕೋಟಿ ಬಳಕೆದಾರರು ಬಳಸುತ್ತಿದ್ದು, 2026ರ ಜುಲೈ ವೇಳೆಗೆ 741 ಬ್ಯಾಂಕುಗಳು ಇದರೊಂದಿಗೆ ಸಂಯೋಜನೆಗೊಂಡಿದ್ದವು. ವಹಿವಾಟಿನ ಮೌಲ್ಯವು ₹0.07 ಲಕ್ಷ ಕೋಟಿಯಿಂದ ₹314 ಲಕ್ಷ ಕೋಟಿಗೆ ಏರಿಕೆಯಾಗಿದೆ. ಯುಪಿಐ ಈಗ 11 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

16. ಸರಕು ಮತ್ತು ಸೇವೆಗಳ ತೆರಿಗೆ – ಜಿಎಸ್‌ಟಿ

ಒಂದು ರಾಷ್ಟ್ರ – ಒಂದು ತೆರಿಗೆ | 2025ರ ಹಣಕಾಸು ವರ್ಷದಲ್ಲಿ ₹22 ಲಕ್ಷ ಕೋಟಿಗೂ ಅಧಿಕ ಒಟ್ಟು ಜಿಎಸ್‌ಟಿ ಸಂಗ್ರಹ

- 2017ರಲ್ಲಿ ಜಾರಿಗೆ ಬಂದ ಜಿಎಸ್‌ಟಿಯು ಕೇಂದ್ರ ಮತ್ತು ರಾಜ್ಯಗಳ ವಿವಿಧ ತೆರಿಗೆಗಳನ್ನು ಏಕೀಕೃತ ವ್ಯವಸ್ಥೆಯಡಿ ತರುವ ಮೂಲಕ 'ಒಂದು ರಾಷ್ಟ್ರ, ಒಂದು ತೆರಿಗೆ, ಒಂದು ಮಾರುಕಟ್ಟೆ' ಎಂಬ ಪರಿಕಲ್ಪನೆಗೆ ಮತ್ತಷ್ಟು ಬಲ ನೀಡಿತು. ತೆರಿಗೆದಾರರ ಸಂಖ್ಯೆ 2017ರಲ್ಲಿದ್ದ 66.5 ಲಕ್ಷದಿಂದ 2026ರ ಮೇ ವೇಳೆಗೆ 1.65 ಕೋಟಿಗೆ ಏರಿಕೆಯಾಗಿದೆ. 2025-26ರ ಹಣಕಾಸು ವರ್ಷದಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ ₹22.27 ಲಕ್ಷ ಕೋಟಿಯಷ್ಟಿತ್ತು.

17. ಆಯುಷ್ಮಾನ್ ಭಾರತ್ ಮತ್ತು ಆರೋಗ್ಯ ಭದ್ರತೆ

₹5 ಲಕ್ಷದವರೆಗೆ ಆರೋಗ್ಯ ರಕ್ಷಣೆ | 12 ಕೋಟಿಗೂ ಹೆಚ್ಚು ಕುಟುಂಬಗಳಿಗೆ ವ್ಯಾಪ್ತಿ

- 2026ರ ಜೂನ್ ವೇಳೆಗೆ 37,413 ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ 12.69 ಕೋಟಿ ರೋಗಿಗಳು ಚಿಕಿತ್ಸೆ ಪಡೆದಿದ್ದು, ಇದರಿಂದ ಸಾಮಾನ್ಯ ಜನರಿಗೆ ₹1.92 ಲಕ್ಷ ಕೋಟಿಯಷ್ಟು ಉಳಿತಾಯವಾಗಿದೆ. 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರನ್ನೂ ಈ ಯೋಜನೆಯ ವ್ಯಾಪ್ತಿಗೆ ಸೇರಿಸಲಾಗಿದೆ.

18. ಜಲ ಜೀವನ್ ಮಿಷನ್

12 ಕೋಟಿಗೂ ಹೆಚ್ಚು ಹೊಸ ನಲ್ಲಿ ಸಂಪರ್ಕಗಳು | ಶೇ. 82ಕ್ಕೂ ಅಧಿಕ ವ್ಯಾಪ್ತಿ

- 2019ರಲ್ಲಿ ಆರಂಭಿಸಲಾದ ಈ ಮಿಷನ್‌ನ ಉದ್ದೇಶ ಗ್ರಾಮೀಣ ಕುಟುಂಬಗಳಿಗೆ ನಲ್ಲಿಯ ಮೂಲಕ ಕುಡಿಯುವ ನೀರನ್ನು ಒದಗಿಸುವುದಾಗಿದೆ. ನಲ್ಲಿ ಸಂಪರ್ಕ ಹೊಂದಿರುವ ಗ್ರಾಮೀಣ ಕುಟುಂಬಗಳ ಸಂಖ್ಯೆ 3.23 ಕೋಟಿಯಿಂದ 2026ರ ಜೂನ್ ವೇಳೆಗೆ ಸುಮಾರು 16 ಕೋಟಿಗೆ ಏರಿಕೆಯಾಗಿದೆ. ನೀರಿನ ಗುಣಮಟ್ಟ ಪರೀಕ್ಷೆಯಲ್ಲಿ 5 ಲಕ್ಷಕ್ಕೂ ಹೆಚ್ಚು ನೀರು ಸಮಿತಿಗಳು ಮತ್ತು 24.8 ಲಕ್ಷ ಮಹಿಳೆಯರಿಗೆ ತರಬೇತಿ ನೀಡಲಾಗಿದೆ.

19. ಪಿಎಂ-ಕಿಸಾನ್

₹4 ಲಕ್ಷ ಕೋಟಿಗೂ ಅಧಿಕ | 9.44 ಕೋಟಿ ರೈತರು

- 2019ರಿಂದ ರೈತರಿಗೆ ವಾರ್ಷಿಕ ₹6,000 ಮೊತ್ತವನ್ನು ಮೂರು ಕಂತುಗಳಲ್ಲಿ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತಿದೆ. 2026ರ ಜುಲೈ ವೇಳೆಗೆ ₹4 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ವಿತರಿಸಲಾಗಿದೆ.

20. ಲಕ್ಷಾಧಿಪತಿ ದೀದಿ ಮತ್ತು ನಮೋ ಡ್ರೋನ್ ದೀದಿ

3 ಕೋಟಿಗೂ ಹೆಚ್ಚು ಲಕ್ಷಾಧಿಪತಿ ದೀದಿಯರು | ಸ್ವಸಹಾಯ ಗುಂಪುಗಳಲ್ಲಿ 10.57 ಕೋಟಿ ಮಹಿಳೆಯರು

- 'ಲಕ್ಷಾಧಿಪತಿ ದೀದಿ' ಉಪಕ್ರಮವು ಗ್ರಾಮೀಣ ಮಹಿಳೆಯರನ್ನು ಕೇವಲ ನೆರವಿನ ಫಲಾನುಭವಿಗಳಾಗಿ ಉಳಿಯುವುದರಿಂದ ಹೊರತಂದು, ಸುಸ್ಥಿರ ಆದಾಯದ ಅವಕಾಶಗಳು ಮತ್ತು ಉದ್ಯಮಶೀಲತೆಯೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಅವರನ್ನು ಸಬಲಗೊಳಿಸಿತು. 2026ರ ಮೇ ವೇಳೆಗೆ 3.07 ಕೋಟಿ ಮಹಿಳೆಯರು 'ಲಕ್ಷಾಧಿಪತಿ ದೀದಿ'ಯರಾಗಿದ್ದು, 10.57 ಕೋಟಿಗೂ ಹೆಚ್ಚು ಮಹಿಳೆಯರನ್ನು ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸಲಾಗಿದೆ. 'ನಮೋ ಡ್ರೋನ್ ದೀದಿ' ಯೋಜನೆಯು 15,000 ಡ್ರೋನ್‌ಗಳನ್ನು ನಿಯೋಜಿಸುವ ಗುರಿಯನ್ನು ಹೊಂದಿದೆ.



21. ಭಾರತದ ಸೌರ ಕ್ರಾಂತಿ

164 ಗಿಗಾವ್ಯಾಟ್‌ಗೂ ಹೆಚ್ಚು ಸೌರ ವಿದ್ಯುತ್ | 14.8 ಗಿಗಾವ್ಯಾಟ್ ಮೇಲ್ಛಾವಣಿ ಸೌರ ವಿದ್ಯುತ್ ಸ್ಥಾವರಗಳು

- ಗುಜರಾತ್‌ನ ಸೌರ ಉಪಕ್ರಮಗಳಿಂದ ಪಡೆದ ಅನುಭವವು ದೇಶಾದ್ಯಂತ ಸೌರಶಕ್ತಿ ವಿಸ್ತರಣೆಗೆ ಅಡಿಪಾಯ ಹಾಕಿತು. ಭಾರತದಲ್ಲಿ ಸ್ಥಾಪಿತ ಸೌರ ವಿದ್ಯುತ್ ಸಾಮರ್ಥ್ಯವು 2014ರಲ್ಲಿ 2.8 ಗಿಗಾವ್ಯಾಟ್‌ನಷ್ಟಿದ್ದು, 2026ರ ಜುಲೈ ವೇಳೆಗೆ ಸುಮಾರು 165 ಗಿಗಾವ್ಯಾಟ್‌ಗೆ ಏರಿಕೆಯಾಗಿದೆ. ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ 51 ಲಕ್ಷ ಕುಟುಂಬಗಳನ್ನು ಒಳಗೊಳ್ಳಲಾಗಿದ್ದು, 2026ರ ಆಗಸ್ಟ್ ವೇಳೆಗೆ 14.8 ಗಿಗಾವ್ಯಾಟ್ ಮೇಲ್ಛಾವಣಿ ಸೌರ ವಿದ್ಯುತ್ ಸಾಮರ್ಥ್ಯವನ್ನು ಸ್ಥಾಪಿಸಲಾಗಿದೆ.

22. ಪಿಎಂ ಸ್ವನಿಧಿ

ಸುಮಾರು 78 ಲಕ್ಷಕ್ಕೂ ಹೆಚ್ಚು ಬೀದಿಬದಿ ವ್ಯಾಪಾರಿಗಳು | ₹18,000 ಕೋಟಿಗೂ ಹೆಚ್ಚು ಸಾಲಗಳು

- 2020ರಲ್ಲಿ ಆರಂಭಿಸಲಾದ ಈ ಯೋಜನೆಯು ಖಾತರಿಯಿಲ್ಲದ ದುಡಿಯುವ ಬಂಡವಾಳ ಸಾಲಗಳನ್ನು ಒದಗಿಸುವ ಮೂಲಕ ಬೀದಿಬದಿ ವ್ಯಾಪಾರಿಗಳನ್ನು ಔಪಚಾರಿಕ ಹಣಕಾಸು ವ್ಯವಸ್ಥೆಯೊಂದಿಗೆ ಸಂಪರ್ಕಿಸಿತು. 2026ರ ಆಗಸ್ಟ್ ವೇಳೆಗೆ 78 ಲಕ್ಷಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳಿಗೆ 1.18 ಕೋಟಿಗೂ ಹೆಚ್ಚು ಸಾಲಗಳನ್ನು ನೀಡಲಾಗಿದೆ.

23. ಪಿಎಂ ಗತಿಶಕ್ತಿ

16 ಸಚಿವಾಲಯಗಳು | ಮೂಲಸೌಕರ್ಯಕ್ಕಾಗಿ ಸಮಗ್ರ ನಕ್ಷೆ

- 2021ರಲ್ಲಿ ಆರಂಭಿಸಲಾದ ಈ ರಾಷ್ಟ್ರೀಯ ಮಾಸ್ಟರ್ ಪ್ಲಾನ್, 16 ಸಚಿವಾಲಯಗಳು ಮತ್ತು ಇಲಾಖೆಗಳ ಮೂಲಸೌಕರ್ಯ ಸಂಬಂಧಿತ ಮಾಹಿತಿಯನ್ನು ಏಕೀಕರಿಸಿತು. ರಸ್ತೆ, ರೈಲು, ಬಂದರು, ವಿಮಾನ ನಿಲ್ದಾಣ ಮತ್ತು ಸರಕು ಸಾಗಣೆ ಜಾಲಗಳನ್ನು ಒಟ್ಟಾಗಿ ಪರಿಶೀಲಿಸುವುದರಿಂದ ಯೋಜನೆಗಳ ಸಮನ್ವಯ ಬಲಗೊಂಡಿದ್ದು, ಸರಕು ಸಾಗಣೆ ವೆಚ್ಚವನ್ನು ಕಡಿಮೆ ಮಾಡಲು ದಾರಿ ಸುಗಮವಾಗಿದೆ. ಈ ವೇದಿಕೆಯಲ್ಲಿ ಈಗ ₹100 ಲಕ್ಷ ಕೋಟಿಗೂ ಅಧಿಕ ಮೌಲ್ಯದ ಮೂಲಸೌಕರ್ಯ ಯೋಜನೆಗಳ ನಕ್ಷೆ ಸಿದ್ಧಪಡಿಸಲಾಗಿದೆ.

24. ಸ್ವಾಮಿತ್ವ ಮತ್ತು ನೈಸರ್ಗಿಕ ಕೃಷಿ

3.30 ಲಕ್ಷ ಗ್ರಾಮಗಳಲ್ಲಿ ಸಮೀಕ್ಷೆ | 3.24 ಕೋಟಿ ಆಸ್ತಿ ಕಾರ್ಡ್‌ಗಳು

- ಡ್ರೋನ್‌ಗಳು ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಬಳಸಿ ಗ್ರಾಮೀಣ ಆಸ್ತಿಗಳನ್ನು ನಿಖರವಾಗಿ ನಕ್ಷೆ ಮಾಡುವ ಮೂಲಕ ಸ್ವಾಮಿತ್ವ ಯೋಜನೆಯು ಆಸ್ತಿ ಹಕ್ಕುಗಳನ್ನು ಮತ್ತಷ್ಟು ಬಲಪಡಿಸಿದೆ. 2026ರ ಆಗಸ್ಟ್ ವೇಳೆಗೆ 3.30 ಲಕ್ಷ ಗ್ರಾಮಗಳಲ್ಲಿ ಸಮೀಕ್ಷೆ ನಡೆಸಲಾಗಿದ್ದು, 3.24 ಕೋಟಿ ಆಸ್ತಿ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗಿದೆ. 20 ಲಕ್ಷಕ್ಕೂ ಹೆಚ್ಚು ರೈತರು ಮತ್ತು 10 ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚಿನ ಭೂಮಿಯನ್ನು ನೈಸರ್ಗಿಕ ಕೃಷಿಯ ವ್ಯಾಪ್ತಿಗೆ ತರಲಾಗಿದೆ.

25. ಕ್ರೀಡಾ ರಾಷ್ಟ್ರ, ವಿಜಯಿ ರಾಷ್ಟ್ರ

1,000ಕ್ಕೂ ಹೆಚ್ಚು ಖೇಲೋ ಇಂಡಿಯಾ ಕೇಂದ್ರಗಳು | 2,700ಕ್ಕೂ ಹೆಚ್ಚು ಕ್ರೀಡಾಪಟುಗಳು

- 1,000ಕ್ಕೂ ಹೆಚ್ಚು ಖೇಲೋ ಇಂಡಿಯಾ ಕೇಂದ್ರಗಳು ಮತ್ತು 2,700ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ ಬೆಂಬಲ ಒದಗಿಸಲಾಗುತ್ತಿದೆ. ಟೋಕಿಯೊ 2020 ಒಲಿಂಪಿಕ್ಸ್ ನಲ್ಲಿ ಗೆದ್ದ ಏಳು ಪದಕಗಳು, ಏಷ್ಯನ್ ಗೇಮ್ಸ್ ನಲ್ಲಿ ಗೆದ್ದ 107 ಪದಕಗಳು ಮತ್ತು 2022ರ ಐತಿಹಾಸಿಕ ಥಾಮಸ್ ಕಪ್ ಗೆಲುವು ಭಾರತದ ಹೆಚ್ಚುತ್ತಿರುವ ಕ್ರೀಡಾ ಆತ್ಮವಿಶ್ವಾಸವನ್ನು ಪ್ರತಿಬಿಂಬಿಸುತ್ತವೆ. ಕಳೆದ 13 ವರ್ಷಗಳಲ್ಲಿ, ಮೂರು ಪ್ರಮುಖ ಕ್ರೀಡಾ ವೇದಿಕೆಗಳಲ್ಲಿ ಭಾರತ ತನ್ನ ಸಾರ್ವಕಾಲಿಕ ಶ್ರೇಷ್ಠ ಪ್ರದರ್ಶನಗಳನ್ನು ನೀಡಿದೆ: ಟೋಕಿಯೊ 2020 ಒಲಿಂಪಿಕ್ಸ್ ನಲ್ಲಿ 7 ಪದಕಗಳು, ಹ್ಯಾಂಗ್‌ಝೌ 2023 ಏಷ್ಯನ್ ಗೇಮ್ಸ್ ನಲ್ಲಿ 107 ಪದಕಗಳು ಮತ್ತು ಗೋಲ್ಡ್ ಕೋಸ್ಟ್ 2018 ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 66 ಪದಕಗಳು.





ಜನಾಂದೋಲನಗಳಾಗಿ ರೂಪುಗೊಂಡ 25 ಮಹತ್ವದ ಉಪಕ್ರಮಗಳು

ಆಡಳಿತದ ಚುಕ್ಕಾಣಿ ಹಿಡಿದ 25 ವರ್ಷಗಳ ಪಯಣವು ಭಾರತದಲ್ಲಿ ಆಡಳಿತದ ಹೊಸ ಮಾದರಿಯನ್ನು ರೂಪಿಸಿದ್ದು, ಪ್ರತಿಯೊಬ್ಬ ನಾಗರಿಕ ಮತ್ತು ಸರ್ಕಾರದ ನಡುವೆ ನೇರ ಸಂಪರ್ಕದ ಭಾವನೆಯನ್ನು ಬೆಳೆಸಿದೆ. ಈ ಪಯಣದಲ್ಲಿ ಆಡಳಿತ, ಅಭಿವೃದ್ಧಿ, ಸಾರ್ವಜನಿಕ ಸಹಭಾಗಿತ್ವ ಮತ್ತು ಜಾಗತಿಕ ವೇದಿಕೆಯಲ್ಲಿ ಭಾರತದ ಪಾತ್ರಕ್ಕೆ ಹೊಸ ಮಾನದಂಡಗಳನ್ನು ರೂಪಿಸಿದ ಹಲವು ಉಪಕ್ರಮಗಳು ಹೊರಹೊಮ್ಮಿವೆ. ಆಲೋಚನೆಗಳನ್ನು ಯೋಜನೆಗಳಾಗಿ ರೂಪಿಸಿ, ಆ ಯೋಜನೆಗಳನ್ನು ಜನರ ಸಹಭಾಗಿತ್ವದೊಂದಿಗೆ ಜೋಡಿಸುವ ಸಂಘಟಿತ ಪ್ರಯತ್ನವನ್ನು ಈ ಪಯಣ ಪ್ರತಿಬಿಂಬಿಸುತ್ತದೆ. ಈ ಉಪಕ್ರಮಗಳು ಭಾರತದ ಅಭಿವೃದ್ಧಿಯ ಪಯಣಕ್ಕೆ ವಿಶಿಷ್ಟ ಗುರುತನ್ನು ನೀಡಿದ್ದು, ದೇಶೀಯ ಹಾಗೂ ಜಾಗತಿಕ ಮಟ್ಟದಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸಿವೆ.

1. ವೈಬ್ರೆಂಟ್ ಗುಜರಾತ್

2003ರಲ್ಲಿ ಆರಂಭಿಸಲಾದ ಈ ಉಪಕ್ರಮದಡಿ ಹೂಡಿಕೆಗಾಗಿ ವಿಶ್ವದ ಉದ್ಯಮಿಗಳನ್ನು ಗಾಂಧಿನಗರಕ್ಕೆ ಆಹ್ವಾನಿಸುವ ಮೂಲಕ ರಾಜ್ಯಗಳ ನಡುವೆ ಸ್ಪರ್ಧಾ ಮನೋಭಾವಕ್ಕೆ ನಾಂದಿ ಹಾಡಲಾಯಿತು. ಏಕಗವಾಕ್ಷಿ ಅನುಮತಿ ವ್ಯವಸ್ಥೆ ಮತ್ತು ದೃಢವಾದ ನೀತಿ ಬದ್ಧತೆಗಳನ್ನು ಒಳಗೊಂಡ ಈ ಹೂಡಿಕೆ ಆಕರ್ಷಣೆಯ ಮಾದರಿಯನ್ನು ನಂತರ ಇತರ ರಾಜ್ಯಗಳೂ ಅಳವಡಿಸಿಕೊಂಡವು.

2. ರಣ್ ಉತ್ಸವ

2005ರಲ್ಲಿ ಆರಂಭಿಸಲಾದ ಕಚ್ಛ 'ರಣ್ ಉತ್ಸವವು' ಸ್ಥಳೀಯ ಸಂಗೀತ, ಕಲೆ, ಕರಕುಶಲ ವಸ್ತುಗಳು ಮತ್ತು ಪಾಕಪದ್ಧತಿಯನ್ನು ಪ್ರವಾಸೋದ್ಯಮದೊಂದಿಗೆ ಸಂಯೋಜಿಸುವ ಮಾಧ್ಯಮವಾಗಿ ರೂಪುಗೊಂಡಿತು. ದೂರದ ಉಪ್ಪಿನ ಮರುಭೂಮಿ ಗ್ರಾಮೀಣ ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ಮಾದರಿಯಾಗಿ ಹೊರಹೊಮ್ಮಿದ್ದು, ಕುಶಲಕರ್ಮಿಗಳಿಗೆ ಹೊಸ ಮಾರುಕಟ್ಟೆಗಳನ್ನು ಒದಗಿಸಿತು ಮತ್ತು ಜಾಗತಿಕವಾಗಿ ಗುರುತಿಸಲ್ಪಟ್ಟ ಮಾದರಿಯಾಗಿ ಬೆಳೆಯಿತು.

3. ಕೃಷಿ ಮಹೋತ್ಸವ

ವಿಜ್ಞಾನಿಗಳು, ಅಧಿಕಾರಿಗಳು ಮತ್ತು ರೈತರನ್ನು ನೇರವಾಗಿ ಸಂಪರ್ಕಿಸುವ ಮೂಲಕ ಕೃಷಿ ಸಲಹಾ ಸೇವೆಗಳನ್ನು ಆಯಾ ಕೃಷಿ ಕ್ಷೇತ್ರಗಳ ನಿರ್ದಿಷ್ಟ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಲಾಯಿತು. ಮಣ್ಣಿನ ಆರೋಗ್ಯ ಕಾರ್ಡ್‌ಗಳ ಬಳಕೆ ಮತ್ತು ನಿರಂತರ ಸಂವಾದವು ಕೃಷಿಯನ್ನು ಕೇವಲ ಋತುಮಾನಕ್ಕೆ ಸೀಮಿತವಾದ ಚಟುವಟಿಕೆಯಿಂದ ನಿರಂತರ ಜ್ಞಾನ ಆಧಾರಿತ ಜನಾಂದೋಲನವಾಗಿ ಪರಿವರ್ತಿಸಿತು.

4. ವಾಂಚೇ ಗುಜರಾತ್

"ಇಡೀ ರಾಜ್ಯವು ಒಂದು ಗಂಟೆ ಓದಬೇಕು" ಎಂಬ ಕರೆಯು ಓದುವುದನ್ನು ವೈಯಕ್ತಿಕ ಅಭ್ಯಾಸದಿಂದ ಸಾಮೂಹಿಕ ಸಾರ್ವಜನಿಕ ಸಂಸ್ಕೃತಿಯಾಗಿ ಪರಿವರ್ತಿಸಿತು. ವಿದ್ಯಾರ್ಥಿಗಳು ಮತ್ತು ನಾಗರಿಕರ ಸಕ್ರಿಯ ಸಹಭಾಗಿತ್ವದ ಮೂಲಕ ಗ್ರಂಥಾಲಯಗಳನ್ನೂ ಸುಧಾರಿಸಲಾಯಿತು.

5. ಸಾರ್ವಜನಿಕ ಸಹಭಾಗಿತ್ವ

ಯೋಜನೆಗಳ ಫಲಾನುಭವಿಗಳಾಗಿರುವ ನಾಗರಿಕರನ್ನು ಆಡಳಿತದ ಪಾಲುದಾರರನ್ನಾಗಿ ಪರಿವರ್ತಿಸುವ ದೃಷ್ಟಿಕೋನವು, ನೀತಿ ರೂಪಣೆ, ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಅವರ ಅಭಿಪ್ರಾಯಗಳು ಮತ್ತು ಪ್ರತಿಕ್ರಿಯೆಗಳನ್ನು ಒಳಗೊಳ್ಳುವುದನ್ನು ಖಚಿತಪಡಿಸಿತು. ಇದರಿಂದ ಅಭಿವೃದ್ಧಿಯಲ್ಲಿ ಸಕ್ರಿಯ ಸಹಭಾಗಿತ್ವದ ಮನೋಭಾವ ಮತ್ತಷ್ಟು ಬಲಗೊಂಡಿತು.

6. ಮನ್ ಕಿ ಬಾತ್


ಈ ಮಾಸಿಕ ರೇಡಿಯೊ ಸಂವಾದವು ಪ್ರಧಾನಮಂತ್ರಿ ಮತ್ತು ನಾಗರಿಕರ ನಡುವೆ ಸಂವಹನದ ವಿಶಿಷ್ಟ ಮಾರ್ಗವನ್ನು ಸ್ಥಾಪಿಸಿತು. ನೀತಿಗಳು, ಪ್ರಶಂಸನೀಯ ಉಪಕ್ರಮಗಳು ಮತ್ತು ಸಾಮಾಜಿಕ ಅಭಿಯಾನಗಳ ಕುರಿತು ಸರಳ ಸಂವಾದಗಳು ಅಧಿಕೃತ ಸಂವಹನವನ್ನು ಕೇವಲ ಔಪಚಾರಿಕ ಭಾಷಣಗಳ ವ್ಯಾಪ್ತಿಯಿಂದ ಹೊರತಂದವು.

7. ವಸಾಹತುಶಾಹಿ ಮನೋಭಾವದಿಂದ ಮುಕ್ತಿ

ರಸ್ತೆಗಳು, ನಗರಗಳು, ಕಟ್ಟಡಗಳು ಮತ್ತು ಸಂಸ್ಥೆಗಳಿಗೆ ಸಂಬಂಧಿಸಿದ ವಸಾಹತುಶಾಹಿ ಹೆಸರುಗಳು ಮತ್ತು ಸಂಕೇತಗಳ ಬದಲಿಗೆ ಸ್ವದೇಶಿ ಗುರುತುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳು ಸಾರ್ವಜನಿಕ ಸ್ಮರಣೆ ಮತ್ತು ಸಾಂಸ್ಕೃತಿಕ ಆತ್ಮವಿಶ್ವಾಸವನ್ನು ಮರಳಿ ಪಡೆಯುವ ಸಾಧನವಾಗಿ ರೂಪುಗೊಂಡವು. 2035ರ ವೇಳೆಗೆ ವಸಾಹತುಶಾಹಿ ಮನೋಭಾವದಿಂದ ಸಂಪೂರ್ಣವಾಗಿ ಮುಕ್ತರಾಗುವ ಗುರಿಯನ್ನು ಈಗ ನಿಗದಿಪಡಿಸಲಾಗಿದೆ.

8. 'ಗಿವ್ ಇಟ್ ಅಪ್' ಅಭಿಯಾನ

ಎಲ್‌ಪಿಜಿ ಸಬ್ಸಿಡಿಯನ್ನು ಸ್ವಯಂಪ್ರೇರಣೆಯಿಂದ ತ್ಯಜಿಸುವಂತೆ ನೀಡಿದ ಮನವಿಯು ಹಂಚಿಕೆಯ ಜವಾಬ್ದಾರಿಯ ಭಾವನೆಯನ್ನು ಬೆಳೆಸಿತು. 1.13 ಕೋಟಿಗೂ ಹೆಚ್ಚು ಕುಟುಂಬಗಳು ತಮ್ಮ ಸಬ್ಸಿಡಿಯನ್ನು ತ್ಯಜಿಸುವ ಮೂಲಕ ಉಳಿತಾಯವಾದ ಮೊತ್ತವನ್ನು ಉಜ್ವಲಾ ಯೋಜನೆಯಡಿ ಹೊಸ ಸಂಪರ್ಕಗಳನ್ನು ಒದಗಿಸಲು ಬಳಸಲಾಯಿತು.



9. ಅಂತಾರಾಷ್ಟ್ರೀಯ ಯೋಗ ದಿನ

ಯೋಗವನ್ನು ಜಾಗತಿಕ ವೇದಿಕೆಗೆ ತರುವ ಪ್ರಯತ್ನಗಳ ಫಲವಾಗಿ ಜೂನ್ 21ನ್ನು 'ಅಂತಾರಾಷ್ಟ್ರೀಯ ಯೋಗ ದಿನ'ವೆಂದು ಗುರುತಿಸಲಾಯಿತು. ಇದರ ಪರಿಣಾಮವಾಗಿ, ಭಾರತದ ಈ ಪರಂಪರೆಯು ಸಾರ್ವಜನಿಕ ಆರೋಗ್ಯಕ್ಕಾಗಿ 190ಕ್ಕೂ ಹೆಚ್ಚು ದೇಶಗಳಲ್ಲಿ ಆಚರಿಸಲಾಗುವ ಜಾಗತಿಕ ಸಾಮೂಹಿಕ ಉಪಕ್ರಮವಾಗಿ ರೂಪುಗೊಂಡಿತು. ಈ ವರ್ಷ, ಭಾರತದ ಹೊರಗೆ 1,300ಕ್ಕೂ ಹೆಚ್ಚು ಸ್ಥಳಗಳಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಹಲವು ಸ್ಥಳಗಳು ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸಿವೆ.

10. ಬೇಟಿ ಬಚಾವೋ, ಬೇಟಿ ಪಢಾವೋ

ಹಿಂದೆ ಪ್ರತಿ 1,000 ಗಂಡು ಮಕ್ಕಳಿಗೆ 918 ಹೆಣ್ಣು ಮಕ್ಕಳಷ್ಟೇ ಇದ್ದರು. 2015ರಲ್ಲಿ ಆರಂಭಿಸಲಾದ 'ಬೇಟಿ ಬಚಾವೋ, ಬೇಟಿ ಪಢಾವೋ' (ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವಿಗೆ ಶಿಕ್ಷಣ ನೀಡಿ) ಯೋಜನೆಯು ಆರೋಗ್ಯ, ಶಿಕ್ಷಣ ಮತ್ತು ಜಾರಿ ಕ್ರಮಗಳನ್ನು ಒಳಗೊಂಡ ಸಮಗ್ರ ಅಭಿಯಾನದ ಮೂಲಕ ಹೆಣ್ಣು ಮಗುವಿನ ಜೀವನ, ಶಿಕ್ಷಣ ಮತ್ತು ಹಕ್ಕುಗಳನ್ನು ಒಂದೇ ಚೌಕಟ್ಟಿನಡಿ ತಂದಿತು. ಹೆಣ್ಣು ಮಕ್ಕಳ ಜೀವನ ಮತ್ತು ಶಿಕ್ಷಣವನ್ನು ರಕ್ಷಿಸುವುದು ರಾಷ್ಟ್ರೀಯ ಅಭಿಯಾನವಾಗಿ ರೂಪುಗೊಂಡಿತು.

11. ಜನರ ಪದ್ಮ ಪ್ರಶಸ್ತಿಗಳು

ಪದ್ಮ ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆಯನ್ನು ವಿಸ್ತರಿಸುವ ಮೂಲಕ ಗ್ರಾಮೀಣ, ದೂರದ ಮತ್ತು ತಳಮಟ್ಟದ ಪ್ರದೇಶಗಳಲ್ಲಿ ಕೊಡುಗೆ ನೀಡಿದವರನ್ನು ರಾಷ್ಟ್ರೀಯ ಗೌರವದ ಮುಂಚೂಣಿಗೆ ತರಲಾಯಿತು. ರಾಷ್ಟ್ರೀಯ ಪ್ರಶಂಸೆಯ ಗಮನವು ಗಣ್ಯರಿಂದ ಸಾಮಾನ್ಯ ಜನರಲ್ಲಿರುವ ಅಸಾಧಾರಣ ಸಾಧನೆಗಳತ್ತ ಬದಲಾಯಿತು. ಜನರ ಗಮನಕ್ಕೆ ಬಾರದ ಸಾಧಕರನ್ನು ಗುರುತಿಸಿ ಗೌರವಿಸುವ ಹೊಸ ಪರಂಪರೆ ರೂಪುಗೊಂಡಿತು.

12. ಏಕ ಭಾರತ, ಶ್ರೇಷ್ಠ ಭಾರತ

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಡುವೆ ಭಾಷೆ, ಶಿಕ್ಷಣ, ಸಂಸ್ಕೃತಿ, ಪಾಕಪದ್ಧತಿ ಮತ್ತು ಹಬ್ಬಗಳ ವಿನಿಮಯದ ಮೂಲಕ ಏಕತೆಯನ್ನು ಕೇವಲ ಸಾಂವಿಧಾನಿಕ ತತ್ವವಾಗಿ ಉಳಿಸದೆ, ಜೀವಂತ ಅನುಭವವಾಗಿ ಪರಿವರ್ತಿಸುವ ಉದ್ದೇಶ ಹೊಂದಲಾಗಿದೆ.

13. ಯುಪಿಐ: ಕ್ರಾಂತಿಕಾರಿ ಮತ್ತು ಜನಸಾಮಾನ್ಯರ ಉಪಕ್ರಮ

ಡಿಜಿಟಲ್ ಪಾವತಿಯನ್ನು ಕೇವಲ ಒಂದು ಉತ್ಪನ್ನ ಅಥವಾ ಬ್ರ್ಯಾಂಡ್ ಆಗಿ ನೋಡುವ ಬದಲು, ಸಾರ್ವಜನಿಕ ಮೂಲಸೌಕರ್ಯವಾಗಿ ಅಭಿವೃದ್ಧಿಪಡಿಸುವ ದೃಷ್ಟಿಕೋನವು ಪಾವತಿಗಳನ್ನು ತ್ವರಿತ, ಉಚಿತ ಮತ್ತು ಎಲ್ಲೆಡೆ ಲಭ್ಯವಾಗುವಂತೆ ಮಾಡಿತು. ಯುಪಿಐ ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯ ಸ್ವರೂಪವನ್ನೇ ಪರಿವರ್ತಿಸಿತು.

14. 'ಖೇಲ್ ಮಹಾಕುಂಭ್'ನಿಂದ 'ಖೇಲೋ ಇಂಡಿಯಾ'ದವರೆಗೆ

ಸ್ಪರ್ಧೆಗಳನ್ನು ಗ್ರಾಮ ಮತ್ತು ಶಾಲಾ ಮಟ್ಟಕ್ಕೂ ವಿಸ್ತರಿಸುವ ಮೂಲಕ ಪ್ರತಿಭೆ ಗುರುತಿಸುವ ಕಾರ್ಯವನ್ನು ಪ್ರಮುಖ ನಗರಗಳು ಮತ್ತು ಆಯ್ದ ಕ್ರೀಡಾ ಅಕಾಡೆಮಿಗಳ ವ್ಯಾಪ್ತಿಯಿಂದ ಹೊರತಂದು ವಿಸ್ತರಿಸಲಾಯಿತು. ಯುವಜನರ ಸಮಗ್ರ ಅಭಿವೃದ್ಧಿಗೆ ಕ್ರೀಡೆಯನ್ನು ಸಮಗ್ರ ಮಾಧ್ಯಮವಾಗಿ ಸ್ಥಾಪಿಸಲಾಯಿತು.

15. ಒಂದು ಜಿಲ್ಲೆ, ಒಂದು ಉತ್ಪನ್ನ (ಒಡಿಒಪಿ)

ಪ್ರತಿ ಜಿಲ್ಲೆಯ ವಿಶಿಷ್ಟ ಉತ್ಪನ್ನವನ್ನು ಬ್ರ್ಯಾಂಡಿಂಗ್, ಜಿಐ ಮಾನ್ಯತೆ, ಇ-ಕಾಮರ್ಸ್ ಮತ್ತು ರಫ್ತು ಬೆಂಬಲದೊಂದಿಗೆ ಸಂಪರ್ಕಿಸುವ ಮೂಲಕ ಸ್ಥಳೀಯ ಆರ್ಥಿಕತೆಗಳಿಗೆ ಹೊಸ ಗುರುತನ್ನು ನೀಡಲಾಯಿತು. ಇದರಿಂದ ಕುಶಲಕರ್ಮಿಗಳು ಮತ್ತು ರೈತರಿಗೆ ಮಾರುಕಟ್ಟೆ ಪ್ರವೇಶದ ಅವಕಾಶಗಳು ವಿಸ್ತರಿಸಿದವು.

16. ಮಹತ್ವಾಕಾಂಕ್ಷಿ ಜಿಲ್ಲೆಗಳು ಮತ್ತು ವೈಬ್ರಂಟ್ ಗ್ರಾಮಗಳು

ನೈಜ-ಸಮಯದ ದತ್ತಾಂಶ, ಶ್ರೇಯಾಂಕಗಳು ಮತ್ತು ಉದ್ದೇಶಿತ ಯೋಜನೆಗಳ ಮೂಲಕ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿಯ ಸ್ಪರ್ಧಾತ್ಮಕ ಸಂಸ್ಕೃತಿಯನ್ನು ಬೆಳೆಸಲಾಯಿತು. ಅತ್ಯಂತ ಸವಾಲಿನ ಪ್ರದೇಶಗಳನ್ನೂ ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲಾಯಿತು.

17. ಪರೀಕ್ಷಾ ಪೇ ಚರ್ಚಾ

ಸಂವಾದದ ಹೊಸ ಪರಂಪರೆಯನ್ನು ಸ್ಥಾಪಿಸಲಾಯಿತು. ಪರೀಕ್ಷೆಯ ಒತ್ತಡವನ್ನು ಸಾರ್ವಜನಿಕ ಚರ್ಚೆಯ ವಿಷಯವನ್ನಾಗಿ ಮಾಡುವ ಮೂಲಕ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರ ನಡುವೆ ನೇರ ಸಂವಹನಕ್ಕೆ ಉತ್ತೇಜನ ನೀಡಲಾಯಿತು. ಪರೀಕ್ಷೆಗಳನ್ನು ಒತ್ತಡದ ಮೂಲಗಳಾಗಿ ನೋಡುವ ಬದಲು, ಅವಕಾಶಗಳಾಗಿ ನೋಡುವ ದೃಷ್ಟಿಕೋನವನ್ನು ಈ ಉಪಕ್ರಮವು ರೂಪಿಸಿತು ಮತ್ತು ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿತು.



"ದೇಶವು ಹಲವಾರು ವಿಪತ್ತುಗಳನ್ನು ಎದುರಿಸಿದೆ ಮತ್ತು ಭೀಕರ ಚಂಡಮಾರುತಗಳನ್ನೂ ಎದುರಿಸಿ ನಿಂತಿದೆ. ಆದರೂ, ಅವುಗಳನ್ನು ಅಪಾರ ಸ್ಥೈರ್ಯದಿಂದ ಎದುರಿಸಿದೆ.

ನರೇಂದ್ರ ಮೋದಿ,
ಪ್ರಧಾನಮಂತ್ರಿ



18. ಏಕತಾ ಪ್ರತಿಮೆ

ವಿಶ್ವದ ಅತಿ ಎತ್ತರದ 182 ಮೀಟರ್ ಎತ್ತರದ ಪ್ರತಿಮೆಯನ್ನು ಪ್ರವಾಸೋದ್ಯಮ, ಮನರಂಜನೆ ಮತ್ತು ಸಮ್ಮೇಳನ ಸೌಲಭ್ಯಗಳನ್ನು ಸಂಯೋಜಿಸುವ ಮೂಲಕ ಆರ್ಥಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ರೂಪಿಸಲಾಯಿತು. ಈ ಸ್ಮಾರಕವು ಸ್ಥಳೀಯ ಮಟ್ಟದಲ್ಲಿ ನಿರಂತರ ಉದ್ಯೋಗ ಮತ್ತು ಪ್ರವಾಸೋದ್ಯಮಕ್ಕೆ ಭದ್ರ ಅಡಿಪಾಯ ಒದಗಿಸಿದ್ದು, ಆರಂಭದ ಏಳು ವರ್ಷಗಳಲ್ಲೇ 2.75 ಕೋಟಿಗೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿದ್ದಾರೆ.

19. ವಂದೇ ಭಾರತ್ ರೈಲುಗಳು

ಸ್ವದೇಶಿ ವಿನ್ಯಾಸ ಮತ್ತು ನಿರ್ಮಾಣ ಸಾಮರ್ಥ್ಯಗಳ ಮೂಲಕ ಆಧುನಿಕ ರೈಲು ಪ್ರಯಾಣಕ್ಕೆ ಹೊಸ ರೂಪ ನೀಡಲಾಯಿತು. ಭಾರತದ ಸಂಕೀರ್ಣ ರೈಲ್ವೆ ವ್ಯವಸ್ಥೆಯಲ್ಲಿ ಆತ್ಮನಿರ್ಭರತೆಯನ್ನು ಸಾಕಾರಗೊಳಿಸುವ ಮಾದರಿಯಾಗಿ ಈ ರೈಲುಗಳು ಹೊರಹೊಮ್ಮಿದ್ದು, ಸ್ವದೇಶಿ ನಾವೀನ್ಯತೆ, ಆರಾಮದಾಯಕ ಪ್ರಯಾಣ ಮತ್ತು ಪ್ರಯಾಣದ ಸುಗಮತೆಯ ಸಂಕೇತಗಳಾಗಿ ರೂಪುಗೊಂಡಿವೆ.

20. ಆತ್ಮನಿರ್ಭರ ಭಾರತ

ರಕ್ಷಣಾ, ಔಷಧ, ಸೆಮಿಕಂಡಕ್ಟರ್, ಸೌರಶಕ್ತಿ ಮತ್ತು ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾಲಮಿತಿಯೊಳಗೆ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಒತ್ತು ನೀಡಲಾಯಿತು. ಉತ್ಪಾದನೆ ಆಧಾರಿತ ಪ್ರೋತ್ಸಾಹಧನ (ಪಿಎಲ್‌ಐ) ಯೋಜನೆಯು ಆತ್ಮನಿರ್ಭರತೆಯನ್ನು ಸ್ಪರ್ಧಾತ್ಮಕತೆಯೊಂದಿಗೆ ಯಶಸ್ವಿಯಾಗಿ ಸಂಯೋಜಿಸಿತು. ಆತ್ಮನಿರ್ಭರತೆಯ ಕರೆ ಜನಾಂದೋಲನವಾಗಿ ರೂಪುಗೊಂಡಿತು.

21. ಸ್ಥಳೀಯ ಉತ್ಪನ್ನಗಳ ಉತ್ತೇಜನ

'ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ' (ವೋಕಲ್ ಫಾರ್ ಲೋಕಲ್) ಉಪಕ್ರಮವು ಗ್ರಾಹಕರು ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡುವಂತೆ ಉತ್ತೇಜಿಸಿತು. ಇದರಿಂದ ಕುಶಲಕರ್ಮಿಗಳು, ಕೈಮಗ್ಗ ಕ್ಷೇತ್ರ ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು (ಎಂಎಸ್‌ಎಂಇಗಳು) ಮಾರುಕಟ್ಟೆಯ ಬೇಡಿಕೆಯೊಂದಿಗೆ ಸಂಪರ್ಕಿಸುವ ವಿಧಾನಕ್ಕೆ ಉತ್ತೇಜನ ದೊರೆಯಿತು.

22. ಮಿಷನ್ ಲೈಫ್: ಪರಿಸರ ಸ್ನೇಹಿ ಜೀವನಶೈಲಿ

ಹವಾಮಾನ ಬದಲಾವಣೆಗೆ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿಯನ್ನು ಸರ್ಕಾರಗಳು ಮತ್ತು ಕೈಗಾರಿಕೆಗಳ ವ್ಯಾಪ್ತಿಯಿಂದ ವಿಸ್ತರಿಸಿ, ಪ್ರತಿಯೊಬ್ಬರ ಜೀವನಶೈಲಿಯನ್ನೂ ಒಳಗೊಳ್ಳುವಂತೆ ಮಾಡಲಾಯಿತು. ಜಾಗೃತಿಯಿಂದ ಮತ್ತು ಮಿತವಾಗಿ ಬಳಕೆ ಮಾಡುವುದನ್ನು ಎಲ್ಲರ ಹಂಚಿಕೆಯ ಜವಾಬ್ದಾರಿಯಾಗಿ ಒತ್ತಿಹೇಳಲಾಯಿತು.

23. ಶ್ರೀ ಅನ್ನ (ಸಿರಿಧಾನ್ಯಗಳು)

ಸಾಂಪ್ರದಾಯಿಕ ಬೆಳೆಗಳಾದ ಸಜ್ಜೆ, ಜೋಳ ಮತ್ತು ರಾಗಿ ಸೇರಿದಂತೆ ಸಿರಿಧಾನ್ಯಗಳನ್ನು ಉತ್ಪಾದನಾ ಬೆಂಬಲ, ಸಾರ್ವಜನಿಕ ವಿತರಣಾ ವ್ಯವಸ್ಥೆ, ಶಾಲೆಯ ಮಧ್ಯಾಹ್ನದ ಊಟದ ಕಾರ್ಯಕ್ರಮಗಳು ಮತ್ತು ರಫ್ತು ಪ್ರೋತ್ಸಾಹದೊಂದಿಗೆ ಸಂಪರ್ಕಿಸುವ ಮೂಲಕ ಪೌಷ್ಟಿಕತೆ ಮತ್ತು ಹವಾಮಾನ ಬದಲಾವಣೆಯನ್ನು ಎದುರಿಸಬಲ್ಲ ಕೃಷಿಗೆ ಉತ್ತೇಜನ ನೀಡಲಾಯಿತು. ಭಾರತದ ಮನವಿಯ ಮೇರೆಗೆ ವಿಶ್ವಸಂಸ್ಥೆಯು 2023ನೇ ವರ್ಷವನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ಘೋಷಿಸಿತು. ಇದರಿಂದ ಮಳೆಯಾಶ್ರಿತ ಕೃಷಿಯಲ್ಲಿ ತೊಡಗಿರುವ ರೈತರಿಗೆ ಲಾಭದಾಯಕ ಬೆಳೆಯೊಂದರ ಅವಕಾಶ ದೊರೆಯಿತು.

24. ನಾರಿ ಶಕ್ತಿ ವಂದನ ಅಧಿನಿಯಮ

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡುವ ಈ ಕಾನೂನು ಮಹಿಳೆಯರ ರಾಜಕೀಯ ಪ್ರಾತಿನಿಧ್ಯವನ್ನು ಸಾಂಸ್ಥಿಕಗೊಳಿಸುತ್ತದೆ. ಪಂಚಾಯತ್ ಮಟ್ಟದಿಂದ ಸಂಸತ್ತಿನವರೆಗೆ ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ ಸಾಗುತ್ತಿರುವ ವೇಗವನ್ನು ಇದು ಮತ್ತಷ್ಟು ಬಲಪಡಿಸಿದೆ.

25. 'ಶಾಂತಿ' ಮೂಲಕ ಭಾರತದ ಪರಮಾಣು ಕ್ಷೇತ್ರದ ಪುನರ್‌ಸಂಪರ್ಕ

ಆಧುನಿಕ ಹೊಣೆಗಾರಿಕೆ ಮತ್ತು ನಿಯಂತ್ರಣದ ಚೌಕಟ್ಟಿನಡಿ ನಾಗರಿಕ ಪರಮಾಣು ಇಂಧನ ಕ್ಷೇತ್ರವನ್ನು ಖಾಸಗಿ ಮತ್ತು ವಿದೇಶಿ ಭಾಗವಹಿಸುವಿಕೆಗೆ ಮುಕ್ತಗೊಳಿಸುವ ಉದ್ದೇಶದಿಂದ ಒಂದು ಉಪಕ್ರಮವನ್ನು ಆರಂಭಿಸಲಾಯಿತು. ಇಂಧನ ಭದ್ರತೆ, ಶುದ್ಧ ಮೂಲ ವಿದ್ಯುತ್ ಮತ್ತು ದೀರ್ಘಾವಧಿಯ ಸಾಮರ್ಥ್ಯ ವಿಸ್ತರಣೆಗೆ ಹೊಸ ಮಾನದಂಡಗಳನ್ನು ರೂಪಿಸುವುದು ಈ ಪ್ರಯತ್ನದ ಉದ್ದೇಶವಾಗಿದೆ.





ಪಯಣದ ದಿಕ್ಕು ಮತ್ತು ಕಾರ್ಯವಿಧಾನವನ್ನು ಬದಲಿಸಿದ 25 ಆಲೋಚನೆಗಳು

25 ವರ್ಷಗಳ ಉತ್ತಮ ಆಡಳಿತದ ಪಯಣದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ವಿವಿಧ ಆಲೋಚನೆಗಳು ಮತ್ತು ಸಾಂಸ್ಥಿಕ ಉಪಕ್ರಮಗಳನ್ನು ಪರಿಚಯಿಸಿದರು. ಇವು ಕೇವಲ ಯೋಜನೆಗಳಾಗಿ ಉಳಿಯದೆ, ಆಡಳಿತದ ಕಾರ್ಯವಿಧಾನವನ್ನೇ ಹೊಸ ರೀತಿಯಲ್ಲಿ ರೂಪಿಸಿದವು. ಈ ಉಪಕ್ರಮಗಳ ಉದ್ದೇಶ ಕೇವಲ ವ್ಯವಸ್ಥೆಯನ್ನು ಮುಂದುವರಿಸುವುದಾಗಿರಲಿಲ್ಲ; ಬದಲಾಗಿ, ಅದನ್ನು ಸಾಂಸ್ಥಿಕವಾಗಿ ಪರಿವರ್ತಿಸುವುದಾಗಿತ್ತು. ಈ ಬದಲಾವಣೆಯೊಂದಿಗೆ ಸರ್ಕಾರದಿಂದ ಸಮುದಾಯದತ್ತ ಜವಾಬ್ದಾರಿಗಳು ವಿಕೇಂದ್ರೀಕೃತವಾದವು, ನೀತಿ ರೂಪಿಸುವ ಪ್ರಕ್ರಿಯೆಗಳಲ್ಲಿ ನಾಗರಿಕರು ಸಕ್ರಿಯವಾಗಿ ಪಾಲ್ಗೊಳ್ಳುವಂತಾಯಿತು, ತಂತ್ರಜ್ಞಾನವು ಸಾರ್ವಜನಿಕ ಮೂಲಸೌಕರ್ಯದ ಆಧಾರವಾಯಿತು ಮತ್ತು ರಾಷ್ಟ್ರೀಯ ಪ್ರಯತ್ನಗಳು ಜಾಗತಿಕ ವೇದಿಕೆಯನ್ನು ಪಡೆದುಕೊಂಡವು.

1. ನೀರು ಮತ್ತು ನೈರ್ಮಲ್ಯ ನಿರ್ವಹಣಾ ಸಂಸ್ಥೆ (ವಾಸ್ಮೋ), ಗುಜರಾತ್ (2003): ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಜವಾಬ್ದಾರಿಯನ್ನು ಸರ್ಕಾರದಿಂದ ಗ್ರಾಮಗಳಿಗೆ ವರ್ಗಾಯಿಸಲಾಯಿತು. 'ಪಾಣಿ ಸಮಿತಿಗಳಿಗೆ' (ನೀರು ಸಮಿತಿಗಳು) ಯೋಜನೆ ರೂಪಿಸುವುದು, ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಯಿತು. ಮಹಿಳೆಯರ ಭಾಗವಹಿಸುವಿಕೆಯು ಈ ಉಪಕ್ರಮವನ್ನು ಸಮುದಾಯದ ಸಹಭಾಗಿತ್ವದ ಮಾದರಿಯಾಗಿ ಪರಿವರ್ತಿಸಿತು. ಇದೇ ಮಾದರಿಯನ್ನು ನಂತರ ಜಲ ಜೀವನ್ ಮಿಷನ್‌ನಲ್ಲಿಯೂ ಅಳವಡಿಸಿಕೊಳ್ಳಲಾಯಿತು.

2. ಎಸ್‌ಡಿಎಂಎ (2003): ಭುಜ್ ಭೂಕಂಪದ ಬಳಿಕ, ಗುಜರಾತ್ ರಾಜ್ಯವು ವಿಪತ್ತು ನಿರ್ವಹಣೆಯನ್ನು ಕೇವಲ ಪರಿಹಾರ ಕಾರ್ಯಗಳಿಗೆ ಸೀಮಿತಗೊಳಿಸುವ ವಿಧಾನವನ್ನು ಮೀರಿ, ಸನ್ನದ್ಧತೆ, ಸಾಮರ್ಥ್ಯವೃದ್ಧಿ ಮತ್ತು ಅಪಾಯ ತಗ್ಗಿಸುವಿಕೆಗೆ ಒತ್ತು ನೀಡುವ ಕಾನೂನುಬದ್ಧ ಹಾಗೂ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಿತು. ಇದೇ ರೀತಿಯ ವ್ಯವಸ್ಥೆಯನ್ನು 2005ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿಯೂ ಸ್ಥಾಪಿಸಲಾಯಿತು.

3. ವಿಶೇಷ ಕ್ಷೇತ್ರಗಳಿಗಾಗಿ ವಿಶ್ವವಿದ್ಯಾಲಯಗಳು: ವಿಧಿವಿಜ್ಞಾನ, ಆಂತರಿಕ ಭದ್ರತೆ, ಇಂಧನ, ಕ್ರೀಡೆ, ಶಿಕ್ಷಣ, ಸಂಸ್ಕೃತ ಮತ್ತು ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಿಗಾಗಿ ವಿಶೇಷ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಇದರಿಂದ ಆಯಾ ಕ್ಷೇತ್ರಗಳ ನಿರ್ದಿಷ್ಟ ಅಗತ್ಯಗಳಿಗೆ ಅನುಗುಣವಾಗಿ ಪ್ರತಿಭೆ ಮತ್ತು ಪರಿಣತಿಯನ್ನು ಬೆಳೆಸಲು ಸಾಂಸ್ಥಿಕ ಅಡಿಪಾಯ ನಿರ್ಮಾಣವಾಯಿತು.

4. ಗಿಫ್ಟ್ ಸಿಟಿ (2007): ಅಂತಾರಾಷ್ಟ್ರೀಯ ಹಣಕಾಸು ಸೇವೆಗಳಿಗಾಗಿ ಭಾರತದಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಗ್ರೀನ್‌ಫೀಲ್ಡ್ ಕೇಂದ್ರವನ್ನು ನಿರ್ಮಿಸಲಾಯಿತು. ಏಕ ನಿಯಂತ್ರಕ ವ್ಯವಸ್ಥೆ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾದ ವ್ಯವಸ್ಥೆಗಳನ್ನು ಒಳಗೊಂಡಂತೆ, ಜಾಗತಿಕ ಹಣಕಾಸು ಚಟುವಟಿಕೆಗಳಿಗೆ ಹೊಸ ವೇದಿಕೆಯನ್ನು ಸೃಷ್ಟಿಸಲಾಯಿತು.

5. ಪ್ರತ್ಯೇಕ ಹವಾಮಾನ ಬದಲಾವಣೆ ಇಲಾಖೆ (2009): ಹವಾಮಾನ ಬದಲಾವಣೆಯನ್ನು ಎದುರಿಸುವುದು ಸರ್ಕಾರದ ಶಾಶ್ವತ ಜವಾಬ್ದಾರಿಯಾಯಿತು. ನವೀಕರಿಸಬಹುದಾದ ಇಂಧನ, ನೀರಿನ ಸಂರಕ್ಷಣೆ, ಹೊರಸೂಸುವಿಕೆ ಕಡಿತ ಮತ್ತು ಹವಾಮಾನ ಸ್ನೇಹಿ ಯೋಜನೆಗಳಿಗೆ ವಿಶೇಷ ಬಜೆಟ್ ಹಾಗೂ ಆಡಳಿತಾತ್ಮಕ ವ್ಯವಸ್ಥೆಗಳನ್ನು ಸರ್ಕಾರ ರೂಪಿಸಿತು.

6. MyGov (2014): ಸರ್ಕಾರದ ವಿವಿಧ ಉಪಕ್ರಮಗಳಲ್ಲಿ ನಾಗರಿಕರು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ಈ ವೇದಿಕೆಯು ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕರ ಪಾತ್ರ ಕೇವಲ ವೀಕ್ಷಕರಿಂದ ಸಕ್ರಿಯ ಪಾಲುದಾರರಾಗಿ ಬದಲಾಗಿದೆ.

7. ನೀತಿ ಆಯೋಗ (2015): ಯೋಜನಾ ಆಯೋಗದ ಬದಲಿಗೆ ನೀತಿ ಆಯೋಗವನ್ನು ಸ್ಥಾಪಿಸಲಾಯಿತು. ರಾಜ್ಯಗಳೊಂದಿಗೆ ಸಂವಾದ, ರಾಜ್ಯ ಬೆಂಬಲ ಮಿಷನ್ ಮತ್ತು ಆಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮದ ಮೂಲಕ ನೀತಿ ರೂಪಿಸುವಿಕೆಯನ್ನು ಫಲಿತಾಂಶಗಳಿಗೆ ಮತ್ತು ಸಹಕಾರಿ ಒಕ್ಕೂಟ ವ್ಯವಸ್ಥೆಗೆ ಜೋಡಿಸಲಾಯಿತು.

8. ಪ್ರಗತಿ (2015): ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ಸ್ಥಗಿತಗೊಂಡ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಇದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳು ಯೋಜನೆಗಳ ಅನುಷ್ಠಾನಕ್ಕೆ ಜಂಟಿಯಾಗಿ ಹೊಣೆಗಾರರಾಗುವಂತಾಯಿತು. ಯೋಜನೆಗಳ ಪ್ರಗತಿ ಮತ್ತು ಎದುರಾಗುವ ಸಮಸ್ಯೆಗಳು ಒಂದೇ ಸಮಗ್ರ ವೇದಿಕೆಯಲ್ಲಿ ಸ್ಪಷ್ಟವಾಗಿ ಗೋಚರಿಸುವಂತಾಯಿತು.





9. ಅಂತಾರಾಷ್ಟ್ರೀಯ ಸೌರ ಒಕ್ಕೂಟ (2015): ಭಾರತ ಮತ್ತು ಫ್ರಾನ್ಸ್ ದೇಶಗಳ ಉಪಕ್ರಮದ ಮೂಲಕ ಸೌರಶಕ್ತಿಗಾಗಿ ಒಪ್ಪಂದ ಆಧಾರಿತ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಸಾಮೂಹಿಕ ಖರೀದಿ, ಪ್ರಮಾಣೀಕರಣ, ಯೋಜನೆ ಸಿದ್ಧತೆ ಮತ್ತು ಹಣಕಾಸು ನೆರವಿನಂತಹ ವ್ಯವಸ್ಥೆಗಳ ಮೂಲಕ ಸೌರಶಕ್ತಿಯು ಜಾಗತಿಕ ಸಹಕಾರಕ್ಕೆ ಅಡಿಪಾಯವಾಯಿತು.

10. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (2016): ಆಧಾರ್, ಯುಪಿಐ ಮತ್ತು ಅಕೌಂಟ್ ಅಗ್ರಿಗೇಟರ್ ಗಳಂತಹ ಮುಕ್ತ ಡಿಜಿಟಲ್ ಚೌಕಟ್ಟುಗಳನ್ನು ರೂಪಿಸಲಾಯಿತು. ಇವುಗಳ ಆಧಾರದ ಮೇಲೆ ಬ್ಯಾಂಕುಗಳು, ನವೋದ್ಯಮಗಳು ಮತ್ತು ಸರ್ಕಾರಗಳು ಹೊಸ ಸೇವೆಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಯಿತು. ಸಾರ್ವಜನಿಕ ಡಿಜಿಟಲ್ ಸೌಲಭ್ಯಗಳು ಎಲ್ಲರೂ ಹಂಚಿಕೊಳ್ಳುವ ಸಾಮಾನ್ಯ ಅಡಿಪಾಯವಾಗಿ ರೂಪುಗೊಂಡವು.

11. ಜಿಇಎಂ (2016): ಸರ್ಕಾರದ ಖರೀದಿ ಪ್ರಕ್ರಿಯೆಯನ್ನು ಒಂದೇ ಆನ್‌ಲೈನ್ ವೇದಿಕೆಯಲ್ಲಿ ಒಗ್ಗೂಡಿಸಲಾಯಿತು. ಇದರಿಂದ ಬೆಲೆಗಳು, ಉತ್ಪನ್ನಗಳು ಮತ್ತು ಮಾರಾಟಗಾರರಿಗೆ ಸಂಬಂಧಿಸಿದ ಮಾಹಿತಿಯಲ್ಲಿ ಪಾರದರ್ಶಕತೆ ಹೆಚ್ಚಾಯಿತು. ಖರೀದಿ ವ್ಯವಸ್ಥೆಯು ಮಧ್ಯವರ್ತಿಗಳು ಮತ್ತು ಸೀಮಿತ ಸ್ಪರ್ಧೆಯನ್ನು ಅವಲಂಬಿಸಿದ್ದ ವಿಧಾನದಿಂದ ಮುಕ್ತ ಡಿಜಿಟಲ್ ಮಾರುಕಟ್ಟೆಯತ್ತ ಸಾಗಿತು.

12. ದಿವಾಳಿತನ ಮತ್ತು ಋಣಭಾರ ಸಂಹಿತೆ (2016): ಹಣಕಾಸಿನ ಸಂಕಷ್ಟಗಳನ್ನು ಪರಿಹರಿಸಲು ಏಕೀಕೃತ, ಸಾಲದಾತರ ಚಾಲಿತ ಮತ್ತು ನಿಗದಿತ ಕಾಲಮಿತಿಯ ವ್ಯವಸ್ಥೆಯನ್ನು ಪರಿಚಯಿಸಲಾಯಿತು. ಇದರಿಂದ ಸಾಲದ ಶಿಸ್ತು ಕಾಪಾಡಲು ಅಗತ್ಯವಾದ ಸಾಂಸ್ಥಿಕ ಅಡಿಪಾಯ ನಿರ್ಮಾಣವಾಯಿತು.

13. ಅಟಲ್ ಇನ್ನೋವೇಷನ್ ಮಿಷನ್ (2016): ಶಾಲಾ ಹಂತದಲ್ಲಿಯೇ ನಾವೀನ್ಯತೆಯನ್ನು ಬೆಳೆಸಲು ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳನ್ನು ಸ್ಥಾಪಿಸಲಾಯಿತು. ನವೋದ್ಯಮಗಳಿಗಾಗಿ ಅಟಲ್ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಆರಂಭಿಸಲಾಯಿತು. ಇದರಿಂದ ವ್ಯಾಪಕ ಮಟ್ಟದಲ್ಲಿ ನಾವೀನ್ಯತೆಯ ಮನೋಭಾವಕ್ಕೆ ಮಹತ್ವದ ಉತ್ತೇಜನ ದೊರೆಯಿತು. ಇದುವರೆಗೆ 10,000 ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಸುಮಾರು ಶೇ. 60ರಷ್ಟು ಸರ್ಕಾರಿ ಶಾಲೆಗಳಲ್ಲಿವೆ. ಇವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪ್ರಯೋಗಾಲಯಗಳು ಗ್ರಾಮೀಣ ಪ್ರದೇಶಗಳಲ್ಲಿವೆ.

14. ರೇರಾ (2016): ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಖರೀದಿದಾರರ ಹಕ್ಕುಗಳಿಗೆ ಕಾನೂನು ರಕ್ಷಣೆ ಒದಗಿಸಲಾಯಿತು. ಯೋಜನೆಗಳ ನೋಂದಣಿ, ಖರೀದಿದಾರರಿಂದ ಪಡೆದ ಹಣವನ್ನು ಪ್ರತ್ಯೇಕ ಖಾತೆಯಲ್ಲಿ ಇರಿಸುವ ವ್ಯವಸ್ಥೆ ಮತ್ತು ವಿವಾದ ಪರಿಹಾರಕ್ಕೆ ಸಂಬಂಧಿಸಿದ ಕ್ರಮಗಳು ಹೊಣೆಗಾರಿಕೆಯನ್ನು ಹೆಚ್ಚಿಸಿದವು.

15. ಜಿಎಸ್‌ಟಿ ಮಂಡಳಿ (2016): ಸಂವಿಧಾನಬದ್ಧ ಸಂಸ್ಥೆಯ ಮೂಲಕ ತೆರಿಗೆಗೆ ಸಂಬಂಧಿಸಿದ ವಿಷಯಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ನಿರ್ಧಾರ ಕೈಗೊಳ್ಳಲು ವೇದಿಕೆಯನ್ನು ಒದಗಿಸಲಾಯಿತು. ವಿವಿಧ ಪರೋಕ್ಷ ತೆರಿಗೆಗಳ ಬದಲಿಗೆ ಜಿಎಸ್‌ಟಿಯನ್ನು ಜಾರಿಗೆ ತರಲಾಯಿತು. ಇದರಿಂದ ದೇಶದಾದ್ಯಂತ ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆಯನ್ನು ರೂಪಿಸುವತ್ತ ಮಹತ್ವದ ಬದಲಾವಣೆ ಕಂಡುಬಂತು.

16. ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ: ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡುವ ಮೂಲಕ ಅದರ ಸಾಂಸ್ಥಿಕ ಸ್ಥಾನವನ್ನು ಬಲಪಡಿಸಲಾಯಿತು. ಇದರಿಂದ ಜನಸಂಖ್ಯೆಯ ಒಂದು ಪ್ರಮುಖ ವರ್ಗದ ಪರವಾಗಿ ಶಾಶ್ವತ ಸಾಂಸ್ಥಿಕ ಧ್ವನಿಯೊಂದು ರೂಪುಗೊಂಡಿತು.

17. ರಕ್ಷಣಾ ಪಡೆಗಳ ಮುಖ್ಯಸ್ಥರು (2019): ಮೂರು ಸಶಸ್ತ್ರ ಪಡೆಗಳ ನಡುವೆ ಉತ್ತಮ ಸಮನ್ವಯವನ್ನು ಉತ್ತೇಜಿಸುವ ಉದ್ದೇಶದಿಂದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಹುದ್ದೆ ಮತ್ತು ಸೈನಿಕ ವ್ಯವಹಾರಗಳ ಇಲಾಖೆಯನ್ನು ಸ್ಥಾಪಿಸಲಾಯಿತು. ಹಲವು ವರ್ಷಗಳಿಂದ ಪ್ರಸ್ತಾಪಿಸಲಾಗುತ್ತಿದ್ದ ಸಂಯುಕ್ತ ಸೇನಾ ವ್ಯವಸ್ಥೆಗೆ ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಾಯಿತು.

18. ಸಿಡಿಆರ್‌ಐ (2019): ಭಾರತದ ಉಪಕ್ರಮದ ಮೂಲಕ ವಿಪತ್ತುಗಳನ್ನು ತಡೆದುಕೊಳ್ಳಬಲ್ಲ ಮೂಲಸೌಕರ್ಯಕ್ಕಾಗಿ ಅಂತಾರಾಷ್ಟ್ರೀಯ ಒಕ್ಕೂಟವನ್ನು ರಚಿಸಲಾಯಿತು. ಸಂಶೋಧನೆ, ತಾಂತ್ರಿಕ ಸಹಕಾರ ಮತ್ತು ಬಲಿಷ್ಠ ನಿರ್ಮಾಣ ಮಾನದಂಡಗಳ ಮೂಲಕ ಸ್ಥಿತಿಸ್ಥಾಪಕತ್ವವು ಜಾಗತಿಕವಾಗಿ ಹಂಚಿಕೊಳ್ಳುವ ಆದ್ಯತೆಯಾಗಿ ರೂಪುಗೊಂಡಿತು.

19. ಮಿಷನ್ ಕರ್ಮಯೋಗಿ-ಐಜಿಒಟಿ (2020): ಸರ್ಕಾರಿ ಅಧಿಕಾರಿಗಳ ತರಬೇತಿ ವ್ಯವಸ್ಥೆಯನ್ನು ಹುದ್ದೆ ಮತ್ತು ಸೇವಾ ಹಿರಿತನವನ್ನು ಆಧರಿಸಿದ ವಿಧಾನದಿಂದ ನಿರಂತರ ಹಾಗೂ ಸಾಮರ್ಥ್ಯ ಆಧಾರಿತ ಕಲಿಕೆಗೆ ಒತ್ತು ನೀಡುವ ವ್ಯವಸ್ಥೆಯಾಗಿ ಪರಿವರ್ತಿಸಲಾಯಿತು. ಅಧಿಕಾರಿಗಳಿಗೆ ಅವರ ನಿರ್ದಿಷ್ಟ ಜವಾಬ್ದಾರಿಗಳಿಗೆ ಅನುಗುಣವಾದ ಡಿಜಿಟಲ್ ತರಬೇತಿಯನ್ನು ಒದಗಿಸಲಾಯಿತು.

20. ಇನ್-ಸ್ಪೇಸ್ – ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳಿಗೆ ಉತ್ತೇಜನ (2020): ಬಾಹ್ಯಾಕಾಶ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಖಾಸಗಿ ಕಂಪನಿಗಳಿಗಾಗಿ ಏಕಗವಾಕ್ಷಿ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಇದರಿಂದ ಉಡಾವಣೆಗಳು, ಉಪಗ್ರಹಗಳು, ಪರೀಕ್ಷಾ ಸೌಲಭ್ಯಗಳು ಮತ್ತು ಬಾಹ್ಯಾಕಾಶ ಸೇವೆಗಳಂತಹ ಕ್ಷೇತ್ರಗಳಲ್ಲಿ ಖಾಸಗಿ ವಲಯವು ಮುನ್ನಡೆಯಲು ಸಾಂಸ್ಥಿಕ ಮಾರ್ಗವನ್ನು ಸೃಷ್ಟಿಸಲಾಯಿತು.





21. ಸಹಕಾರ ಸಚಿವಾಲಯ (2021): ಸಹಕಾರ ಕ್ಷೇತ್ರಕ್ಕಾಗಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲಾಯಿತು. ಇದರಿಂದ ರಾಷ್ಟ್ರೀಯ ಸಹಕಾರ ದತ್ತಾಂಶ ಸಂಗ್ರಹ, ಬಹು-ರಾಜ್ಯ ಸಹಕಾರ ಸಂಘಗಳ ಬೌಕಟ್ಟು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪಿಎಸಿಎಸ್) ಗಣಕೀಕರಣದಂತಹ ಉಪಕ್ರಮಗಳಿಗೆ ಸಾಂಸ್ಥಿಕ ಅಡಿಪಾಯ ಒದಗಿತು.

22. ಜಾಗತಿಕ ಜೈವಿಕ ಇಂಧನ ಒಕ್ಕೂಟ (2023): ಭಾರತ, ಬ್ರೆಜಿಲ್ ಮತ್ತು ಅಮೆರಿಕದ ಉಪಕ್ರಮದ ಮೂಲಕ ಜೈವಿಕ ಇಂಧನಗಳಿಗಾಗಿ ಹಂಚಿಕೆಯ ಅಂತಾರಾಷ್ಟ್ರೀಯ ವೇದಿಕೆಯನ್ನು ರಚಿಸಲಾಯಿತು. ಸಾಮಾನ್ಯ ಮಾನದಂಡಗಳು, ತಂತ್ರಜ್ಞಾನ ಮತ್ತು ವ್ಯಾಪಾರದ ಮೂಲಕ ಜಾಗತಿಕ ಇಂಧನ ಪರಿವರ್ತನೆಯನ್ನು ವೇಗಗೊಳಿಸಲು ಪ್ರಯತ್ನಗಳನ್ನು ಕೈಗೊಳ್ಳಲಾಯಿತು.

24. ಮೇರಾ ಯುವ ಭಾರತ್ (2023): ಯುವಜನರ ಕೌಶಲ್ಯಾಭಿವೃದ್ಧಿ, ಸ್ವಯಂಸೇವಾ ಚಟುವಟಿಕೆಗಳು, ನಾಯಕತ್ವ ಮತ್ತು ಸ್ಥಳೀಯ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಾಯಿತು. ನೋಂದಣಿ ಮತ್ತು ಸಾಮಾನ್ಯ ದತ್ತಾಂಶ ಸಂಗ್ರಹದ ಮೂಲಕ ಯುವಜನರ ಭಾಗವಹಿಸುವಿಕೆಗೆ ನಿರಂತರ ಹಾಗೂ ವ್ಯವಸ್ಥಿತ ರೂಪವನ್ನು ನೀಡಲಾಯಿತು.

25. ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಒಕ್ಕೂಟ (2023): ಏಳು ಪ್ರಮುಖ ದೊಡ್ಡ ಬೆಕ್ಕು ಜಾತಿಗಳ ಸಂರಕ್ಷಣೆಗಾಗಿ ಸಹಯೋಗದ ಅಂತಾರಾಷ್ಟ್ರೀಯ ವೇದಿಕೆಯನ್ನು ಸ್ಥಾಪಿಸಲಾಯಿತು. ಸಂಶೋಧನೆ, ಮೇಲ್ವಿಚಾರಣೆ, ಬೇಟೆ ತಡೆ ಕ್ರಮಗಳು ಮತ್ತು ಉತ್ತಮ ಕಾರ್ಯವಿಧಾನಗಳ ಹಂಚಿಕೆಯ ಮೂಲಕ ವನ್ಯಜೀವಿ ಸಂರಕ್ಷಣೆಗೆ ಸಾಂಸ್ಥಿಕ ಬೆಂಬಲ ಒದಗಿಸಲಾಯಿತು.



23. ಅಗ್ನಿಪಥ್ ಯೋಜನೆ (2022):

'ಅಗ್ನಿವೀರ್' ವ್ಯವಸ್ಥೆಯ ಮೂಲಕ ಸೈನಿಕರ ನೇಮಕಾತಿ ಮತ್ತು ಸೇವಾ ರಚನೆಯಲ್ಲಿ ಬದಲಾವಣೆಗಳನ್ನು ಪರಿಚಯಿಸಲಾಯಿತು. ನಾಲ್ಕು ವರ್ಷಗಳ ಸೇವಾವಧಿ, ಆಯ್ದ ಸಿಬ್ಬಂದಿಯನ್ನು ಸೇವೆಯಲ್ಲಿ ಮುಂದುವರಿಸಿಕೊಳ್ಳುವ ಅವಕಾಶಗಳು ಮತ್ತು ಮುಂದಿನ ಹಂತದಲ್ಲಿ ಇತರ ರೀತಿಯ ಸೇವೆಯಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳ ಮೂಲಕ ದೀರ್ಘಾವಧಿಯಲ್ಲಿ ಸಶಸ್ತ್ರ ಪಡೆಗಳನ್ನು ಯುವಪಡೆಯಾಗಿ ರೂಪಿಸುವ ಮಾರ್ಗವನ್ನು ಸಿದ್ಧಪಡಿಸಲಾಯಿತು.

"ನಾನು ಈಗ ನೀತಿ ಮತ್ತು ಆಡಳಿತದ ಕ್ಷೇತ್ರದಲ್ಲಿ 25 ವರ್ಷಗಳನ್ನು ಪೂರೈಸುವ ಹಂತವನ್ನು ತಲುಪುತ್ತಿದ್ದೇನೆ. ಈ ವರ್ಷಗಳಲ್ಲಿ ನನ್ನನ್ನು ಹತ್ತಿರದಿಂದ ಗಮನಿಸಿದವರಿಗೆ, ಮೋದಿ ಕೇವಲ ಒಂದು ಮೈಲಿಗಲ್ಲನ್ನು ತಲುಪಿ ಸಂಭ್ರಮ ಆಚರಿಸಿ ಸುಮ್ಮನೆ ಕುಳಿತುಕೊಳ್ಳುವ ವ್ಯಕ್ತಿಯಲ್ಲ ಎಂಬುದು ಗೊತ್ತಿದೆ. ಒಮ್ಮೆ ಒಂದು ಗುರಿಯನ್ನು ಸಾಧಿಸಿದ ನಂತರ, ನಾನು ತಕ್ಷಣವೇ ಅದಕ್ಕಿಂತಲೂ ದೊಡ್ಡದಾದ ಮತ್ತೊಂದು ಗುರಿಗಾಗಿ ಸಿದ್ಧತೆ ನಡೆಸಲು ತೊಡಗಿಸಿಕೊಳ್ಳುತ್ತೇನೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ



ಮುಂಬೈನಲ್ಲಿ 'ಜಾಗತಿಕ ಹಣಕಾಸು ತಂತ್ರಜ್ಞಾನ ಉತ್ಸವ 2026' ಉದ್ಘಾಟನೆ

ಯುಪಿಐ...

ನಾಗರಿಕತೆಯ ಒಂದು ಯಶೋಗಾಥೆ

ಭಾರತದ ತಾಂತ್ರಿಕ ಪ್ರಗತಿಯ ಗಮನಾರ್ಹ ನಿರೂಪಣೆಯಲ್ಲಿ, ಏಕೀಕೃತ ಪಾವತಿ ಇಂಟರ್ ಫೇಸ್ (ಯುಪಿಐ) ಈ ಪರಿವರ್ತನೆಯ ನಿರ್ವಿವಾದದ ಚಾಂಪಿಯನ್ ಆಗಿದೆ. ಯುಪಿಐ ಕೇವಲ ತಂತ್ರಜ್ಞಾನದ ಯಶೋಗಾಥೆಯಾಗಿರದೆ, ಇದು ನಾಗರಿಕತೆಯ ಯಶೋಗಾಥೆಯಾಗಿದೆ. ಸೆಪ್ಟೆಂಬರ್ 8ರಂದು ಮುಂಬೈನಲ್ಲಿ ನಡೆದ ಜಾಗತಿಕ ಹಣಕಾಸು ತಂತ್ರಜ್ಞಾನ ಉತ್ಸವ(ಜಿಎಫ್ಎಫ್) 2026ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಹಣಕಾಸು ಪಾವತಿಗಳು ಪ್ರಸ್ತುತ ಹಣಕಾಸು ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಹೊಂದಿವೆ, ಆದರೆ ಇದೀಗ ಇದರ ಮುಂದಿನ ಹಂತಕ್ಕೆ ಸಾಗುವ ಸಮಯ ಬಂದಿದೆ ಎಂದು ಹೇಳಿದರು.



ತಂತ್ರಜ್ಞಾನವು ಹಣಕಾಸು ಸೇರ್ಪಡೆಗೆ ಅತ್ಯಂತ ಪರಿಣಾಮಕಾರಿ ಸಾಧನವಾಗಿದ್ದು, ಯುಪಿಐ ಇದನ್ನು ಪ್ರದರ್ಶಿಸಿದೆ. ಹಣಕಾಸು ತಂತ್ರಜ್ಞಾನ ವಿಷಯಕ್ಕೆ ಬಂದರೆ, ಸಾಂಪ್ರದಾಯಿಕ ಮಾದರಿಗಳು ತಲುಪಲು ಸಾಧ್ಯವಾಗದ ಸ್ಥಳಗಳನ್ನು ತಲುಪುವ ಸಾಮರ್ಥ್ಯವು ವಿಶಿಷ್ಟ ಲಕ್ಷಣವಾಗಿರಬೇಕು. ಸಾಂಪ್ರದಾಯಿಕ ಬ್ಯಾಂಕುಗಳು ಮತ್ತು ಬ್ಯಾಂಕ್ ಶಾಖೆಗಳು ತಲುಪಲು ವಿಫಲವಾದ ಪ್ರದೇಶಗಳಿಗೆ ಯುಪಿಐ, ಬ್ಯಾಂಕಿಂಗ್ ವ್ಯವಸ್ಥೆಯನ್ನು ಆ ಸ್ಥಳಗಳು ಮತ್ತು ವ್ಯಕ್ತಿಗಳಿಗೆ ಯಶಸ್ವಿಯಾಗಿ ವಿಸ್ತರಿಸಿದೆ. 'ಜಾಗತಿಕ ಹಣಕಾಸು ತಂತ್ರಜ್ಞಾನ ಉತ್ಸವ 2026' ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾತನಾಡಿ, ಹಣಕಾಸು ತಂತ್ರಜ್ಞಾನ ಮಾರುಕಟ್ಟೆಯು ಈಗ ಹಣಕಾಸು ಪಾವತಿಗಳನ್ನು ಮೀರಿ ವಿಸ್ತರಿಸಬೇಕು. ಸಾಲ ವಹಿವಾಟುಗಳು, ವಿಮೆ, ಉಳಿತಾಯ, ಹೂಡಿಕೆಗಳು ಮತ್ತು ಪಿಂಚಣಿಗಳ ಹೆಚ್ಚಿನ ಪಾಲು ಸೇರ್ಪಡೆ ಆಗಬೇಕು ಎಂದು ಹೇಳಿದರು.

ಆಗಸ್ಟ್ 25ರಂದು ಯುಪಿಐ ತನ್ನ 10ನೇ ವಾರ್ಷಿಕೋತ್ಸವ ಆಚರಿಸಿತು. 10 ವರ್ಷಗಳ ಹಿಂದೆ, ಬೆರಳ ತುದಿಯಲ್ಲಿ ಬ್ಯಾಂಕ್ ಸೌಲಭ್ಯಗಳು ಸಿಗಬೇಕೆಂದು ಹೇಳಿದಾಗ, ಕೆಲವರು ಆ ಕಲ್ಪನೆಯನ್ನು ನಂಬಲಾಗದಂತೆ ಇದ್ದರು. ಆದರೆ, ಒಂದು ದಶಕದ ಬಳಿಕ, ಅನೇಕ ತಲೆಮಾರುಗಳಿಂದ ಬ್ಯಾಂಕಿಂಗ್ ವ್ಯವಸ್ಥೆಯಿಂದ ಹೊರಗಿದ್ದ ಲಕ್ಷಾಂತರ ಜನರು ಭಾರತದ ಹಣಕಾಸು ತಂತ್ರಜ್ಞಾನದ ಬೆಳವಣಿಗೆಯ ಪ್ರಮುಖ ಚಾಲಕರಾಗಿದ್ದಾರೆ ಎಂದು ಪ್ರಧಾನ ಮಂತ್ರಿ ಮೋದಿ ತಿಳಿಸಿದರು.

ಭಾರತದ ಪ್ರಗತಿಯು ವಿಶ್ವದಲ್ಲೇ ಹೊಸ ಭರವಸೆ, ಆತ್ಮವಿಶ್ವಾಸ ಮೂಡಿಸಿದೆ

ಇಡೀ ಜಗತ್ತು ಸಂಘರ್ಷ ಮತ್ತು ಅನಿಶ್ಚಿತತೆಯ ಹಂತದ ಮೂಲಕ ಹಾದುಹೋಗುತ್ತಿದೆ. ಇಂಧನ ಮತ್ತು ಸರಕು ಪೂರೈಕೆ ಸರಪಳಿಗಳ ಮೇಲೆ ಒತ್ತಡವಿದೆ, ಜತೆಗೆ ವ್ಯಾಪಾರ-ಸಂಬಂಧಿತ ಉದ್ವಿಗ್ನತೆಗಳೂ ಇವೆ. ಈ ಪರಿಸ್ಥಿತಿಗಳು ಹಲವಾರು ತಿಂಗಳುಗಳಿಂದ ಮುಂದುವರೆದಿದ್ದು, ಏಪ್ರಿಲ್-ಜೂನ್ ತ್ರೈಮಾಸಿಕವು ಅತ್ಯಂತ ಸವಾಲಿನದ್ದಾಗಿದೆ. ಇದರ ನಡುವೆ, ಭಾರತದ 7.8% ಜಿಡಿಪಿ ಬೆಳವಣಿಗೆ ದರವು ಜಾಗತಿಕ ಸಮುದಾಯದಲ್ಲಿ ಹೊಸ ವಿಶ್ವಾಸ ತುಂಬಿದೆ. ಭಾರತದ ಸಾರ್ವಭೌಮ ದರಗಳು ಬೆಳೆಯುತ್ತಿರುವ ವಿಶ್ವಾಸಕ್ಕೆ ಮತ್ತೊಂದು ಸಾಕ್ಷಿಯಾಗಿದೆ. ಇತ್ತೀಚೆಗೆ, ಜಪಾನಿನ ಕ್ರೆಡಿಟ್ ರೇಟಿಂಗ್ ಏಜೆನ್ಸಿಯೊಂದು ಭಾರತದ ಸಾರ್ವಭೌಮ ರೇಟಿಂಗ್ ಅನ್ನು 'ಎ' ಶ್ರೇಣಿಯೊಂದಿಗೆ ಮೇಲ್ದರ್ಜೆಗೆ ಏರಿಸಿದೆ. 3 ದಶಕಗಳ ನಂತರ ಸಾಧಿಸಲಾದ ಮೈಲಿಗಲ್ಲು ಇದಾಗಿದೆ. ಇದು ಭಾರತದ ಆರ್ಥಿಕ ಬೆಳವಣಿಗೆಯ ಆವೇಗ, ಬೃಹತ್ ಆರ್ಥಿಕತೆಯ ಸ್ಥಿರತೆ ಮತ್ತು ಕಳೆದ ಕೆಲವು ವರ್ಷಗಳಿಂದ ಜಾರಿಗೆ ತರಲಾದ ರಚನಾತ್ಮಕ ಸುಧಾರಣೆಗಳ ಬಗ್ಗೆ ಇಡೀ ವಿಶ್ವದ ಆತ್ಮವಿಶ್ವಾಸವನ್ನು ಪ್ರತಿಬಿಂಬಿಸುತ್ತಿದೆ. ಭಾರತದ

ಆಗಸ್ಟ್ ತಿಂಗಳೊಂದರಲ್ಲೇ ಯುಪಿಐ ಮೂಲಕ 24 ಶತಕೋಟಿಗೂ ಹೆಚ್ಚಿನ ವಹಿವಾಟುಗಳು ನಡೆದಿವೆ. ಭಾರತದ ಯುಪಿಐ ಈಗ ವಿಶ್ವಾದ್ಯಂತ 11 ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.



'ಡಿಜಿಟಲ್ ಇಂಡಿಯಾ' ಯಶೋಗಾಥೆ ಈಗ ಹೊಸ ಅಧ್ಯಾಯಕ್ಕೆ ಸಜ್ಜಾಗಿದೆ. ನಮ್ಮ ಇಲ್ಲಿಯವರೆಗಿನ ಹಣಕಾಸು ತಂತ್ರಜ್ಞಾನ ಪ್ರಯಾಣದ ಯಶಸ್ಸನ್ನು ಪ್ರಮಾಣ, ವ್ಯಾಪ್ತಿ, ಸುರಕ್ಷಿತ ವ್ಯವಸ್ಥೆಗಳು, ತಂತ್ರಜ್ಞಾನದ ಸಾರ್ವತ್ರೀಕರಣ ಮತ್ತು ಸಾರ್ವಜನಿಕ ನಂಬಿಕೆಯಿಂದ ವ್ಯಾಖ್ಯಾನಿಸಲಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಹಣಕಾಸು ತಂತ್ರಜ್ಞಾನ ಕಂಪನಿಗಳಿಗೆ ಪ್ರಧಾನಮಂತ್ರಿ ಮೋದಿ ಅವರ ಕಾರ್ಯ...

21ನೇ ಶತಮಾನದ 2ನೇ 25 ವರ್ಷಗಳು ನಮಗೆ ಹೊಸ ಸಾಧ್ಯತೆಗಳನ್ನು ತರುತ್ತವೆ. ಏಜೆಂಟಿಕ್ ಎಐ, ಸೂಕ್ಷ್ಮ ದತ್ತಾಂಶಗಳ ಸಂರಕ್ಷಣೆ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್‌ನಂತಹ ತಂತ್ರಜ್ಞಾನಗಳು ಹಣಕಾಸು ವಲಯದಲ್ಲಿ ಹೊಸ ಅವಕಾಶಗಳಿಗೆ ಬಾಗಿಲು ತೆರೆಯುತ್ತಿವೆ. ಈ ಸಾಧ್ಯತೆಗಳನ್ನು ಸ್ಪಷ್ಟ ಪರಿಣಾಮಗಳಾಗಿ ಪರಿವರ್ತಿಸುವಲ್ಲಿ ಈಗ ಸವಾಲು ಎದುರಾಗಿದೆ. ಹಣಕಾಸು ತಂತ್ರಜ್ಞಾನ ಕಂಪನಿಗಳು ಸಾಮೂಹಿಕವಾಗಿ ಕೆಲವು ಗುರಿಗಳನ್ನು ಹೊಂದಿಸಬೇಕೆಂದು ಪ್ರಧಾನ ಮಂತ್ರಿ ಮೋದಿ ಸೂಚಿಸಿದರು. ಅವರ ಕೆಲವು ಶಿಫಾರಸುಗಳು ಇಲ್ಲಿವೆ - ಈ ಮಾನದಂಡಗಳ ವಿರುದ್ಧ ಹಣಕಾಸು ತಂತ್ರಜ್ಞಾನ ವಲಯವು ತನ್ನನ್ನು ತಾನು ಅಳತೆ ಮಾಡಿಕೊಂಡರೆ, ಭಾರತದ ಈ ಉದ್ಯಮವು ಅಪರಿಮಿತ ಸಾಧ್ಯತೆಗಳಿಗೆ ಪ್ರವೇಶ ದ್ವಾರವಾಗಬಹುದು:

1. ಭಾರತದಲ್ಲಿ ಸೈಬರ್ ಭದ್ರತೆಯನ್ನು ಉನ್ನತ ಮಟ್ಟಕ್ಕೆ ಹೆಚ್ಚಿಸಬೇಕು.
2. ಉದ್ಯಮವು ತನ್ನದೇ ಆದ ನೈತಿಕ ದತ್ತಾಂಶ ಸಂರಕ್ಷಣಾ ಮಾನದಂಡಗಳನ್ನು ಸ್ಥಾಪಿಸಬೇಕು.
3. ಸದೃಢವಾದ ಹಣಕಾಸು ತಂತ್ರಜ್ಞಾನ ನಿಯಂತ್ರಕ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ನಿರ್ಮಿಸಬೇಕು.
4. ಪ್ರತಿ ಕಂಪನಿಗೆ ಪಾರದರ್ಶಕ ರೇಟಿಂಗ್‌ಗಳನ್ನು ಸಕ್ರಿಯಗೊಳಿಸಲು ಹಣಕಾಸು ತಂತ್ರಜ್ಞಾನ ಗ್ರಾಹಕ ಸಂರಕ್ಷಣಾ ಸೂಚ್ಯಂಕವನ್ನು ರೂಪಿಸಬೇಕು.

ಪ್ರಧಾನಮಂತ್ರಿ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

"ಸುಧಾರಣೆಗಳ ಎಕ್ಸ್ ಪ್ರೆಸ್" ಇನ್ನೂ ವೇಗವಾಗಿ ಮುಂದುವರಿಯುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಪುನರುಚ್ಚರಿಸಿದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ಮೋದಿ ಅವರು ತಮ್ಮ ಸಾಧನೆಗಳಿಂದಲೇ ವಿರಮಿಸಿಕೊಳ್ಳುವ ವ್ಯಕ್ತಿಯಲ್ಲ. ಆದರೆ ನೀತಿ ಮತ್ತು ಆಡಳಿತ ವ್ಯವಸ್ಥೆಯಲ್ಲಿ 25 ವರ್ಷಗಳನ್ನು ಪೂರ್ಣಗೊಳಿಸುವ ಹಂತಕ್ಕೆ ತಲುಪಿದ್ದೇವೆ. ಒಂದು ಗುರಿ ಸಾಧಿಸಿದ ತಕ್ಷಣ, ಅವರು ಇನ್ನೂ ಹೆಚ್ಚಿನ ಉದ್ದೇಶಕ್ಕಾಗಿ ತಯಾರಿ ಆರಂಭಿಸುತ್ತಾರೆ ಎಂಬುದು ಹಲವು ವರ್ಷಗಳಿಂದ ಅವರನ್ನು ಗಮನಿಸಿದವರಿಗೆ ತಿಳಿದಿದೆ. ಭಾರತದ ಯುಪಿಐ ಹಲವಾರು ದೇಶಗಳನ್ನು ತಲುಪಿದೆ, ಆದರೂ ಇದು ಕೇವಲ ಮೊದಲ ಹೆಜ್ಜೆಯಾಗಿದೆ; ಮುಂದಿನ ಗುರಿ ಆ ರಾಷ್ಟ್ರಗಳ ಪಾವತಿ ವ್ಯವಸ್ಥೆಗಳೊಂದಿಗೆ ಸಂಯೋಜಿಸುವುದಾಗಿದೆ - ಇದು ಈಗಾಗಲೇ ಸಿಂಗಾಪುರದೊಂದಿಗೆ ಮಾಡಿರುವ ಸಾಧನೆಯಾಗಿದೆ ಎಂದು ಅವರು ಹೇಳಿದರು.

2026 ಸೆಪ್ಟೆಂಬರ್ 8ರಿಂದ 11ರ ವರೆಗೆ ಮುಂಬೈನಲ್ಲಿ ಜರುಗಿದ ಜಿಎಫ್‌ಎಫ್

7ನೇ ಆವೃತ್ತಿಯ ಜಾಗತಿಕ ಹಣಕಾಸು ತಂತ್ರಜ್ಞಾನ ಉತ್ಸವ(ಜಿಎಫ್‌ಎಫ್)-2026 ಸೆಪ್ಟೆಂಬರ್ 8ರಿಂದ 11ರ ವರೆಗೆ ಮುಂಬೈನಲ್ಲಿ ನಡೆಯಿತು. 2020ರಿಂದಲೂ ಜಿಎಫ್‌ಎಫ್ ಅಂತಾರಾಷ್ಟ್ರೀಯ ಚಿಂತನಾಶೀಲ ನಾಯಕತ್ವ ವೇದಿಕೆಯಾಗಿ ಹೊರಹೊಮ್ಮಿದೆ, ಇದು ನೀತಿ ನಿರೂಪಕರು, ನಿಯಂತ್ರಕರು, ಕೇಂದ್ರ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಹಣಕಾಸು ತಂತ್ರಜ್ಞಾನ ಕಂಪನಿಗಳು, ತಂತ್ರಜ್ಞಾನ ಸಂಸ್ಥೆಗಳು, ಹೂಡಿಕೆದಾರರು, ಶಿಕ್ಷಣ ತಜ್ಞರು ಮತ್ತು ಇತರೆ ಜಾಗತಿಕ ಪಾಲುದಾರರನ್ನು ಸಂಪರ್ಕಿಸುತ್ತಿದೆ, ಇದು ಹಣಕಾಸಿನ ಭವಿಷ್ಯವನ್ನು ರೂಪಿಸುವ ಬಗ್ಗೆ ವ್ಯಾಪಕ ಚರ್ಚೆ ನಡೆಸುತ್ತದೆ. ●



ಸರಕು ಸಾಗಣೆ ಕಾರಿಡಾರ್‌ಗಳು
ಪುನರುಜ್ಜೀವನಗೊಂಡ ಭಾರತದ ಜೀವನಾಡಿ

2047ರ ವೇಳೆಗೆ ದೇಶವನ್ನು 'ವಿಕಸಿತ ಭಾರತ'(ಅಭಿವೃದ್ಧಿ ಹೊಂದಿದ ಭಾರತ)ವಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಉದ್ದೇಶ ಸಾಧಿಸುವಲ್ಲಿ ಎಲ್ಲಾ ರೀತಿಯ ಮೂಲಸೌಕರ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದಕ್ಕಾಗಿಯೇ ಪ್ರಸ್ತುತ ಕೇಂದ್ರ ಸರ್ಕಾರವು, ದೇಶದ ಪ್ರತಿಯೊಂದು ಭಾಗವನ್ನು ವೇಗವಾಗಿ ಅಭಿವೃದ್ಧಿಪಡಿಸುತ್ತಿದೆ. ಈ ಉಪಕ್ರಮದ ಭಾಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 8ರಂದು ಗುಜರಾತ್‌ನ ವಡೋದರಾದಲ್ಲಿ 35,000 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು ಮತ್ತು ಉದ್ಘಾಟಿಸಿದರು. ಈ ಯೋಜನೆಗಳು ಸರಕು ಸಾಗಣೆ ಕಾರಿಡಾರ್‌ಗಳು, ಬಂದರುಗಳು, ರೈಲ್ವೆ ಮಾರ್ಗಗಳು, ರಸ್ತೆಗಳು, ವಿದ್ಯುತ್, ವಸತಿ ಮತ್ತು ನೀರು ಸರಬರಾಜು ಇತ್ಯಾದಿಗಳಿಗೆ ವ್ಯಾಪಿಸಿವೆ...

ಅಭಿವೃದ್ಧಿ ಹೊಂದಿದ ಭಾರತದ ಆಧುನಿಕ ಅವಶ್ಯಕತೆಗಳಿಗೆ ಹೊಂದಿಕೆಯಾಗುವ ತಡೆರಹಿತ ಸಂಪರ್ಕದ ಅಗತ್ಯವಿದೆ. ಈ ಸಂದರ್ಭದಲ್ಲಿ, 2,800 ಕಿಲೋಮೀಟರ್‌ಗಳಿಗೂ ಹೆಚ್ಚು ಉದ್ದದ ಮೀಸಲಾದ ಸರಕು ಸಾಗಣೆ ಕಾರಿಡಾರ್ ಯೋಜನೆ ಪೂರ್ಣಗೊಂಡಿತು. ಈ ಕಾರಿಡಾರ್‌ನ ಪರಿಕಲ್ಪನೆಯು 2004ರಲ್ಲಿ ಹುಟ್ಟಿಕೊಂಡಿತು, ಇದಕ್ಕಾಗಿ 2006ರಲ್ಲಿ ವಿಶೇಷ ಕಂಪನಿಯನ್ನು ರಚಿಸಲಾಯಿತು, ಆದರೆ ಸಂಬಂಧಿತ ಕಡಿತಗಳು 2014ರ ವರೆಗೂ ಹಿಂದಕ್ಕೆ ಮತ್ತು ಮುಂದಕ್ಕೆ ಸಾಗುತ್ತಿದ್ದವು. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 2014ರಲ್ಲಿ ಅಧಿಕಾರ ವಹಿಸಿಕೊಂಡ ನಂತರವೇ ಈ ಕಾರಿಡಾರ್‌ನ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಯಿತು. ಇಂದು, ಪೂರ್ವ ಮತ್ತು ಪಶ್ಚಿಮ ಸರಕು ಸಾಗಣೆ ಕಾರಿಡಾರ್‌ಗಳು ದೇಶದ ವ್ಯಾಪಾರ ಮತ್ತು ವಾಣಿಜ್ಯದ ಬೆನ್ನೆಲುಬಾಗುತ್ತಿವೆ. ಈ ಸಮರ್ಪಿತ ಸರಕು ಸಾಗಣೆ ಕಾರಿಡಾರ್ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಭಾರತದ ಜೀವನಾಡಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ,

2014ರಿಂದ ಭಾರತದಲ್ಲಿ 50,000 ಆಧುನಿಕ ರೈಲು ಬೋಗಿಗಳನ್ನು ತಯಾರಿಸಲಾಗಿದೆ. ಜತೆಗೆ, ಸುಮಾರು 2.5 ಲಕ್ಷ ಸರಕು ಬೋಗಿಗಳನ್ನು ರೈಲ್ವೆ ಜಾಲಕ್ಕೆ ಸೇರಿಸಲಾಗಿದೆ.

ಪೂರ್ವ ಮತ್ತು ಪಶ್ಚಿಮ ಸರಕು ಸಾಗಣೆ ಕಾರಿಡಾರ್‌ಗಳಲ್ಲಿ ಪ್ರತಿದಿನ 430ಕ್ಕೂ ಹೆಚ್ಚು ಸರಕು ಸಾಗಣೆ ರೈಲುಗಳು ಕಾರ್ಯ ನಿರ್ವಹಿಸುತ್ತಿವೆ. ಹಿಂದೆ 100 ಕಿಲೋಮೀಟರ್ ದೂರ ಕ್ರಮಿಸಲು ಆರೂವರೆ ಗಂಟೆಗಳನ್ನು ತೆಗೆದುಕೊಳ್ಳುತ್ತಿದ್ದ ಸರಕು ಸಾಗಣೆ ರೈಲು, ಈಗ ಅದೇ ದೂರವನ್ನು ಅರ್ಧಕ್ಕಿಂತ ಕಡಿಮೆ ಸಮಯದಲ್ಲಿ ಕ್ರಮಿಸುತ್ತಿದೆ. ಟ್ರಕ್ ಮೂಲಕ ಸರಕುಗಳನ್ನು ಸಾಗಿಸಲು ಸಾಮಾನ್ಯವಾಗಿ 30 ಗಂಟೆಗಳನ್ನು ತೆಗೆದುಕೊಳ್ಳುವ ಪ್ರಯಾಣವು ಸಮರ್ಪಿತ ಸರಕು ಸಾಗಣೆ ಕಾರಿಡಾರ್ ಮೂಲಕ ಕೇವಲ 10 -12 ಗಂಟೆಗಳಲ್ಲಿ ಪೂರ್ಣಗೊಳ್ಳುತ್ತಿದೆ.





ಉದ್ಘಾಟನೆ ಮತ್ತು ಶಿಲಾನ್ಯಾಸ...

- ವಡೋದರಾ ಮತ್ತು ತಾಂಡಾ ರಸ್ತೆ ನಡುವಿನ ಹೊಸ ರೈಲು ಸೇವೆಗೆ ಚಾಲನೆ.
- ಛೋಟಾ ಉದೇಪುರ್-ಧಾರ್ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಜೋಬತ್-ತಾಂಡಾ ರಸ್ತೆಯ ಹೊಸ ರೈಲು ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ
- ರಸ್ತೆ ಸುರಕ್ಷತೆ ಸುಧಾರಿಸಲು ಮತ್ತು ಸಂಚಾರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಎನ್ಎಚ್-48ರ ವಡೋದರಾ-ಸೂರತ್ ವಿಭಾಗದಲ್ಲಿ ಕಂದರಿ ಚೋಕ್ಡಿ ಮತ್ತು ಲುವಾರಾ ಪಾಟಿಯಾದಲ್ಲಿ 6 ಪಥದ ಮೇಲ್ಸೇತುವೆಗಳ ಉದ್ಘಾಟನೆ.
- 1,780 ಕೋಟಿ ರೂ. ಮೌಲ್ಯದ 3 ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಶಿಲಾನ್ಯಾಸ.
- 9,700 ಕೋಟಿ ರೂ.ಗಿಂತ ಹೆಚ್ಚಿನ ವೆಚ್ಚದ 329 ಕಿಲೋಮೀಟರ್‌ಗಳ ವ್ಯಾಪ್ತಿಯ 3 ರೈಲ್ವೆ ಯೋಜನೆಗಳಿಗೆ ಶಿಲಾನ್ಯಾಸ.
- ಸುಮಾರು 2,600 ಕೋಟಿ ರೂ. ಮೌಲ್ಯದ ಗುಜರಾತ್ ಸರ್ಕಾರದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ಮತ್ತು ಉದ್ಘಾಟನೆ.

ಪ್ರಧಾನಮಂತ್ರಿ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

'ಸುಳ್ಳಿನ ಕಂತೆ'ಯಿಂದ ನಿಮ್ಮನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿರುವ ಜನರನ್ನು ನೀವು ಪ್ರತಿಯೊಂದು ಬೀದಿ ಮೂಲೆಯಲ್ಲೂ ಕಾಣಬಹುದು. ಆದರೆ ಭಾರತದ ಯುವಕರು ಸತ್ಯವನ್ನು ಪ್ರತಿಧ್ವನಿಸುವ ಘರ್ಜನೆಯಿಂದ ಮುನ್ನಡೆಯುತ್ತಾರೆ. ಸರ್ಕಾರ ಇಂದು ಎಲ್ಲಾ ಇಂಧನ ಕ್ಷೇತ್ರಗಳ ಮೇಲೆ ಎಷ್ಟು ಗಮನ ಹರಿಸಿದೆ ಎಂಬುದನ್ನು ನಮ್ಮ ಯುವ ಸ್ನೇಹಿತರು ನೋಡಬಹುದು - ಅದು ಸೌರ, ಪವನ, ಜಲ ಅಥವಾ ಪರಮಾಣು ಇಂಧನ ಆಗಿರಬಹುದು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಸಪ್ತಧಾರ' ದೃಷ್ಟಿಕೋನದಲ್ಲಿ ಉತ್ಪಾದನೆ ಅಥವಾ ತಯಾರಿಕೆ ಪ್ರಮುಖ ಆಧಾರಸ್ತಂಭಗಳಲ್ಲಿ ಒಂದಾಗಿದೆ. ಭಾರತವು ಈಗ ಉತ್ಪಾದನೆಯ ಹೊಸ ಸಾಹಸಗಾಥೆ ಬರೆಯುತ್ತಿದೆ, ಚಿಪ್‌ಗಳಿಂದ ಹಿಡಿದು ಹಡಗುಗಳ ನಿರ್ಮಾಣದವರೆಗೆ ಎಲ್ಲವನ್ನೂ ವ್ಯಾಪಿಸಿದೆ - ಅಂದರೆ ಬಿಡಿಭಾಗಗಳಿಂದ ಹಿಡಿದು ಅಂತಿಮ ಉತ್ಪನ್ನಗಳ ತನಕ ಎಲ್ಲವೂ ಭಾರತದಲ್ಲೇ ತಯಾರಾಗುತ್ತವೆ. ಪಿವಿ ಮಾಡ್ಯೂಲ್‌ಗಳ ದೇಶೀಯ ಉತ್ಪಾದನೆ ಆರಂಭವಾಗಿದೆ, ಇದು ದೇಶವು ಈ ವಲಯದಲ್ಲಿ 200 ಗಿಗಾವ್ಯಾಟ್‌ಗಳಿಗಿಂತ ಹೆಚ್ಚಿನ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತದೆ. ದೇಶಾದ್ಯಂತ, 5.5 ದಶಲಕ್ಷ ಕುಟುಂಬಗಳು ತಮ್ಮ ಚಾವಣಿಗಳು ಮತ್ತು ಮೇಲ್ಛಾವಣಿಗಳಲ್ಲಿ ಸೌರ ವಿದ್ಯುತ್ ಉತ್ಪಾದನಾ ಸ್ಥಾವರಗಳನ್ನು ಸ್ಥಾಪಿಸಿವೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಜಾಗತಿಕ ಸರದಾರನಾಗಿ ಹೊರಹೊಮ್ಮಲು ದೇಶವು ತನ್ನನ್ನು ತಾನು ಸಿದ್ಧಪಡಿಸಿಕೊಳ್ಳಬೇಕು, ಅಗತ್ಯವಾದ ಪರಿಸರ ವ್ಯವಸ್ಥೆ ನಿರ್ಮಿಸಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದರು. ಭಾರತವು ನೆಲಗಟ್ಟಿನಲ್ಲಿ ನಿಖರವಾಗಿ ಮಾಡುತ್ತಿರುವುದು ಇದನ್ನೇ. ಇದಕ್ಕಾಗಿಯೇ ಯುರೇನಿಯಂ ಮತ್ತು ನಿರ್ಣಾಯಕ ಮತ್ತು ಅಪರೂಪದ ಭೂಮಿ ಖನಿಜಗಳಿಗಾಗಿ ವಿವಿಧ ರಾಷ್ಟ್ರಗಳೊಂದಿಗೆ ಒಪ್ಪಂದಗಳಿಗೆ ಸಹಿ ಹಾಕಲಾಗುತ್ತಿದೆ. ಈ ಎಲ್ಲಾ ಪ್ರಯತ್ನಗಳು ದೇಶದ ಯುವಕರ ಭವಿಷ್ಯವನ್ನು ಭದ್ರಪಡಿಸುವ ಗುರಿ ಹೊಂದಿವೆ. ಜಾಗತಿಕ ಅಗತ್ಯಗಳು ವಿಕಸನಗೊಳ್ಳುತ್ತಿದ್ದಂತೆ, ನಮ್ಮ ಶಿಕ್ಷಣ ಮತ್ತು ಕಲಿಕೆಯ ವಿಧಾನಗಳೂ ಸಹ ವಿಕಸನಗೊಳ್ಳಬೇಕು. ಪರಿಣಾಮವಾಗಿ, ಭಾರತವು ತನ್ನ ಶಿಕ್ಷಣ ನೀತಿ ಮತ್ತು ಅದರ ಬೋಧನಾ ಮತ್ತು ತರಬೇತಿ ಸಂಸ್ಥೆಗಳನ್ನು ಮರುರೂಪಿಸುತ್ತಿದೆ.

ಸರಕು ಕಾರಿಡಾರ್‌ನ ಪ್ರಮುಖಾಂಶಗಳು

ಮುಂಬೈನ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ(ಜೆಎನ್‌ಪಿಟಿ)ದಿಂದ ವಡೋದರಾಗೆ ಡಬಲ್-ಸ್ಟ್ಯಾಕ್ ಕಂಟೇನರ್ ಸರಕು ಸಾಗಣೆ ರೈಲು ಸಂಚರಿಸುತ್ತಿದೆ. ಇದು ಒಂದರ ಮೇಲೊಂದು ಕಂಟೇನರ್‌ಗಳನ್ನು ಜೋಡಿಸಿ ರೈಲು ಸಂಚಾರ ನಡೆಸುತ್ತಿದೆ. ಈ ಒಂದೇ ಕಾರ್ಯಾಚರಣೆಯು ಮುಂಬೈನಿಂದ ವಡೋದರಾಕ್ಕೆ 250ಕ್ಕೂ ಹೆಚ್ಚು ಟ್ರಕ್‌ಗಳು ಸಾಗಿಸುವ ಸರಕುಗಳಿಗೆ ಸಮಾನವಾದ ಸರಕುಗಳನ್ನು ಸಾಗಿಸಿದೆ. 326 ಕಿಲೋಮೀಟರ್ ಉದ್ದದ ಈ ಕಾರಿಡಾರ್‌ನ ಎಲ್ಲಾ 3 ವಿಭಾಗಗಳನ್ನು 20,700 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ●

ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ವಿಜೇತರಿಗೆ ಪ್ರಧಾನಮಂತ್ರಿ ಮೋದಿ ಅವರ ಸಂದೇಶ

ನೈಜ ಶಕ್ತಿ...

ಜ್ಞಾನದ ಮೂಲಕ ಜಾಗೃತಿ, ಅರಿವಿನ ಮೂಲಕ ಬದಲಾವಣೆ

ಶಿಕ್ಷಕರು ಕೇವಲ ಪುಸ್ತಕಗಳಲ್ಲಿ ಸಿಗುವ ಪಾಠಗಳನ್ನು ಕಲಿಸುವುದಷ್ಟೇ ಅಲ್ಲ, ಅವರು ಮಕ್ಕಳಿಗೆ ಜೀವನವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಮುಂದುವರಿಯುವುದು ಹೇಗೆ ಎಂಬುದನ್ನು ಕಲಿಸುತ್ತಾರೆ. ಶಿಕ್ಷಕರ ದಿನಾಚರಣೆಯಂದು(ಸೆಪ್ಟೆಂಬರ್ 5) ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಲೋಕ ಕಲ್ಯಾಣ್ ಮಾರ್ಗದಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ವಿಜೇತರೊಂದಿಗೆ ಸಂವಾದ ನಡೆಸಿದರು, ಅವರ ಅನುಭವಗಳು, ನಾವೀನ್ಯತೆಗಳು ಮತ್ತು ಮಕ್ಕಳ ಭವಿಷ್ಯದ ಕುರಿತು ಒಳನೋಟಗಳನ್ನು ಹಂಚಿಕೊಂಡರು. ಮಕ್ಕಳ ಜೀವನದಲ್ಲಿ ಶಿಕ್ಷಕರ ಪಾತ್ರವು ಹೆಚ್ಚು ಮಹತ್ವದ್ದಾಗುತ್ತಿದೆ ಎಂಬುದನ್ನು ಅವರು ಸಂವಾದ ಸಮಯದಲ್ಲಿ ಗಮನಿಸಿದರು...

ಮಕ್ಕಳ ಶೈಕ್ಷಣಿಕ ಸಾಧನೆಯನ್ನು ಮೀರಿ ಅವರ ನಡವಳಿಕೆ ಮತ್ತು ದೈನಂದಿನ ಜೀವನದ ಬಗ್ಗೆ ಶಿಕ್ಷಕರು ಗಮನ ಹರಿಸಬೇಕು ಎಂದು ಪ್ರಧಾನ ಮಂತ್ರಿ ಒತ್ತಿ ಹೇಳಿದರು. ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ವಿಜೇತರನ್ನು ಭೇಟಿಯಾದ ಪ್ರಧಾನಮಂತ್ರಿ ಮೋದಿ, ಬಾಲ್ಯದ ಮುಗ್ಧತೆಯನ್ನು ಕಾಪಾಡುವುದು ಒಂದು ನಿರ್ಣಾಯಕ ಜವಾಬ್ದಾರಿಯಾಗಿದೆ. ಶಿಕ್ಷಕರು ಅದನ್ನು ಮಕ್ಕಳಿಗೆ ಪೂರೈಸಲು ಉತ್ತಮ ಸ್ಥಾನದಲ್ಲಿದ್ದಾರೆ. ಮಕ್ಕಳು ಸಾಮಾನ್ಯವಾಗಿ ಸಹಜ ಸ್ವಭಾವ ಮತ್ತು ಕುತೂಹಲವನ್ನು ಹಂಚಿಕೊಳ್ಳುತ್ತಾರೆ. ಶಿಕ್ಷಕರು ಈ ಕುತೂಹಲವನ್ನು ಪ್ರೋತ್ಸಾಹಿಸಿ ಸರಿಯಾದ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡಿದರೆ, ಅವರು ಮಗುವಿನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದು ಎಂದರು.

ಶಿಕ್ಷಕರು ಸಕಾಲಿಕ ಮಾರ್ಗದರ್ಶನ ನೀಡಬಹುದು

ಶಿಕ್ಷಕರ ಕರ್ತವ್ಯವು ಪಠ್ಯಕ್ರಮವನ್ನು ಪೂರ್ಣಗೊಳಿಸುವುದನ್ನು ಮೀರಿದ್ದಾಗಿದೆ, ಇದು ಬಾಲ್ಯವನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವುದನ್ನು ಒಳಗೊಂಡಿದೆ. ಶಿಕ್ಷಕರ ದಿನದಂದು ಪ್ರಧಾನ ಮಂತ್ರಿ ಮೋದಿ ಅವರು ತರಗತಿಯ ಆಚೆಗೆ ಮಕ್ಕಳು ತಮ್ಮ ಜೀವನವನ್ನು ಅರ್ಥ ಮಾಡಿಕೊಳ್ಳುವ ಮಹತ್ವವಿದೆ. ವಿಶೇಷವಾಗಿ ಅತಿಯಾಗಿ ಮೊಬೈಲ್ ಸ್ಕ್ರೀನ್ ಬಳಕೆ ಮತ್ತು ಮಾದಕ ದ್ರವ್ಯ ಸೇವನೆಯಂತಹ ಸವಾಲುಗಳ ನಡುವೆ ಇದು ಮಹತ್ವ ಪಡೆದಿದೆ. ಕ್ರೀಡೆ, ಸೃಜನಶೀಲತೆ ಮತ್ತು ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಯು ಮಕ್ಕಳಲ್ಲಿ ಉತ್ತಮ ಅಭ್ಯಾಸಗಳು ಮತ್ತು ಆರೋಗ್ಯಕರ ಆಸಕ್ತಿಗಳನ್ನು ಬೆಳೆಸಬಹುದು. ಏತನ್ಮಧ್ಯೆ, ಇವೆಲ್ಲವನ್ನೂ ಗಮನಿಸುವ ಶಿಕ್ಷಕರು ಸೂಕ್ಷ್ಮ ನಡವಳಿಕೆಯ ಬದಲಾವಣೆಗಳನ್ನು ಗುರುತಿಸಬೇಕು, ಸಮಯೋಚಿತ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.





ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದ ರಾಷ್ಟ್ರಪತಿ

2026 ಸೆಪ್ಟೆಂಬರ್ 5ರ ಶಿಕ್ಷಕರ ದಿನದಂದು ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ದೇಶಾದ್ಯಂತದ ಶಿಕ್ಷಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ನಂತರ ಭಾಷಣ ಮಾಡಿದ ರಾಷ್ಟ್ರಪತಿ, ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲಾದ 'ಅವಕಾಶಗಳ ಸಮಾನತೆ'ಯ ಆದರ್ಶ ಅರಿತುಕೊಳ್ಳಲು ಶಿಕ್ಷಣವು ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಅತ್ಯಲ್ಪ ಮಟ್ಟಕ್ಕೆ ತರುವ ಸಾಧನೆಯು ಶಿಕ್ಷಕರ ಸಂಘಟಿತ ಪ್ರಯತ್ನಗಳ ಮೂಲಕ ಸಾಧ್ಯವಾಗಿದೆ. ಈ ರಾಷ್ಟ್ರೀಯ ಯಶಸ್ಸಿಗೆ ಎಲ್ಲಾ ಶಿಕ್ಷಕರು ಶ್ಲಾಘನೆಗೆ ಅರ್ಹರು. ದೇಶದ ಅಭಿವೃದ್ಧಿಯಲ್ಲಿ ಶೈಕ್ಷಣಿಕ ಶ್ರೇಷ್ಠತೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹೆಚ್ಚಿನ ಮಹತ್ವ ಹೊಂದಿದೆ. ಭಾರತವನ್ನು ವಿಶ್ವದ ಕೌಶಲ್ಯ ರಾಜಧಾನಿಯಾಗಿ ಸ್ಥಾಪಿಸುವುದು ಮತ್ತು ಅದನ್ನು ಜ್ಞಾನದ ಸೂಪರ್ ಪವರ್ ಆಗಿ ಪರಿವರ್ತಿಸುವುದು ನಮ್ಮ ರಾಷ್ಟ್ರೀಯ ಆದ್ಯತೆಗಳಲ್ಲಿ ಒಂದಾಗಿದೆ ಎಂದರು.

ಮಕ್ಕಳಲ್ಲಿ 'ಶ್ರಮದ ಘನತೆ'ಯಂತಹ ಮೌಲ್ಯಗಳನ್ನು ಬೆಳೆಸಲು ಸಹಾಯ ಮಾಡಿ

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಚರ್ಚಿಸುವಾಗ, ಮಕ್ಕಳನ್ನು ತರಗತಿಯಿಂದ ಹೊರಗೆ ಕರೆದುಕೊಂಡು ಹೋಗಿ ನೈಜ ಜಗತ್ತಿನ ಕೌಶಲ್ಯ ಮತ್ತು ವಿವಿಧ ರೀತಿಯ ಕೆಲಸಗಳೊಂದಿಗೆ ಸಂಪರ್ಕ ಸಾಧಿಸುವ ಮಹತ್ವವಿದೆ. ಪಠ್ಯಕ್ರಮ ಆಧಾರಿತ ಜ್ಞಾನ ನೀಡುವುದಕ್ಕೆ ಮಾತ್ರ ಶಿಕ್ಷಕರು ತಮ್ಮನ್ನು ಸೀಮಿತಗೊಳಿಸಿಕೊಳ್ಳಬಾರದು, ಆದರೆ ಮಕ್ಕಳಲ್ಲಿ ಶ್ರಮದ ಘನತೆಯಂತಹ ಮೌಲ್ಯಗಳನ್ನು ಬೆಳೆಸಲು ಸಹಾಯ ಮಾಡಬೇಕೆಂದು ಪ್ರಧಾನ ಮಂತ್ರಿ ಒತ್ತಿ ಹೇಳಿದರು.

ಬದಲಾವಣೆಯ ಆರಂಭ

ಕೆಲವು ಸಂಭಾಷಣೆಗಳು ಕೇವಲ ಮಾತುಕತೆಗಿಂತ ಹೆಚ್ಚಿನದ್ದಾಗಿರುತ್ತವೆ, ಅವು ಬದಲಾವಣೆಗೆ ಆರಂಭಿಕ ಹಂತವಾಗುತ್ತವೆ. ಶೈಕ್ಷಣಿಕತೆಯನ್ನು ಮೀರಿ ಸ್ವಚ್ಛತೆ ಮತ್ತು ಸ್ತನ ಕ್ಯಾನ್ಸರ್ ಜಾಗೃತಿಯ ಬಗ್ಗೆ ಸಂದೇಶಗಳನ್ನು ಸಮುದಾಯಕ್ಕೆ ಕೊಂಡೊಯ್ಯುವ ತಮ್ಮ ಉಪಕ್ರಮವನ್ನು ಶಿಕ್ಷಕರೊಬ್ಬರು ಹಂಚಿಕೊಂಡರು. ಕಾಶಿಯಲ್ಲಿ ನಡೆದ ಸ್ತನ ಕ್ಯಾನ್ಸರ್ ಜಾಗೃತಿ ಅಭಿಯಾನ ನೆನಪಿಸಿಕೊಂಡ ಪ್ರಧಾನಮಂತ್ರಿ ಮೋದಿ, ಹೆಚ್ಚಿದ ಜಾಗೃತಿಯಿಂದಾಗಿ ಹೆಚ್ಚಿನ ಮಹಿಳೆಯರು ಧೈರ್ಯದಿಂದ ಮುಂದೆ ಬಂದು ತಪಾಸಣೆಗೆ ಒಳಗಾಗುವುದನ್ನು ಪ್ರೋತ್ಸಾಹಿಸಿತು. ಇದು ಶಿಕ್ಷಕರ ನಿಜವಾದ ಶಕ್ತಿ. ಜ್ಞಾನದಿಂದ ಜಾಗೃತಿ ಕಡೆಗೆ ಮತ್ತು ಜಾಗೃತಿಯ ಅರಿವಿನಿಂದ ಬದಲಾವಣೆ ಕಡೆಗೆ ಸಾಗುವುದೇ ನಿಜವಾದ ಶಕ್ತಿ ಎಂದು ಪ್ರಧಾನಮಂತ್ರಿ ತಿಳಿಸಿದರು.

ಸಾರ್ವಜನಿಕ ಭಾಷಣದ ಮಂತ್ರ: ಆತ್ಮವಿಶ್ವಾಸ + ಅಭ್ಯಾಸ

ಯಶಸ್ವಿ ಭಾಷಣಕಾರರಾಗಲು ಆತ್ಮವಿಶ್ವಾಸ ಮತ್ತು ಸ್ಥಿರವಾದ ಅಭ್ಯಾಸ ಅತ್ಯಗತ್ಯ ಎಂದು ಶಿಕ್ಷಕರೊಬ್ಬರು ವಿವರಿಸಿದರು. ಅದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಕ್ಷಣವೇ ತಮಾಷೆಯ ಪ್ರಶ್ನೆ ಕೇಳಿದರು: "ಈ ಆತ್ಮವಿಶ್ವಾಸ ಎಲ್ಲಿಂದ ಬರುತ್ತದೆ?" ಮೋದಿ ಅವರ ಪ್ರಶ್ನೆಯು ಉತ್ಸಾಹಭರಿತ ವಿಚಾರ ವಿನಿಮಯಕ್ಕೆ ನಾಂದಿ ಹಾಡಿತು - ಸಂಭಾಷಣೆಯ 'ಪ್ರಭೆ ಅಥವಾ ತೇಜಸ್ಸು' ಪರಿಕಲ್ಪನೆಗೆ ತಿರುಗಿ, ನಗು ಎಲ್ಲೆಡೆ ತೇಲಾಡಿತು. ಕೆಲವೊಮ್ಮೆ, ಪಾಠವನ್ನು ನಗುವಿನೊಂದಿಗೆ ಸಂಯೋಜಿಸುವುದೇ ಕಲಿಯಲು ಇರುವ ಅತ್ಯಂತ ಸ್ಮರಣೀಯ ಮಾರ್ಗ ಎಂದರು.

82 ಶಿಕ್ಷಕರು ಮತ್ತು ಶಿಕ್ಷಣ ತಜ್ಞರಿಗೆ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ

ಈ ವರ್ಷ 3 ವಿಭಾಗಗಳಿಂದ 82 ಶಿಕ್ಷಕರು ಮತ್ತು ಶಿಕ್ಷಣ ತಜ್ಞರನ್ನು ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇವರಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 48 ಶಿಕ್ಷಕರು, ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಪಾಲಿಟೆಕ್ನಿಕ್‌ಗಳ 21 ಶಿಕ್ಷಕರು, ಅಧ್ಯಾಪಕರು ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ 13 ಕೌಶಲ್ಯ ತರಬೇತುದಾರರು ಸೇರಿದ್ದಾರೆ. ಪ್ರಶಸ್ತಿ ಪುರಸ್ಕೃತರು ತಮ್ಮ ಬೋಧನಾ ಅನುಭವಗಳು ಮತ್ತು ನಾವೀನ್ಯತೆಗಳ ಬಗ್ಗೆ ಮಾತನಾಡಿದರು. ತರಗತಿ ಬೋಧನೆಯನ್ನು ಹೆಚ್ಚು ಆಕರ್ಷಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಲು ಅಳವಡಿಸಿಕೊಂಡ ವಿವಿಧ ಸೃಜನಶೀಲ ವಿಧಾನಗಳನ್ನು ಅವರು ಹಂಚಿಕೊಂಡರು. ●



ಸಚಿವ ಸಂಪುಟದ ನಿರ್ಣಯಗಳ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಕೇಂದ್ರ ಸಚಿವ ಸಂಪುಟದ ನಿರ್ಣಯಗಳು

ರೈಲು ಸಂಪರ್ಕ ವಿಸ್ತರಣೆ

8 ಬಹು-ಹಳಿ ಯೋಜನೆಗಳಿಗೆ ಅನುಮೋದನೆ

ಕೇಂದ್ರ ಸರ್ಕಾರವು ರಾಷ್ಟ್ರದ ಅಭಿವೃದ್ಧಿ ಮತ್ತು ರೈಲು ಸಂಪರ್ಕ ವಿಸ್ತರಣೆಗೆ ಬದ್ಧವಾಗಿದೆ, ಈ ಗುರಿಯತ್ತ ನಿರಂತರವಾಗಿ ಕೆಲಸ ಮಾಡುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 9ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 9 ರಾಜ್ಯಗಳನ್ನು ಒಳಗೊಂಡ 8 ಬಹು-ಹಳಿ ಯೋಜನೆಗಳ ಪ್ರಸ್ತಾವನೆಗಳನ್ನು ಅನುಮೋದಿಸಿತು. ಈ ಯೋಜನೆಗಳು ಸಂಪರ್ಕ ಮತ್ತು ಸರಕು ಸಾಗಣೆ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ, ತೈಲ ಆಮದುಗಳನ್ನು 20 ಕೋಟಿ ಲೀಟರ್‌ಗಳಷ್ಟು ಕಡಿಮೆ ಮಾಡುತ್ತದೆ. ಇದು ಇಂಗಾಲ ಹೊರಸೂಸುವಿಕೆಯನ್ನು 104 ಕೋಟಿ ಕಿಲೋಗ್ರಾಂಗಳಷ್ಟು ಕಡಿಮೆ ಮಾಡುತ್ತದೆ. ಹೆಚ್ಚುವರಿಯಾಗಿ, ಉದ್ಯೋಗ ಮತ್ತು ಪ್ರವಾಸೋದ್ಯಮಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ...

ನಿರ್ಧಾರ: ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದಾದ್ಯಂತ 17 ಜಿಲ್ಲೆಗಳನ್ನು ಒಳಗೊಂಡ 5 ಬಹು-ಹಳಿ ಯೋಜನೆಗಳಿಗೆ ಅನುಮೋದನೆ.

ಪರಿಣಾಮ: ಭಾರತೀಯ ರೈಲ್ವೆಯ ಅಸ್ತಿತ್ವದಲ್ಲಿರುವ ಜಾಲವು ಸುಮಾರು 540 ಕಿಲೋಮೀಟರ್‌ಗಳಷ್ಟು ವಿಸ್ತರಿಸಲಿದೆ. ಈ ಯೋಜನೆಗಳ ಒಟ್ಟು ಅಂದಾಜು ವೆಚ್ಚ 10,021 ಕೋಟಿ ರೂ.ಗಳಾಗಿದ್ದು, 2029-30ರ ವೇಳೆಗೆ ಈ ಯೋಜನೆಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

- ಹೆಚ್ಚಿದ ಮಾರ್ಗ ಸಾಮರ್ಥ್ಯವು ರೈಲುಗಳ ಚಲನೆಯನ್ನು ಗಮನಾರ್ಹವಾಗಿ ಸುಧಾರಿಸುತ್ತದೆ, ಇದರ ಪರಿಣಾಮವಾಗಿ ಭಾರತೀಯ ರೈಲ್ವೆಗಳಿಗೆ ಕಾರ್ಯಾಚರಣೆಯ ದಕ್ಷತೆ ಮತ್ತು ಸೇವಾ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ.
- ಈ ಬಹು-ಹಳಿ ಯೋಜನೆಗಳು ಕಾರ್ಯಾಚರಣೆಗಳನ್ನು ಸುಗಮಗೊಳಿಸುವ ಜತೆಗೆ, ಸಂಚಾರ ದಟ್ಟಣೆ ಕಡಿಮೆ ಮಾಡುತ್ತದೆ.

ಈ ಕೆಳಗಿನ ಯೋಜನೆಗಳು ಸೇರಿವೆ:

- ಅರಕ್ಕೋಣಂ - ರೇಣಿಗುಂಟ 3ನೇ ಮತ್ತು 4ನೇ ಮಾರ್ಗ - 77 ಕಿ.ಮೀ
- ವೈಟ್‌ಫೀಲ್ಡ್ - ಬಂಗಾರಪೇಟೆ 3ನೇ ಮತ್ತು 4ನೇ ಮಾರ್ಗ - 47 ಕಿ.ಮೀ
- ಹೊಸೂರು - ಓಮಲೂರು ದ್ವಿಪಥ - 147 ಕಿ.ಮೀ
- ಸೇಲಂ - ಕರೂರ್ - ದಿಂಡಿಗಲ್ ದ್ವಿಪಥ - 159 ಕಿ.ಮೀ
- ಸಿಕಂದರಾಬಾದ್ (ಫಾಟ್ಕೇಸರ್) ನಿಂದ ಕಾಜಿಪೇಟೆವರೆಗೆ 110 ಕಿ.ಮೀ ಬಹು-ಹಳಿ

“10,000 ಕೋಟಿ ರೂ.ಗಿಂತ ಹೆಚ್ಚಿನ ವೆಚ್ಚದ 5 ಪ್ರಮುಖ ರೈಲ್ವೆ ಯೋಜನೆಗಳು ಇವಾಗಿವೆ. ದಕ್ಷಿಣ ಭಾರತದಲ್ಲಿ ರೈಲು ಸಂಪರ್ಕ ಸುಧಾರಣೆಯಿಂದ ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಸಚಿವ ಸಂಪುಟದ ನಿರ್ಧಾರವು ವೇಗವಾದ ಪ್ರಯಾಣಿಕರ ಸಂಚಾರ, ಸದೃಢವಾದ ಸಂಪರ್ಕ ಮತ್ತು ಹೆಚ್ಚುವರಿ ಸರಕು ಸಾಗಣೆ ಸಾಮರ್ಥ್ಯವನ್ನು ಖಚಿತಪಡಿಸುತ್ತದೆ.”

- ನರೇಂದ್ರ ಮೋದಿ,
ಪ್ರಧಾನಮಂತ್ರಿ



ನಿರ್ಧಾರ: ಪಶ್ಚಿಮ ಬಂಗಾಳ, ಜಾರ್ಖಂಡ್, ಒಡಿಶಾ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಾದ್ಯಂತ 14 ಜಿಲ್ಲೆಗಳನ್ನು ಒಳಗೊಂಡ 3 ಬಹು-ಹಳಿ ಯೋಜನೆಗಳಿಗೆ ಅನುಮೋದನೆ.

ಪರಿಣಾಮ: ಭಾರತೀಯ ರೈಲ್ವೆ ಜಾಲವು ಸುಮಾರು 656 ಕಿಲೋಮೀಟರ್‌ಗಳಷ್ಟು ವಿಸ್ತರಿಸಲಿದೆ. ಈ ಯೋಜನೆಗಳ ಒಟ್ಟು ಅಂದಾಜು ವೆಚ್ಚ 10,783 ಕೋಟಿ ರೂ. ಅವುಗಳನ್ನು 2029-30ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

- ಹೆಚ್ಚಿದ ಲೈನ್ ಸಾಮರ್ಥ್ಯವು ಚಲನಶೀಲತೆಯನ್ನು ಗಮನಾರ್ಹವಾಗಿ ಸುಧಾರಿಸುತ್ತದೆ, ಇದರ ಪರಿಣಾಮವಾಗಿ ಭಾರತೀಯ ರೈಲ್ವೆಗಳಿಗೆ ಕಾರ್ಯಾಚರಣೆಯ ದಕ್ಷತೆ ಮತ್ತು ಸೇವಾ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ.
- ಈ ಬಹು-ಹಳಿ ಪ್ರಸ್ತಾವಿತ ಕಾರ್ಯಾಚರಣೆಗಳನ್ನು ಸುಗಮಗೊಳಿಸುತ್ತವೆ ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ.
- ಪ್ರಸ್ತಾವಿತ ಬಹು-ಹಳಿ ಯೋಜನೆಗಳು ಸುಮಾರು 56 ಲಕ್ಷ ಜನಸಂಖ್ಯೆ ಹೊಂದಿರುವ ಸುಮಾರು 4,790 ಹಳ್ಳಿಗಳಿಗೆ ಉತ್ತಮ ಸಂಪರ್ಕ ಒದಗಿಸುತ್ತದೆ.
- ಪ್ರಸ್ತಾವಿತ ಸಾಮರ್ಥ್ಯ ವರ್ಧನೆಯು ದೇಶಾದ್ಯಂತ ಹಲವಾರು ಪ್ರಮುಖ ಪ್ರವಾಸಿ ತಾಣಗಳಿಗೆ ರೈಲು ಸಂಪರ್ಕವನ್ನು ಸುಧಾರಿಸುತ್ತದೆ.

ಇದರಲ್ಲಿ ಈ ಯೋಜನೆಗಳು ಸೇರಿವೆ:

1. ಖರಗ್‌ಪುರ-ಝಾರ್ಸುಗುಡ (ಬಾಗ್ದೇಹಿ) 4ನೇ ಮಾರ್ಗ
2. ಕಟ್ನಿ-ಪೇಂದ್ರ ರಸ್ತೆ, 4ನೇ ಮಾರ್ಗ
3. ಬಿಲಾಸ್ಪುರ್ (ಉಸ್ಲಾಪುರ್) - ಪೆಂಡ್ರಾ ರಸ್ತೆ 3ನೇ ಮಾರ್ಗ

51 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿಗೆ ಪ್ರಯೋಜನವಾಗಲಿದೆ

ನಿರ್ಧಾರ: ಇಪಿಎಫ್‌ಒ ವೇತನ ಮಿತಿಯನ್ನು ತಿಂಗಳಿಗೆ 15,000 ರೂ.ನಿಂದ 25,000 ರೂ.ಗೆ ಹೆಚ್ಚಿಸಲು ಸಚಿವ ಸಂಪುಟ ಅನುಮೋದನೆ

ಪರಿಣಾಮ: ಈ ನಿರ್ಧಾರವು ಔಪಚಾರಿಕ ಆರ್ಥಿಕತೆಯನ್ನು ಉತ್ತೇಜಿಸುತ್ತದೆ, ಸಾಮಾಜಿಕ ಭದ್ರತೆ ಒದಗಿಸುವ ಭಾರತದ ದೀರ್ಘಕಾಲೀನ ದೃಷ್ಟಿಕೋನವನ್ನು ಮುನ್ನಡೆಸುತ್ತದೆ. ಈ ಅನುಮೋದನೆಯು ಎಲ್ಲರನ್ನೂ ಒಳಗೊಳ್ಳುವ, ಚೇತರಿಕೆಯ ಮತ್ತು ಭವಿಷ್ಯಕ್ಕೆ ಸಿದ್ಧವಾದ ಸಾಮಾಜಿಕ ಭದ್ರತಾ ವಾಸ್ತುಶಿಲ್ಪ ನಿರ್ಮಿಸುವತ್ತ ಮತ್ತೊಂದು ಪ್ರಮುಖ ಹೆಜ್ಜೆಯನ್ನು ಗುರುತಿಸುತ್ತದೆ. ಭಾರತವು ವಿಕಸಿತ ಭಾರತ @2047 ಕಡೆಗೆ ಸಾಗುತ್ತಿರುವಾಗ ಆರ್ಥಿಕ ಬೆಳವಣಿಗೆ, ಹೆಚ್ಚುತ್ತಿರುವ ವೇತನಗಳು ಮತ್ತು ಔಪಚಾರಿಕ ಉದ್ಯೋಗಗಳನ್ನು ವಿಸ್ತರಿಸುವ ಜತೆಗೆ ಸಾಮಾಜಿಕ ರಕ್ಷಣೆ ಮುಂದುವರಿಯುವುದನ್ನು ಖಚಿತಪಡಿಸುತ್ತದೆ.

- ಈ ನಿರ್ಧಾರವು 2026 ಸೆಪ್ಟೆಂಬರ್ 17ರಂದು ವಿಶ್ವಕರ್ಮ ದಿವಸ್ ಮತ್ತು ಸೇವಾ ದಿವಸ್ ನಿಂದ ಜಾರಿಗೆ ಬಂದಿದೆ.
- ಉದ್ಯೋಗಿಗಳು ಭವಿಷ್ಯ ನಿಧಿ ಉಳಿತಾಯ,ಪಿಂಚಣಿ ಮತ್ತು ವಿಮಾ ರಕ್ಷಣೆಯಿಂದ ಪ್ರಯೋಜನ ಪಡೆಯುತ್ತಾರೆ.
- ಕಾರ್ಮಿಕ ಸಂಹಿತೆಗಳ ಅಡಿ ಎಲ್ಲಾ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ.
- ಸಾಮಾಜಿಕ ಭದ್ರತಾ ವ್ಯಾಪ್ತಿಗೆ ಒಳಪಡುವ ಜತೆಗೆ ಉದ್ಯೋಗದ ಔಪಚಾರಿಕತೆಯನ್ನು ಇದು ಉತ್ತೇಜಿಸುತ್ತದೆ.
- 51 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳು ಕಡ್ಡಾಯ ಇಪಿಎಫ್‌ಒ ವ್ಯಾಪ್ತಿಯೊಳಗೆ ಬರುವ ನಿರೀಕ್ಷೆಯಿದೆ.
- ಸರ್ಕಾರದ ವಾರ್ಷಿಕ ವೆಚ್ಚ ಸುಮಾರು 11,339 ಕೋಟಿ ರೂ. ಬರಲಿದೆ ಎಂದು ಅಂದಾಜಿಸಲಾಗಿದೆ, ಪ್ರಸ್ತುತ ಇರುವ ವಾರ್ಷಿಕ ಬಜೆಟ್ ಬೆಂಬಲ ಸುಮಾರು 10,250 ಕೋಟಿ ರೂ. ಆಗಿದೆ.
- ಮುಂದಿನ 5 ವರ್ಷಗಳ ಅಂದಾಜು ವೆಚ್ಚ ಸುಮಾರು 56,696 ಕೋಟಿ ರೂ. ಆಗಿರಲಿದೆ.
- ಈ ಅನುಮೋದನೆಯು ಹೆಚ್ಚಿನ ಉದ್ಯೋಗಿಗಳು ಭವಿಷ್ಯ ನಿಧಿ ಉಳಿತಾಯ, ನೌಕರರ ಪಿಂಚಣಿ ಯೋಜನೆ(ಇಪಿಎಸ್) ಅಡಿ ಪಿಂಚಣಿಗಳು ಮತ್ತು ವಿಮಾ ರಕ್ಷಣೆಯಂತಹ ಪ್ರಯೋಜನಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.
- ಇದು ಶಾಸನಬದ್ಧ ಕೊಡುಗೆ ಮತ್ತು ಪಿಂಚಣಿ-ವೇತನ ಮಾರ್ಗಸೂಚಿಯನ್ನು ಚಾಲ್ತಿಯಲ್ಲಿರುವ ವೇತನ ಮಟ್ಟವನ್ನು ಉತ್ತಮವಾಗಿ ಪ್ರತಿಬಿಂಬಿಸಲು ಅನುವು ಮಾಡಿಕೊಡುತ್ತದೆ.
- 2004ರಿಂದ 2014ರ ವರೆಗಿನ ದಶಕದಲ್ಲಿ ಇಪಿಎಫ್‌ಒ ವೇತನ ಮಿತಿ ಬದಲಾಗದೆ ಉಳಿಯಿತು; ಆದರೆ 2014 ಸೆಪ್ಟೆಂಬರ್ ನಲ್ಲಿ ಇದನ್ನು 15,000 ರೂ.ಗೆ ಹೆಚ್ಚಿಸಲಾಯಿತು.

ಸಚಿವ ಸಂಪುಟದ ನಿರ್ಣಯಗಳ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.





ಅಂತಾರಾಷ್ಟ್ರೀಯ ಬಾಹ್ಯಾಕಾಶ ಶೃಂಗಸಭೆ ಉದ್ದೇಶಿಸಿ ಪ್ರಧಾನಮಂತ್ರಿ ಮೋದಿ ಭಾಷಣ

ಬಾಹ್ಯಾಕಾಶ ಪರಿಶೋಧನೆಯ ಮಂತ್ರ ಸಂಘರ್ಷದ ಬದಲಿಗೆ ಸಹಕಾರ

ಶತಮಾನಗಳಿಂದ ಮಾನವ ಕಲ್ಪನೆಗೆ ಸ್ಫೂರ್ತಿ ನೀಡಿದ ಬಾಹ್ಯಾಕಾಶ, ಈಗ ಭೂಮಿಯ ಮೇಲಿನ ದೈನಂದಿನ ಜೀವನವನ್ನು ರೂಪಿಸುತ್ತಿದೆ - ಹವಾಮಾನ ಮತ್ತು ಬೆಳೆಗಳಿಂದ ಹಿಡಿದು ಸಾಗರಗಳು ಮತ್ತು ಸಮುದಾಯಗಳವರೆಗೆ ಎಲ್ಲದರ ಮೇಲೆ ಗಾಢ ಪ್ರಭಾವ ಬೀರುತ್ತಿದೆ. ಬಾಹ್ಯಾಕಾಶದ ಅಗಾಧ ಸಾಧ್ಯತೆಗಳನ್ನು ಚರ್ಚಿಸಲು ಪ್ಯಾರಿಸ್‌ನಲ್ಲಿ ಮೊದಲ ಅಂತಾರಾಷ್ಟ್ರೀಯ ಬಾಹ್ಯಾಕಾಶ ಶೃಂಗಸಭೆ ನಡೆಸಲಾಯಿತು. ಸೆಪ್ಟೆಂಬರ್ 10ರಂದು ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಬಾಹ್ಯಾಕಾಶದ ಸಾಮರ್ಥ್ಯವು ಅಪರಿಮಿತವಾಗಿದೆ ಮತ್ತು ಅದರ ಸಂಪೂರ್ಣ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಭಾರತದ ಕಾರ್ಯ ವಿಧಾನವು "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ಎಂಬ ಮೂಲತತ್ತ್ವದಲ್ಲಿ ಬೇರೂರಿದೆ. ಈ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ಮೋದಿ ಅವರು, ಸುರಕ್ಷಿತ ಈ ವಲಯವನ್ನು ಖಚಿತಪಡಿಸಿಕೊಳ್ಳಲು ನಾವು ನಮ್ಮ ಪೃಥ್ವಿಯನ್ನು ಮೀರಿ ಪ್ರಯಾಣಿಸುವ ಏಕೀಕರಣ ಮನೋಭಾವಕ್ಕೆ ಒತ್ತು ನೀಡಿದರು. 'ನಾವು ಅಂತಾರಾಷ್ಟ್ರೀಯ ಕಾನೂನು, ಸಂವಾದ ಮತ್ತು ಬಹುಪಕ್ಷೀಯ ಸಹಕಾರದಲ್ಲಿ ನೆಲೆಗೊಂಡಿರುವ ಸುರಕ್ಷಿತ, ಭದ್ರತೆಯ, ಶಾಂತಿಯುತ ಮತ್ತು ಸುಸ್ಥಿರ ಬಾಹ್ಯಾಕಾಶ ಕ್ಷೇತ್ರವನ್ನು ಬೆಂಬಲಿಸುತ್ತೇವೆ. 'ಸಾರ್ವಜನಿಕ ಹಿತಾಸಕ್ತಿಗಾಗಿ ಪಾರದರ್ಶಕತೆ ಮತ್ತು ಸಮಗ್ರತೆಯೊಂದಿಗೆ ವೈಜ್ಞಾನಿಕ ದತ್ತಾಂಶವನ್ನು ಬಳಸಿಕೊಳ್ಳಬೇಕು. ಇದಲ್ಲದೆ, ಕಕ್ಷೆಯ ದಟ್ಟಣೆ ಹೆಚ್ಚಾದಂತೆ, ತಂತ್ರಜ್ಞಾನಗಳು ಮುಂದುವರೆದಂತೆ ಮತ್ತು ಭಾಗವಹಿಸುವ ರಾಷ್ಟ್ರಗಳ ಸಂಖ್ಯೆ ಬೆಳೆದಂತೆ, ನಮ್ಮ ಆಯ್ಕೆಗಳು ಸ್ಪಷ್ಟವಾಗಿರಬೇಕು: ಸಂಘರ್ಷಕ್ಕಿಂತ ಸಹಕಾರಕ್ಕೆ ಮತ್ತು ಅಲ್ಪಾವಧಿಯ ಲಾಭಕ್ಕಿಂತ ಸುಸ್ಥಿರತೆಗೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಪ್ರಧಾನಮಂತ್ರಿ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ

- ಚಂದ್ರಯಾನ 3 - ಭಾರತವನ್ನು ಚಂದ್ರನ ದಕ್ಷಿಣ ಧ್ರುವದ ಬಳಿ ಇಳಿದ ಮೊದಲ ದೇಶವನ್ನಾಗಿ ಮಾಡಿತು.
- ಆದಿತ್ಯ-ಎಲ್1 ಸೂರ್ಯನ ರಹಸ್ಯಗಳನ್ನು ಬಿಚ್ಚಿಡುತ್ತಿದೆ. ಕಳೆದ ವರ್ಷ ಒಬ್ಬ ಭಾರತೀಯ ತಂತ್ರಜ್ಞ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ್ದರು.
- ಭವಿಷ್ಯದಲ್ಲಿ 2035ರ ವೇಳೆಗೆ ಭಾರತೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವುದು ಮತ್ತು 2040ರ ವೇಳೆಗೆ ಭಾರತೀಯನನ್ನು ಚಂದ್ರನಲ್ಲಿಗೆ ಕಳುಹಿಸುವುದು ನಮ್ಮ ಗುರಿಯಾಗಿದೆ.
- ಭಾರತೀಯ ರಾಕೆಟ್‌ಗಳನ್ನು ಬಳಸಿಕೊಂಡು 34 ದೇಶಗಳ 430ಕ್ಕೂ ಹೆಚ್ಚು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಲಾಗಿದೆ.
- ಇಸ್ರೋದ ತಂತ್ರಜ್ಞಾನಗಳು ಮತ್ತು ಪಾಲುದಾರಿಕೆಗಳು ಭಾರತಕ್ಕೆ ಮಾತ್ರವಲ್ಲದೆ, ಇಡೀ ಜಗತ್ತಿಗೆ ಪ್ರಯೋಜನಕಾರಿಯಾಗಿವೆ.

> **“ಒಟ್ಟಾಗಿ ನಾವೆಲ್ಲಾ ಮಾನವತೆ ಮತ್ತು ಭವಿಷ್ಯದ ಪೀಳಿಗೆಯ ಪ್ರಯೋಜನಕ್ಕಾಗಿ ಬಾಹ್ಯಾಕಾಶವನ್ನು ಅನ್ವೇಷಿಸುತ್ತೇವೆ. ನಾವು ಒಟ್ಟಾಗಿ ನಾವೀನ್ಯತೆ ಸಾಧಿಸುತ್ತೇವೆ ಮತ್ತು ಬಾಹ್ಯಾಕಾಶವನ್ನು ಒಟ್ಟಾಗಿ ರಕ್ಷಿಸುತ್ತೇವೆ.**
>
> *- ನರೇಂದ್ರ ಮೋದಿ, ಪ್ರಧಾನಮಂತ್ರಿ*





2029ರ ವೇಳೆಗೆ 'ಮಾದಕವಸ್ತು ಮುಕ್ತ ಭಾರತ' ಸಾಕಾರದ ಸಂಕಲ್ಪ

ಮಾದಕವಸ್ತು ಸಂಬಂಧಿತ ಅಪರಾಧವು ಮುಂದಿನ ಪೀಳಿಗೆಯನ್ನೇ ನಾಶಪಡಿಸಬಲ್ಲ ಪಿಡುಗಾಗಿದೆ. ಜೊತೆಗೆ, ಇದರಿಂದ ಲಭಿಸುವ ಆದಾಯವನ್ನು ಭಯೋತ್ಪಾದನೆಗೆ ಹಣಕಾಸು ಒದಗಿಸಲು ಬಳಸಲಾಗುತ್ತದೆ; ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಮಾದಕವಸ್ತು-ಭಯೋತ್ಪಾದನಾ ಜಾಲಗಳು ಸಕ್ರಿಯವಾಗಿವೆ. ಪ್ರಸ್ತುತ ಇಡೀ ಜಗತ್ತು ಈ ಪಿಡುಗಿನ ವಿರುದ್ಧ ಹೋರಾಡುತ್ತಿದೆ. ಈ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಸರ್ಕಾರವು 2019ರಲ್ಲಿ ದೃಢವಾದ ಕ್ರಮಗಳನ್ನು ಕೈಗೊಂಡಿದೆ. ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರು ಸೆಪ್ಟೆಂಬರ್ 6 ರಂದು ಗೋವಾದ ರಾಜಧಾನಿ ಪಣಜಿಯಲ್ಲಿ ಮಾತನಾಡುತ್ತಾ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 2029ರ ವೇಳೆಗೆ 'ಮಾದಕವಸ್ತು ಮುಕ್ತ ಭಾರತ'ದ ಸಂಕಲ್ಪವನ್ನು ಸಾಕಾರಗೊಳಿಸುವುದಾಗಿ ಹೇಳಿದರು.

ಮಾದಕವಸ್ತುಗಳ ಬಳಕೆ ವಿರುದ್ಧ ದೇಶಾದ್ಯಂತ ಸಮಗ್ರ ಅಭಿಯಾನಕ್ಕಾಗಿ 2026ರಿಂದ 2029ರವರೆಗಿನ ಅವಧಿಗೆ ಸದೃಢ ಮಾರ್ಗನಕ್ಷೆಯನ್ನು ಸಿದ್ಧಪಡಿಸಲಾಗಿದೆ. ಇದರ ಮೂಲಕ ಸಂಬಂಧಿತ ಎಲ್ಲಾ ಇಲಾಖೆಗಳು ಮತ್ತು ರಾಜ್ಯ ಸರ್ಕಾರಗಳನ್ನು ಒಗ್ಗೂಡಿಸುತ್ತಾ ಭಾರತದ ಪ್ರತಿಯೊಂದು ಗ್ರಾಮ ಹಾಗೂ ನಗರವನ್ನು ಮಾದಕವಸ್ತು ಮುಕ್ತಗೊಳಿಸುವ ಗುರಿಯನ್ನು ಹೊಂದಲಾಗಿದೆ. ಪಣಜಿಯಲ್ಲಿ ಮಾದಕವಸ್ತು ನಿಯಂತ್ರಣ ಕುರಿತ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರು, 2014ಕ್ಕೂ ಮುನ್ನ ಈ ಹೋರಾಟವನ್ನು ಅಲ್ಲಲ್ಲಿ ಪ್ರತ್ಯೇಕವಾಗಿ ನಡೆಸಲಾಗುತ್ತಿತ್ತು ಹಾಗೂ ಸಣ್ಣ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಂಡು, ಸಣ್ಣ ಆರೋಪಿಗಳನ್ನು ಬಂಧಿಸುವುದರಲ್ಲೇ ತೃಪ್ತಿ ಪಡಲಾಗುತ್ತಿತ್ತು. ಆದರೆ, 2019ರಿಂದ ಈ ವಿಷಯವನ್ನು ರಾಷ್ಟ್ರೀಯ ಭದ್ರತೆಯ ಪ್ರಮುಖ ಆದ್ಯತೆಯಾಗಿ ಪರಿಗಣಿಸಲಾಗಿದೆ ಎಂದು ತಿಳಿಸಿದರು.

ಮಾದಕವಸ್ತುಗಳ ವಿರುದ್ಧದ ಹೋರಾಟವು ಕೇವಲ ಕಾಗದದ ಮೇಲಿನ ಕಾರ್ಯವಿಧಾನಗಳು ಮತ್ತು ವಿವಿಧ ಸಂಸ್ಥೆಗಳ ಪ್ರತ್ಯೇಕ ಕ್ರಮಗಳಿಗೆ ಸೀಮಿತವಾಗದೇ, ಸಮನ್ವಯಯುತ, ನಿರಂತರ ರಾಷ್ಟ್ರ ಮಟ್ಟದ ಅಭಿಯಾನವಾಗಿ ರೂಪುಗೊಂಡಿದೆ. ದೇಶದಿಂದ ನಕ್ಸಲ್ ವಾದವನ್ನು ನಿರ್ಮೂಲನೆ ಮಾಡಿದಂತೆಯೇ, ಇದೀಗ ಕೇಂದ್ರ ಸರ್ಕಾರವು ಮಾದಕವಸ್ತುಗಳ ಪಿಡುಗನ್ನು ನಿರ್ಮೂಲನೆ ಮಾಡುವತ್ತ ಸಾಗುತ್ತಿದೆ. ಈಗ ಪ್ರಾಧಿಕಾರಗಳು, ಸಣ್ಣ ಪ್ರಮಾಣದ ಮಾದಕವಸ್ತುಗಳ ಪ್ಯಾಕೆಟ್ ವಶಪಡಿಸಿಕೊಂಡರೂ ಕೂಡ, ದೇಶದಲ್ಲಿನ ಅದರ ಮೂಲಸ್ಥಳವನ್ನು ಪತ್ತೆಹಚ್ಚುತ್ತಿವೆ ಎಂದು ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು ಗಮನಿಸಿದ್ದಾರೆ.

ನಾಲ್ಕು ಆಧಾರ ಸ್ತಂಭಗಳನ್ನಾಧರಿಸಿರುವ ಮಾರ್ಗನಕ್ಷೆ: ಮಾದಕವಸ್ತು ಮುಕ್ತ ಭಾರತದ ಮಾರ್ಗನಕ್ಷೆಯು ನಾಲ್ಕು ಪ್ರಮುಖ ಆಧಾರ ಸ್ತಂಭಗಳನ್ನಾಧರಿಸಿದೆ. ಅವುಗಳೆಂದರೆ ಗುಪ್ತಚರ ಮಾಹಿತಿ ಮತ್ತು ಕಾರ್ಯಾಚರಣೆ ಆಧಾರಿತ ಜಾರಿ ಕ್ರಮಗಳು; ಮಾದಕವಸ್ತುಗಳ ತಯಾರಿಕೆಯಲ್ಲಿ ಬಳಸುವ ಮೂಲ ರಾಸಾಯನಿಕಗಳು ಹಾಗೂ ಕೃತಕ ಮಾದಕವಸ್ತುಗಳ ನಿಯಂತ್ರಣ; ಮಾದಕವಸ್ತುಗಳ ಬೇಡಿಕೆ ತಗ್ಗಿಸುವ ಮತ್ತು ಹಾನಿ ತಪ್ಪಿಸುವ ಕ್ರಮಗಳು ಹಾಗೂ ಸಾಮರ್ಥ್ಯವರ್ಧನೆ ಮತ್ತು ಸಮನ್ವಯತೆ.

ಮೂರು ವರ್ಷಗಳ ಮಾರ್ಗನಕ್ಷೆ: 'ಮಾದಕವಸ್ತು ಮುಕ್ತ ಭಾರತ'ವನ್ನು ರೂಪಿಸುವ ಉದ್ದೇಶದಿಂದ, ಜುಲೈ 2026 ರಿಂದ ಜುಲೈ 2029 ರವರೆಗಿನ ಅವಧಿಯನ್ನು ಒಳಗೊಂಡ ಮೂರು ವರ್ಷಗಳ ಮಾರ್ಗನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಮಾದಕವಸ್ತುಗಳ ವಶಪಡಿಸಿಕೊಳ್ಳುವಿಕೆ: 2004 ರಿಂದ 2014ರ ಅವಧಿಯಲ್ಲಿ ₹40,000 ಕೋಟಿ ಮೌಲ್ಯದ 26 ಲಕ್ಷ ಕೆಜಿ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು; 2014 ರಿಂದ 2026ರ ನಡುವೆ ₹1.89 ಲಕ್ಷ ಕೋಟಿ ಮೌಲ್ಯದ 1.19 ಕೋಟಿ ಕೆಜಿಗೂ ಹೆಚ್ಚಿನ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರತಿಜ್ಞಾ ಸ್ವೀಕಾರ: 'ಮಾದಕವಸ್ತು ಮುಕ್ತ ಭಾರತ' (ನಶಾ-ಮುಕ್ತ್ ಭಾರತ್) ಅಭಿಯಾನದಡಿ 25 ಕೋಟಿ ನಾಗರಿಕರನ್ನು ತಲುಪಿ, ಅವರಿಗೆ ಪ್ರತಿಜ್ಞೆಯನ್ನು ಬೋಧಿಸಲಾಗಿದೆ. 5.70 ಲಕ್ಷ ನಾಗರಿಕರನ್ನು ವ್ಯಸನದಿಂದ ಮುಕ್ತಗೊಳಿಸಲಾಗಿದೆ.

ವ್ಯಸನ ಮುಕ್ತ ಕೇಂದ್ರಗಳ ಹೆಚ್ಚಳ: ಸಾಮಾಜಿಕ ನ್ಯಾಯ ಇಲಾಖೆ, ಆರೋಗ್ಯ ಇಲಾಖೆ ಮತ್ತು ಕಾರಾಗೃಹ ಆಡಳಿತದ ಸಹಯೋಗದ ಪ್ರಯತ್ನಗಳ ಮೂಲಕ, ವ್ಯಸನ ಮುಕ್ತ ಕೇಂದ್ರಗಳ ಸಂಖ್ಯೆಯನ್ನು 1,751 ಕ್ಕೆ ಮೂರು ಪಟ್ಟು ಹೆಚ್ಚಳ ಮಾಡಲಾಗುತ್ತಿದೆ.

ಅಭಿಯಾನ: ಪರಾರಿಯಾದವರ ವಿರುದ್ಧ ಅಭಿಯಾನವೊಂದನ್ನು ಕೈಗೊಳ್ಳಲಾಗಿದ್ದು ಆರ್ಥಿಕ ಅಪರಾಧಗಳು, ಭಯೋತ್ಪಾದನೆ, ಮಾದಕ ವಸ್ತುಗಳ ಕಳ್ಳಸಾಗಣೆ ಮತ್ತು ಗುಂಪು ಘರ್ಷಣೆಗಳಲ್ಲಿ ಭಾಗಿಯಾದವರನ್ನು ಭಾರತದ ನ್ಯಾಯಾಲಯಗಳ ಮುಂದೆ ಹಾಜರುಪಡಿಸಲಾಗಿದೆ.

ಸಂಕಲ್ಪ: ಶೈಕ್ಷಣಿಕ ಆವರಣಗಳನ್ನು (ಕಲಿಕಾ ಸ್ಥಳಗಳನ್ನು) ಮಾದಕವಸ್ತು ಮುಕ್ತಗೊಳಿಸಲು ಶಿಕ್ಷಣ ಸಚಿವಾಲಯ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಹಾಗೂ ಶಿಕ್ಷಣ ಸಂಸ್ಥೆಗಳು ಪ್ರತಿಜ್ಞೆ ಮಾಡುತ್ತಿವೆ.

'ನಶಾ-ಮುಕ್ತ ಮಿತ್ರ': ಎನ್ ಸಿ ಸಿ, ಎನ್ ಎಸ್ ಎಸ್ ಮತ್ತು 'ಮೈ ಭಾರತ್' ವೇದಿಕೆಗಳ ಮೂಲಕ ಲಕ್ಷಾಂತರ 'ನಶಾ-ಮುಕ್ತ ಮಿತ್ರ'ರನ್ನು ಸಜ್ಜುಗೊಳಿಸಲಾಗುವುದು. (ಇವರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವರು, ಸಮಾಲೋಚನೆ, ಪುನರ್ವಸತಿ ಕಲ್ಪಿಸಲು ನೆರವಾಗುವರು)

ನವೀನ ಪರಿಕಲ್ಪನೆ: ಕೇಂದ್ರ ಸರ್ಕಾರದ 'ಕೆಳ ಹಂತದಿಂದ ಮೇಲಿನ ಹಂತ' ಮತ್ತು 'ಮೇಲಿನಿಂದ ಕೆಳ ಹಂತದ' ವಿಧಾನಗಳನ್ನು ಒಳಗೊಂಡ ಹೊಸ ತನಿಖಾ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ಆರ್ಥಿಕ ತನಿಖೆಗಳು ಮತ್ತು ಮಾದಕ ದ್ರವ್ಯಗಳು ಹಾಗೂ ಸೈಕೋಟ್ರೋಪಿಕ್ ಪದಾರ್ಥಗಳ ಕಳ್ಳಸಾಗಣೆ ತಡೆ ಕ್ರಮಗಳಿಗೆ ವಿಶೇಷ ಒತ್ತು ನೀಡಲಾಗುತ್ತಿದೆ.

ಪ್ಯಾರಿಸ್ ನಲ್ಲಿ ಸ್ವಾಮಿನಾರಾಯಣ ಮಂದಿರದ ಉದ್ಘಾಟನೆ

ಭಾರತದ ಪ್ರಾಚೀನ ಜ್ಞಾನ ಮತ್ತು ಫ್ರಾನ್ಸ್‌ನ ಆಧುನಿಕ ಎಂಜಿನಿಯರಿಂಗ್ ನ ಸಂಗಮ

ಫ್ರಾನ್ಸ್ ರಾಜಧಾನಿ ಪ್ಯಾರಿಸ್ ನಲ್ಲಿ ಸೆಪ್ಟೆಂಬರ್ 6 ರಂದು ಭವ್ಯವಾದ ಸ್ವಾಮಿನಾರಾಯಣ ಮಂದಿರ ಉದ್ಘಾಟಿಸಲಾಗಿದ್ದು, ಇದು ಭಾರತ ಮತ್ತು ಫ್ರಾನ್ಸ್ ನಡುವಿನ ಸಾಂಸ್ಕೃತಿಕ ಬಾಂಧವ್ಯದಲ್ಲಿ ಹೊಸ ಮೈಲಿಗಲ್ಲನ್ನು ಗುರುತಿಸಿದೆ. ಸನಾತನ ಸಂಪ್ರದಾಯದ ಪೂಜ್ಯ ಸಂತರು ಮತ್ತು ಗಣ್ಯ ವ್ಯಕ್ತಿಗಳ ಆಶೀರ್ವಾದದೊಂದಿಗೆ, ಈ ಉದ್ಘಾಟನಾ ಸಮಾರಂಭವು 'ವಸುಧೈವ ಕುಟುಂಬಕಮ್' (ಇಡೀ ವಿಶ್ವವೇ ಒಂದು ಕುಟುಂಬ) ಎಂಬ ಭಾವವನ್ನು ಸಾಕಾರಗೊಳಿಸುವ ವೇದಿಕೆಯಾಯಿತು. ದೇವಾಲಯದ ಉದ್ಘಾಟನೆಯ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಈ ದೇವಾಲಯವು 'ಮೇಡ್ ಇನ್ ಇಂಡಿಯಾ' (ಭಾರತದಲ್ಲಿ ತಯಾರಾದದ್ದು) ಮತ್ತು 'ಬಿಲ್ಟ್ ಇನ್ ಫ್ರಾನ್ಸ್' (ಫ್ರಾನ್ಸ್ ನಲ್ಲಿ ನಿರ್ಮಿಸಲ್ಪಟ್ಟದ್ದು) ಎಂದು ಉದ್ಗರಿಸಿದರು...

ವಿವಿಧ ದೇಶಗಳಲ್ಲಿ ದೇವಾಲಯಗಳ ಪ್ರತಿಷ್ಠಾಪನೆ ಸಂದರ್ಭದಲ್ಲಿ, ಭಾರತದ ಪ್ರಾಚೀನ ತತ್ವಜ್ಞಾನ ಮತ್ತು ಮಾನವೀಯ ಮೌಲ್ಯಗಳು ಅವುಗಳೊಂದಿಗೆ ಸಾಗುತ್ತವೆ. "ಸಮಾನಂ ಮನಃ ಸಹ ಚಿತ್ತಮೇಷಮ್" – ಸಮಾನ ಮನಸ್ಕರ ಆಲೋಚನೆಗಳು ಒಂದೇ ರೀತಿಯಾಗಿರಲಿವೆ ಎಂದು ಭಾರತೀಯ ಚಿಂತನೆ ಸಾರುತ್ತದೆ. ಅಂದರೆ, ನಮ್ಮ ಮನಸ್ಸು ಸಾಮರಸ್ಯದಿಂದಿರಲಿ ಮತ್ತು ನಮ್ಮ ಹೃದಯಗಳು ಒಂದಾಗಿರಲಿ. ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಫ್ರಾನ್ಸ್ ನಡುವಿನ ಬಾಂಧವ್ಯ ಹೊಸ ಎತ್ತರಕ್ಕೇರಿದೆ ಎಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಸ್ವಾಮಿನಾರಾಯಣ ದೇವಾಲಯಗಳು ಭಕ್ತಿಯ ಜೊತೆಗೆ ಸೇವೆಯ ಕೇಂದ್ರಗಳಾಗಿಯೂ ಸದಾ ಕಾರ್ಯನಿರ್ವಹಿಸಿದ್ದು, ಈ ದೇವಾಲಯವೂ ಸೇವಾ ಮನೋಭಾವದ ಪ್ರಮುಖ ಕೇಂದ್ರವಾಗಿ ರೂಪುಗೊಳ್ಳಲಿದೆ. ಇಲ್ಲಿಂದ ಹೊರಹೊಮ್ಮುವ ಭಾರತೀಯ ಸಂಸ್ಕೃತಿಯ ಸಂದೇಶದಿಂದ ಯುರೋಪಿನಾದ್ಯಂತದ ಜನರಿಗೆ ಅನುಕೂಲವಾಗಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಭವಿಷ್ಯದಲ್ಲಿ ಸಮಯ ದೊರೆತಾಗಲೆಲ್ಲಾ ತಾವು ಖಂಡಿತವಾಗಿಯೂ ಈ ದೇವಾಲಯಕ್ಕೆ ಭೇಟಿ ನೀಡಲು ಪ್ರಯತ್ನಿಸುವುದಾಗಿ ಅವರು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.



ಸಹಕಾರ ಮತ್ತು ಸಾಧ್ಯತೆಗಳ ಸಂಕೇತವಾಗಿ ಹೊರಹೊಮ್ಮಲಿರುವ ದೇವಾಲಯ

ಭಾರತ – ಫ್ರಾನ್ಸ್ ನಡುವಿನ ಜಂಟಿ ಉದ್ಯಮಗಳ ಸಾಧ್ಯತೆಗಳ ಕುರಿತು ಇತ್ತೀಚಿನ ದಿನಗಳಲ್ಲಿ ಆಗಾಗ್ಗೆ ಚರ್ಚೆಗಳು ನಡೆಯುತ್ತಿವೆ. ಸ್ವಾಮಿನಾರಾಯಣ ಮಂದಿರವು ಈ ಸಾಧ್ಯತೆಗೆ ಹೊಸ ಆಯಾಮವನ್ನು ನೀಡಿದೆ; ಇದು 'ಭಾರತದಲ್ಲಿ ತಯಾರಾದ' ಮತ್ತು 'ಫ್ರಾನ್ಸ್ ನಲ್ಲಿ ನಿರ್ಮಿಸಲಾದ' ಮಂದಿರವಾಗಿದೆ. ಇದರ ಅನೇಕ ಕಲ್ಲುಗಳನ್ನು ಭಾರತದಲ್ಲಿ ಕೆತ್ತಲಾಗಿದೆ. ಭಾರತದ ಪ್ರಾಚೀನ ಶಿಲ್ಪಕಲೆಯು ಆಧುನಿಕ ಫ್ರಾನ್ಸ್ ನ ಎಂಜಿನಿಯರಿಂಗ್ ನೊಂದಿಗೆ ಸಮ್ಮಿಳಿತಗೊಂಡು, ಪ್ಯಾರಿಸ್ ನಲ್ಲಿರುವ ಈ ಭವ್ಯ ದೇವಾಲಯಕ್ಕೆ ರೂಪ ನೀಡಿದೆ. ಈ ದೇವಾಲಯವು ಭಾರತ ಮತ್ತು ಫ್ರಾನ್ಸ್ ನಡುವಿನ ಸಹಕಾರ ಹಾಗೂ ಪರಸ್ಪರ ಹಂಚಿತ ಅವಕಾಶಗಳ ಸಂಕೇತವಾಗಿ ಹೊರಹೊಮ್ಮಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಆಶಯ ವ್ಯಕ್ತಪಡಿಸಿದ್ದಾರೆ.

ಭಾರತ ಮತ್ತು ಫ್ರಾನ್ಸ್ ನಿಂದ ಪಾಲುದಾರಿಕೆಗೆ ವಿಶೇಷ ಜಾಗತಿಕ ಕಾರ್ಯತಂತ್ರದ ರೂಪ

ಭಾರತ ಮತ್ತು ಫ್ರಾನ್ಸ್ ವಿಶೇಷ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ರೂಪಿಸುತ್ತಿವೆ. ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (ಎಐ) ಮತ್ತು ರಕ್ಷಣಾ ವಲಯದಿಂದ ಹಿಡಿದು ಬಾಹ್ಯಾಕಾಶ ಅನ್ವೇಷಣೆ ಹಾಗೂ ಹವಾಮಾನ ವೈಪರೀತ್ಯದ ಹಾನಿ ತಡೆಯುವ ಕ್ರಮಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಹೊಸ ಹುರುಪು ಮತ್ತು ನವಚೈತನ್ಯದೊಂದಿಗೆ ಉಭಯ ದೇಶಗಳು ಮುನ್ನಡೆಯುತ್ತಿವೆ. ಉಭಯ ರಾಷ್ಟ್ರಗಳು 2026ನೇ ವರ್ಷವನ್ನು 'ಭಾರತ-ಫ್ರಾನ್ಸ್ ನಾವೀನ್ಯತೆಯ ವರ್ಷ'ವನ್ನಾಗಿಯೂ ಆಚರಿಸುತ್ತಿವೆ. ಉಭಯ ದೇಶಗಳ ದೀರ್ಘಕಾಲದ ಸಾಂಸ್ಕೃತಿಕ ಮತ್ತು ರಾಜತಾಂತ್ರಿಕ ಸಂಬಂಧಗಳ ಭದ್ರ ಬುನಾದಿಯ ಮೇಲೆ ನಿಂತಿರುವ ಈ ಕಾರ್ಯತಂತ್ರದ ಪಾಲುದಾರಿಕೆಯು ವಿಶೇಷ ಮಹತ್ವ ಪಡೆದುಕೊಂಡಿದೆ. ಫ್ರಾನ್ಸ್ ನಲ್ಲಿ ಭಾರತೀಯ ಸೈನಿಕರ ತ್ಯಾಗಗಳು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಸಂಸ್ಕೃತವನ್ನು ಜನಪ್ರಿಯಗೊಳಿಸುವಲ್ಲಿ ಫ್ರೆಂಚ್ ವಿದ್ವಾಂಸರ ಪ್ರಮುಖ ಪಾತ್ರದ ಬಗ್ಗೆ ಭಾಷಾಶಾಸ್ತ್ರದಲ್ಲಿ ಆಸಕ್ತಿ ಹೊಂದಿರುವವರಿಗೆ ತಿಳಿದೇ ಇದೆ. ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಕುರಿತಾದ ರೋಮೈನ್ ರೋಲಾನ್ ಅವರ ಬರಹಗಳು ಆ ಎರಡು ಸಮಾಜಗಳನ್ನು ಪರಸ್ಪರ ಹತ್ತಿರ ತಂದಿವೆ. ಅಲ್ಲದೆ, ಪುದುಚೆರಿಯ ಅರಬಿಂದೋ ಆಶ್ರಮದವರೆಗೆ 'ದಿ ಮದರ್' ನ ಪರಿವರ್ತನಾತ್ಮಕ ಆಧ್ಯಾತ್ಮಿಕ ಪಯಣವು ಭಾರತ ಮತ್ತು ಫ್ರಾನ್ಸ್ ಎರಡೂ ರಾಷ್ಟ್ರಗಳ ಅಸಂಖ್ಯಾತ ಸಾಧಕರನ್ನು ಪ್ರೇರೇಪಿಸಿತು.

ಎರಡೂ ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ಬಾಂಧವ್ಯದಲ್ಲಿ ಒಂದು ಹೊಸ ಅಧ್ಯಾಯ

ದಶಕಗಳ ಹಿಂದೆ, ಶ್ರೀಲ ಪ್ರಭುಪಾದ ಸ್ವಾಮಿಗಳು ಫ್ರಾನ್ಸ್ ಗೆ ಭೇಟಿ ನೀಡಿದ್ದರು. ಇಸ್ಕಾನ್ ಮೂಲಕ ಅವರು ಭಾರತ ಮತ್ತು ಫ್ರಾನ್ಸ್ ನಡುವೆ ಆಧ್ಯಾತ್ಮಿಕ ಸಂಪರ್ಕದ ಹೊಸ ಅಧ್ಯಾಯವೊಂದಕ್ಕೆ ನಾಂದಿ ಹಾಡಿದ್ದರು. ಪ್ರಸ್ತುತ, ಯೋಗಾಭ್ಯಾಸವು ಎರಡು ರಾಷ್ಟ್ರಗಳ ಜನರ ನಡುವಿನ ಬಾಂಧವ್ಯವನ್ನು ಪೋಷಿಸುವ ಮಾಧ್ಯಮವೂ ಆಗಿದೆ. 'ಅಂತಾರಾಷ್ಟ್ರೀಯ ಯೋಗ ದಿನ'ದಂದು ಐಫಿಲ್ ಟವರ್ ನಿಂದ ಕಂಡುಬಂದ ದೃಶ್ಯಗಳು ಫ್ರಾನ್ಸ್ ನಲ್ಲಿ ಯೋಗದ ಜನಪ್ರಿಯತೆಗೆ ಸಾಕ್ಷಿಯಾಗಿವೆ. ಈಗ ಈ ಭವ್ಯವಾದ ಬೋಚಾಸನವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ದೇವಾಲಯದೊಂದಿಗೆ, ಉಭಯ ದೇಶಗಳ ನಡುವಿನ ಸಾಂಸ್ಕೃತಿಕ ಬಾಂಧವ್ಯಕ್ಕೆ ಹೊಸ ಅಧ್ಯಾಯವೊಂದು ಸೇರ್ಪಡೆಯಾಗುತ್ತಿದೆ.

"ಈ ದೇವಾಲಯವು ಫ್ರಾನ್ಸ್ ನ ವೈವಿಧ್ಯತೆಯನ್ನು ಶ್ರೀಮಂತಗೊಳಿಸುವುದಲ್ಲದೆ, ಭಾರತ ಮತ್ತು ಫ್ರಾನ್ಸ್ ನಡುವಿನ ಸಾಂಸ್ಕೃತಿಕ ಬಂಧಕ್ಕೂ ಹೊಸ ಚೈತನ್ಯವನ್ನು ನೀಡಲಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ





ರಾಷ್ಟ್ರಧ್ವಜದ ಘನತೆಯನ್ನು ಎತ್ತಿಹಿಡಿದ ಹುತಾತ್ಮ

ಬ್ರಿಟಿಷರ ವಿರುದ್ಧದ ಹೋರಾಟದ ಸಂದರ್ಭದಲ್ಲಿ ರಾಷ್ಟ್ರಧ್ವಜ ಬೀಳದಂತೆ ದೃಢವಾಗಿ ಹಿಡಿದುಕೊಂಡು ತಮ್ಮ ಪ್ರಾಣವನ್ನೇ ಅರ್ಪಿಸಿದ ಸ್ವಾತಂತ್ರ್ಯ ಹೋರಾಟಗಾರ. ಈ ಧೈರ್ಯಶಾಲಿ ಸ್ವಾತಂತ್ರ್ಯ ಹೋರಾಟಗಾರ 27 ವರ್ಷದ ತಿರುಪ್ಪೂರ್ ಕುಮಾರನ್. ಆ ಸಮಯದಲ್ಲಿ, ಬ್ರಿಟಿಷ್ ಸರ್ಕಾರವು ಭಾರತದ ಧ್ವಜವನ್ನು ನಿಷೇಧಿಸಿತ್ತು. ಮಾತೃಭೂಮಿಗಾಗಿ ಅವರ ನಿಸ್ವಾರ್ಥ ತ್ಯಾಗವು ದೇಶವಾಸಿಗಳಲ್ಲಿ ಏಕತೆ, ಗೌರವ ಮತ್ತು ಸ್ಥೈರ್ಯದ ಭಾವ ಜಾಗೃತಗೊಳಿಸಲು ಒಂದು ಅದ್ಭುತ ಕರೆಯಾಗಿತ್ತು. ಇಂದಿಗೂ ಸಹ, ತಿರುಪ್ಪೂರ್ ಕುಮರನ್ ಅವರ ಧೈರ್ಯ ನಾಗರಿಕರಿಗೆ ಪ್ರೇರಣೆ ನೀಡುತ್ತಿದೆ.

ಜನನ: ಅಕ್ಟೋಬರ್ 4, 1904 ■ ಮರಣ: ಜನವರಿ 11, 1932

ಸ್ವಾತಂತ್ರ್ಯ ಹೋರಾಟಗಾರ ಮತ್ತು ಕ್ರಾಂತಿಕಾರಿ ತಿರುಪ್ಪೂರ್ ಕುಮಾರನ್ ಅವರು 1904ರ ಅಕ್ಟೋಬರ್ 4 ರಂದು ಇಂದಿನ ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿರುವ ಚೆನ್ನಿಮಲೈನಲ್ಲಿ ಜನಿಸಿದರು. ದೇಶಾದ್ಯಂತ ಸ್ವಾತಂತ್ರ್ಯ ಚಳವಳಿ ಚುರುಕು ಪಡೆಯುತ್ತಿದ್ದಂತೆ, ಕುಮಾರನ್ ಅದರಿಂದ ಅಗಾಧವಾಗಿ ಪ್ರಭಾವಿತರಾದರು. ಮಹಾತ್ಮ ಗಾಂಧಿಯವರ ತತ್ವಾದರ್ಶಗಳಿಂದ ಪ್ರೇರಿತರಾಗಿ, ಅವರು ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಗಾಂಧೀಜಿಯವರು 1932 ರಲ್ಲಿ, ಬಾಂಬೆಯಲ್ಲಿ ಪ್ರತಿಭಟನೆಯ ನೇತೃತ್ವ ವಹಿಸಿದಾಗ, ಬ್ರಿಟಿಷ್ ಅಧಿಕಾರಿಗಳು ಅವರನ್ನು ಬಂಧಿಸಲು ನಿರ್ಧರಿಸಿದರು. ಅವರ ಬಂಧನವು ದೇಶಾದ್ಯಂತ ತೀವ್ರ ಪ್ರತಿಭಟನೆಗೆ ಕಾರಣವಾಯಿತು. ಪ್ರತಿಭಟನಾಕಾರರು ಆ ಸಮಯದಲ್ಲಿ ನಿಷೇಧಿಸಲಾಗಿದ್ದ ರಾಷ್ಟ್ರಧ್ವಜವನ್ನು ಹಿಡಿಯುತ್ತಾ, ಅದನ್ನು ಗೌರವ ಮತ್ತು ಧಿಕ್ಕಾರ ಎರಡರ ಸಂಕೇತವಾಗಿಯೂ ಬಳಸಿಕೊಂಡರು. ತಿರುಪ್ಪೂರ್ ಕುಮಾರನ್ ಧ್ವಜ ಹಿಡಿದಿದ್ದ ಪ್ರತಿಭಟನಾಕಾರರ ಪೈಕಿ ಇದ್ದರು. ಪ್ರತಿಭಟನಾಕಾರರ ವಿರುದ್ಧ ಬ್ರಿಟಿಷ್ ಪೊಲೀಸರು ಲಾಠಿ ಚಾರ್ಜ್ ಮಾಡಿದಾಗಲೂ ಕುಮಾರನ್ ಹಿಂದೆ ಸರಿಯಲಿಲ್ಲ. ಕುಮಾರನ್ ಸೇರಿದಂತೆ ಪ್ರತಿಭಟನಾಕಾರರನ್ನು ಪೊಲೀಸರು ಕ್ರೂರವಾಗಿ ಥಳಿಸಿದರು. ಕುಮಾರನ್, ತಾವು ಕೆಳಗೆ ಬಿದ್ದರೂ, ಧ್ವಜ ನೆಲಕ್ಕೆ ತಾಗದಂತೆ ನೋಡಿಕೊಂಡರು. 1932ರ ಜನವರಿ 11 ರಂದು, ಅವರು ತೀವ್ರವಾದ ಗಾಯಗಳಿಂದ ಕೊನೆಯುಸಿರೆಳೆದರು.

'ಕೋಡಿ ಕಾತ್ತ ಕುಮಾರನ್' (ರಾಷ್ಟ್ರ ಧ್ವಜವನ್ನು ರಕ್ಷಿಸಿದ ಕುಮಾರನ್) ಎಂದು ಕರೆಯಲ್ಪಡುವ ತಿರುಪ್ಪೂರ ಕುಮಾರನ್ ಅವರ ಪರಂಪರೆಯು ತಾಯಿ ಭಾರತಿಗೆ ಅಚಲವಾದ ಭಕ್ತಿ ಮತ್ತು ಅನ್ಯಾಯದ ವಿರುದ್ಧದ ದೃಢಸಂಕಲ್ಪದ ಸಂಗಮವನ್ನು ಪ್ರತಿನಿಧಿಸುತ್ತದೆ. ಅನನ್ಯ ಸ್ಥೈರ್ಯ ಮತ್ತು ಮಾತೃಭೂಮಿಯ ಮೇಲಿನ ಅಮರ ಪ್ರೇಮದೊಂದಿಗೆ ಸ್ವಾತಂತ್ರ್ಯ ಗಳಿಸಲು ಸಾಧ್ಯ ಎಂಬುದನ್ನು ಜೀವದ ಕೊನೆಯ ಕ್ಷಣಗಳಲ್ಲಿಯೂ ರಾಷ್ಟ್ರ ಧ್ವಜವನ್ನು ದೃಢವಾಗಿ ಹಿಡಿದಿದ್ದ ಅವರ ಅಚಲ ಭಾವ ನಮಗೆ ನೆನಪಿಸುತ್ತದೆ. ರಾಷ್ಟ್ರಧ್ವಜವನ್ನು ರಕ್ಷಿಸಲು, ಕಠಿಣ ಪರಿಶ್ರಮದಿಂದ ಗಳಿಸಿದ ಸ್ವಾತಂತ್ರ್ಯವನ್ನು ಗೌರವಿಸಲು ಹಾಗೂ ಸಂಪೂರ್ಣ ಸಮರ್ಪಣಾಭಾವ ಮತ್ತು ತ್ಯಾಗಮನೋಭಾವದಿಂದ ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಅವರ ವೀರಗಾಥೆಯ ಸ್ಮರಣೆಯು ಪ್ರತಿ ಪೀಳಿಗೆಗೂ ಪ್ರೇರಣೆ ನೀಡುತ್ತದೆ.

ಉಪರಾಷ್ಟ್ರಪತಿಯಾಗಿ ಸಿ.ಪಿ. ರಾಧಾಕೃಷ್ಣನ್ ಅಧಿಕಾರ ವಹಿಸಿಕೊಂಡ ನಂತರ ತಮಿಳುನಾಡಿಗೆ ನೀಡಿದ ತಮ್ಮ ಮೊದಲ ಭೇಟಿಯಲ್ಲಿ ಕೊಯಮತ್ತೂರಿಗೆ ಆಗಮಿಸಿ, ತಿರುಪ್ಪೂರ್ ಕುಮಾರನ್ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಹಾಗೆಯೇ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2025ರ ಅಕ್ಟೋಬರ್ 4ರಂದು ಭಾರತದ ಸ್ವಾತಂತ್ರ್ಯ ಹೋರಾಟದ ಮಹಾನ್ ವ್ಯಕ್ತಿ ತಿರುಪ್ಪೂರ್ ಕುಮಾರನ್ ಅವರ ಪುಣ್ಯಸ್ಮರಣೆಯ ದಿನದಂದು ಅವರನ್ನು ನೆನೆಪಿಸಿಕೊಂಡು, ಗೌರವ ನಮನ ಸಲ್ಲಿಸಿದರು. ಈ ದಿನದಂದು, ಭಾರತ ಮಾತೆಯ ಮಹಾನ್ ಪುತ್ರ ತಿರುಪ್ಪೂರ್ ಕುಮಾರನ್ ಅವರನ್ನು ನಾವು ಸ್ಮರಿಸುತ್ತೇವೆ ಮತ್ತು ಅವರಿಗೆ ಶಿರಬಾಗುತ್ತೇವೆ ಎಂದು ಅವರು ಹೇಳಿದರು. ಮಹಾನ್ ರಾಜ್ಯ ತಮಿಳುನಾಡಿನವರಾದ ಅವರು, ಭಾರತದ ಸ್ವಾತಂತ್ರ್ಯಕ್ಕಾಗಿ ಮತ್ತು ರಾಷ್ಟ್ರೀಯತೆಯ ಭಾವವನ್ನು ಜಾಗೃತಗೊಳಿಸಲು ತಮ್ಮ ಜೀವನ ಮುಡಿಪಾಗಿಟ್ಟಿದ್ದರು. ತಿರುಪ್ಪೂರ್ ಕುಮಾರನ್ ಅವರು ಅಪ್ರತಿಮ ಸ್ಥೈರ್ಯ ಮತ್ತು ನಿಸ್ವಾರ್ಥ ತ್ಯಾಗದೊಂದಿಗೆ ರಾಷ್ಟ್ರಧ್ವಜವನ್ನು ಎತ್ತಿ ಹಿಡಿದ ಸ್ಥಿತಿಯಲ್ಲೇ ಹುತಾತ್ಮರಾದರು. ನಮ್ಮೆಲ್ಲರ ಸಾಮೂಹಿಕ ಸ್ಮೃತಿಯಲ್ಲಿ ಅವರ ತ್ಯಾಗವು ಅಚ್ಚಳಿಯದೆ ಉಳಿದಿದ್ದು ವಸಾಹತುಶಾಹಿ ಆಳ್ವಿಕೆಯಿಂದ ನಮಗೆ ಬಿಡುಗಡೆ ತಂದುಕೊಟ್ಟ ಅಸಂಖ್ಯಾತ ಜನರು ಅನುಭವಿಸಿದ ಹೋರಾಟಗಳು ಮತ್ತು ಕಷ್ಟಗಳನ್ನು ನೆನಪಿಸಿದೆ. ರಾಷ್ಟ್ರದ ಅಭಿವೃದ್ಧಿ ಮತ್ತು ಏಕತೆಯತ್ತ ಶ್ರಮಿಸಲು ಅವರ ಕೊಡುಗೆಯು ನಮ್ಮೆಲ್ಲರಿಗೂ ಸ್ಫೂರ್ತಿ ನೀಡುತ್ತಿರಲಿ. ●



PMO India
@PMOIndia

आज विश्व एक बड़े उथल-पुथल के दौर से गुजर रहा है।

दुनिया के कई हिस्सों में संघर्ष की स्थिति बनी हुई है।

Food, fuel या supply chains, हर क्षेत्र में अनिश्चितता का प्रभाव पड़ रहा है।

इस चुनौतीपूर्ण माहौल में भी भारत की economy ने अपनी गति बनाए रखी है।


पिछले quarter में हमने 7.8 प्रतिशत की growth दर्ज की है।

आज भारत की growth story दुनिया के लिए विश्वास और नए अवसरों का स्रोत बन रही है: PM @narendramodi



Rajnath Singh
@rajnathsingh

आत्मनिर्भरता केवल हथियार और उपकरण बनाने तक सीमित नहीं है। यह हमारे चरित्र, सोच और आत्मविश्वास का हिस्सा होनी चाहिए। जिस देश के पास अपनी टेक्नोलॉजी होती है, उसके पास अपना भविष्य तय करने की ताकत भी होती है।



Amit Shah
@AmitShah

लोकतंत्र में परफॉर्मेंस और डिलीवरी पर मिला जनादेश ही सबसे बड़ा प्रमाणपत्र होता है, और जनता ने 25 वर्षों तक मोदी जी को यह जनादेश दिया है।
#SevaSankalpAbhiyan



Nitin Gadkari
@nitin_gadkari

A moment to shape the future of the Global South!

🇮🇳India is all set to host the XVIII BRICS Summit —bringing together 11 nations, 49% of the world's population and 40% of global GDP.

#BRICS2026 #BRICSIndia2026



Shivraj Singh Chouhan
@ChouhanShivraj

यशस्वी प्रधानमंत्री श्री @narendramodi जी के नेतृत्व में हमारी सरकार किसान के हित में लगातार काम कर रही है। किसान दिन-रात मेहनत करता है, ऐसे में अगर उसे नकली या घटिया बीज और खाद मिल जाए तो उसकी पूरी मेहनत पर पानी फिर जाता है।

इसीलिए नकली और अमानक बीज के खिलाफ कड़ा कानून लाने की दिशा में हम आगे बढ़ रहे हैं। 10 सितंबर को देशभर के किसान संगठनों के प्रतिनिधियों के साथ बैठकर प्रस्तावित सीड एक्ट पर उनकी बात सुनेंगे और उनके सुझाव लेंगे।

किसान को अच्छी गुणवत्ता का बीज मिले और नकली बीज बेचकर उसे नुकसान पहुँचाने वालों पर सख्त कार्रवाई हो; हमारा यही संकल्प है।



Kiren Rijiju
@KirenRijiju

Hello India! भारत से जुड़ रही दुनिया... !

उज़्बेकिस्तान से दक्षिण अफ्रीका और बेलारूस से वियतनाम व युगांडा तक, हर आवाज़ में भारत के प्रति अपनापन और सम्मान देखने को मिला। नई दिल्ली में BRICS के मंच पर विभिन्न देशों के साथ 'वसुधैव कुटुम्बकम्' की भावना की सुंदर झलक दिखाई दी।

Modi presses Putin for Ukraine peace, safety of Indian seafarers in Black Sea

BRICS Summit Delhi wants more Russian defence equipment to be produced locally

UJWAL JALALI & AJAY BANERJEE

NEW DELHI, SEPTEMBER 11

Prime Minister Narendra Modi on Friday told Russian President Vladimir Putin that India was ready to assist in peace efforts, reiterating that dialogue and diplomacy were the way forward to resolve conflicts, as the two leaders discussed the wars in West Asia and the Black Sea region, including concerns over maritime trade and the safety of Indian seafarers.

The message came during Modi's bilateral meeting with Putin on the sidelines of the 18th BRICS Summit in New Delhi, their second meeting this year. The two leaders had last met in Bishkek on August 31 on the margins of the Shanghai Cooperation Organisation (SCO) Summit.

Putin also invited Modi to Russia for the 24th India-Rus-



Prime Minister Narendra Modi, Russian President Vladimir Putin, Iranian President Masoud Pezeshkian and South African President Cyril Ramaphosa at the BRICS Business Forum in New Delhi. AN

"Global trade can only progress if sea lanes are secure, supply routes remain open and seafarers are safe. Therefore, India is a staunch supporter of freedom of navigation and the safety of seafarers. Narendra Modi, PRIME MINISTER

PM GIFTS RUSSIAN TRANSLATION OF 'THIRUKKURAL'

PM SETS 3 TARGETS

1. Removal of top 10 trade barriers among BRICS countries
2. Helping 100 BRICS startups enter other member markets
3. Creation of 1,000 business partnerships among nations

DOMINANT GROUPING

21 nations part of BRICS, was founded by five members

50% of global population covered by the grouping members

40% of global GDP (25% of the world trade) part of the bloc

TOP GUNS AT MEET

Presidents Vladimir Putin (Russia), Xi Jinping (China), Masoud Pezeshkian (Iran), Cyril Ramaphosa (South Africa), Abdel Fattah El-Sisi (Egypt), Prabowo Subianto (Indonesia); and PMs Abiy Ahmed Ali (Ethiopia) and Anwar Ibrahim (Malaysia)

Cabinet clears ₹20.8k-cr rail expansion in 9 states

Sanjeev K Jha
letters@hindustantimes.com

NEW DELHI: The Union Cabinet on Wednesday approved eight multi-tracking railway projects worth ₹20,884 crore across nine states, adding nearly 1,200 km to the Indian railways network and aiming to ease congestion on some of the country's busiest passenger and freight corridors.

The projects, approved by the Cabinet Committee on Economic Affairs (CCEA) chaired by Prime Minister Narendra Modi, will cover 31 districts in West Bengal, Jharkhand, Odisha, Madhya Pradesh, Chhattisgarh, Tamil Nadu, Andhra Pradesh, Karnataka and Telangana. Together, they will improve rail connectivity to nearly 6,900 villages with a combined population of about 10.8 million.

Union railways and information and broadcasting minister Ashwini Vaishnaw said the expansion comes as the railways seek to increase line capacity on routes carrying large volumes of coal, cement, iron and steel, containers, automobiles, foodgrains, petroleum products and fertilisers. "It is much on line of Golden Quadrilateral Project during the regime of former prime minister Atal Bihari Vajpayee. The government estimates the projects will create additional freight-handling capacity of around 74 million tonnes per annum (MTPA)," he said.



between Bilaspur (Uslapur) and Pendra Road. The second set comprises five projects covering about 540 km at an estimated cost of ₹10,021 crore. These include the third and fourth lines between Arakkonam and Renigunta (77 km), the third and fourth lines between Whitefield and Bangarapet (47 km), doubling of the Hosur-Omalur section (147 km), doubling of the Salem-Karur-Dindigul section (159 km), and multi-tracking of the Secunderabad (Ghatkesar)-Kazipet section (110 km).

"All eight projects are scheduled for completion by 2029-30. The additional tracks would improve operational efficiency, reduce bottlenecks and enhance the reliability of train services by

The economic significance of the projects is particularly pronounced in mineral- and industrial-intensive regions. The Kharagpur-Jharsuguda, Katni-Pendra Road and Bilaspur-Pendra Road corridors are important for the movement of coal, cement, iron and steel, while the southern projects will strengthen routes carrying industrial goods, automobiles, containers and agricultural commodities.

"The additional capacity is aimed at lowering logistics costs by shifting more freight to rail, while reducing dependence on road transportation...." Vaishnaw added.

Prime Minister Narendra Modi hailed the Cabinet's decision, say-



Iran prez breaks ice with UAE in shadow of war

JAYANTH JACOB @ New Delhi

IRANIAN President Masoud Pezeshkian and Abu Dhabi Crown Prince Sheikh Khaled bin Mohamed bin Zayed Al Nahyan met on the sidelines of the BRICS summit in New Delhi on Saturday, opening the highest-level channel of contact between Tehran and the UAE since the war.

The meeting came as the conflict continued to reverberate across the Gulf, with Saudi Arabia halting operations on its key East-West oil pipeline after a drone strike on Friday. The shutdown has fuelled fresh concerns over the security of regional energy infrastructure and the prospect of further shocks to global oil supplies.

The talks, confirmed by the Iranian embassy in New Delhi, come after a sharp deterioration in ties between Tehran and Abu Dhabi. Relations had already been strained since late February, when US-Israeli attacks on Iran triggered retaliatory strikes by Tehran against American allies and interests.

Space station by '35, Indian on moon by '40: PM

RAJESH KUMAR THAKUR @ New Delhi

PM Narendra Modi on Thursday called for cooperation in space, saying, "The promise of space is infinite. Our responsibility is collective."

In his virtual address to the International Space Summit organised in Paris, Modi said India's approach to space was rooted in the ethos of Vasudhaiva Kutumbakam, meaning "One Earth, One Family, One Future". He said India would establish an indigenous space station by 2035 and send an astronaut to the Moon by 2040.

"India's space journey reflects this philosophy," Modi said, highlighting ISRO's reputation for excellence and cost-effective missions. He said its capabilities serve farmers and fishermen, weather forecasting, disaster management and navigation.

More than 430 satellites from 34 countries have travelled into space aboard Indian rockets, Modi said. "ISRO's technologies and partnerships serve not only India, but the world," he added. Modi said India supported "a safe, secure, peaceful and sustainable space domain" based on international law, dialogue and multilateral cooperation. "Scientific data must serve the common good, with openness and integrity," he said. Calling for cooperation over confrontation, sustainability over gain and inclusion over exclusion, Modi said space was becoming more crowded, technologies more powerful and actors more numerous.

He credited generations of Indian scientists and engineers for ISRO's reputation and said their work had given India "a place of pride among space faring nations".



PM Modi addresses the International Space Summit being held in Paris | PTI

Calls on world to join India in space as co-travellers

Referring to Chandrayaan-3, Modi said India became the first nation to land near the lunar South Pole. He also cited Aditya-L1 and an Indian's visit to the International Space Station. Modi said India's private space industry was expanding and invited the world to be "co-travellers".

'PROTECTIONIST STEPS HURT GLOBAL PROGRESS'

PM Flags Tech, Critical Minerals Weaponisation

Calls for inclusivity in tech adoption, resilience to tackle supply chain issues

Dipanjan Roy Chaudhury

New Delhi: Prime Minister Narendra Modi said the use of technology and critical minerals to gain an advantage would act as a drag on global advancement, underlining that a rising cooperative tide would lift all boats.

"The weaponisation of technology and critical minerals can hinder our shared progress. Therefore, we have emphasised inclusivity in the adoption of technology," Modi said at the BRICS session on Resilience, Innovation, Cooperation and Sustainability in New Delhi on Sunday.

President Xi Jinping's presence in the room during Modi's address was significant, given that India and several other countries have been at the receiving end of China putting the

Global South countries' confidence in BRICS has grown, because within BRICS, their voices are heard. Solutions are developed not for them, but together with them

issues faced by India due to China's policies with President Xi.

The Prime Minister brought up the disruption of supply chains due to global tensions in his address on Sunday. "Today, the number of conflicts and tensions in the world is continuously increasing, and this is having an increasingly negative and far-reaching impact on the lives of ordinary people," he said. "Pandemics, climate disasters, and supply-chain disruptions


ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ

ಜನ್ಮದಿನವಾದ ಅಕ್ಟೋಬರ್ 15 ರಂದು ಕೃತಜ್ಞಪೂರ್ವಕ ರಾಷ್ಟ್ರದಿಂದ ಗೌರವ ನಮನ

ಕಲಾಂ ಅವರ ನುಡಿಗಳು ಮತ್ತು ಆಲೋಚನೆಗಳಲ್ಲಿ ಭವಿಷ್ಯದ ಭಾರತದ ಮುನ್ನೋಟದ ಪ್ರತಿಬಿಂಬ

21ನೇ ಶತಮಾನದಲ್ಲಿ, ಇಂಧನ ಮತ್ತು ನೀರಿನ ಹೆಚ್ಚುತ್ತಿರುವ ಬೇಡಿಕೆಯು ನಮ್ಮ ಜೀವನದ ಮೇಲೆ ಪರಿಣಾಮ ಬೀರುವ ಪ್ರಮುಖ ಸವಾಲುಗಳಲ್ಲೊಂದಾಗಿದೆ.

ನದಿ ಜೋಡಣೆ ಯೋಜನೆಯನ್ನು ಅತ್ಯಂತ ಗಂಭೀರವಾಗಿ ಮತ್ತು ತ್ವರಿತಗತಿಯಿಂದ ಜಾರಿಗೆ ತರುವ ಸಮಯ ಬಂದಿದೆ.



ಇಂಧನ ಸ್ವಾವಲಂಬನೆಯು ದೇಶದ ಅತ್ಯಂತ ಪ್ರಧಾನ ಮತ್ತು ಪ್ರಥಮ ಆದ್ಯತೆಯಾಗಬೇಕು.

ಸಮೃದ್ಧಿ ಮತ್ತು ಸಂತೋಷದಿಂದ ಕೂಡಿರುವ ಜೊತೆಗೆ ಸಂಪೂರ್ಣವಾಗಿ ಸುಭದ್ರವಾಗಿರುವ ರಾಷ್ಟ್ರ ನಿರ್ಮಾಣ ನಮ್ಮ ಗುರಿಯಾಗಬೇಕು.

ಯಾವುದೇ ಬಾಹ್ಯ ಆಕ್ರಮಣದ ವಿರುದ್ಧ ರಾಷ್ಟ್ರ ಸದಾ ಸುರಕ್ಷಿತವಾಗಿರಬೇಕು. ಭವಿಷ್ಯದಲ್ಲಿ ಬಾಹ್ಯಾಕಾಶದಿಂದ ಉದ್ಭವಿಸಬಹುದಾದ ಯಾವುದೇ ಪ್ರತಿಕೂಲ ಚಟುವಟಿಕೆಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನೂ ದೇಶ ಹೊಂದಿರಬೇಕು.

ನಾಳೆಯ ಭಾರತಕ್ಕಾಗಿ ನಾವು ಹೇಗೆ ಸಿದ್ಧರಾಗಬೇಕು? ಈ ಸವಾಲುಗಳನ್ನು ಎದುರಿಸಲು ಭಾರತ ಸನ್ನದ್ಧವಾಗಿರಬೇಕು. ಭಾರತದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ನುಡಿಗಳು ಮತ್ತು ಆಲೋಚನೆಗಳನ್ನು ಮೇಲೆ ಉಲ್ಲೇಖಿಸಲಾಗಿದೆ. 'ಭಾರತವೇ ಮೊದಲು' ಎಂಬ ತತ್ವವನ್ನು ಪ್ರತಿಪಾದಿಸಿದ ಅವರು ವಿಜ್ಞಾನ, ರಕ್ಷಣೆ ಮತ್ತು ತಾಂತ್ರಿಕ ನಾವೀನ್ಯತೆಯ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ನೀಡಿದರು. ದೇಶವು ಪ್ರಸ್ತುತ ಈ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವತ್ತ ವ್ಯಾಪಕವಾಗಿ ಕೆಲಸ ಮಾಡುತ್ತಿದೆ. "ಇಂಡಿಯಾ 2020: ಎ ವಿಷನ್ ಫಾರ್ ದಿ ನ್ಯೂ ಮಿಲೇನಿಯಮ್" (ಭಾರತ 2020: ಹೊಸ ಸಹಸ್ರಮಾನಕ್ಕಾಗಿ ಮುನ್ನೋಟ) ಎಂಬ ಅವರ ಪುಸ್ತಕದಲ್ಲಿ ಭಾರತದ ಭವಿಷ್ಯಕ್ಕಾಗಿ ಅವರು ಪ್ರಸ್ತುತಪಡಿಸಿರುವ ಮುನ್ನೋಟದ ಮಾರ್ಗದರ್ಶನದೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವು ಈಗ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಪಥದಲ್ಲಿ ಮುನ್ನಡೆಯುತ್ತಿದೆ.



“ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮದಿನದಂದು ಅವರಿಗೆ ಹೃತ್ಪೂರ್ವಕ ನಮನಗಳು. ದೇಶವು ದೊಡ್ಡ ಕನಸು ಕಾಣುವಂತೆ ಪ್ರೇರೇಪಿಸಿದ ದೂರದೃಷ್ಟಿಯ ನಾಯಕರಾಗಿ ಅವರನ್ನು ಸ್ಮರಿಸಲಾಗುತ್ತದೆ. ಯಶಸ್ಸಿಗೆ ವಿನಮ್ರತೆ ಮತ್ತು ಅವಿರತ ಪರಿಶ್ರಮ ಅತ್ಯಗತ್ಯ ಎಂಬುದನ್ನು ಅವರ ಜೀವನ ನಮಗೆ ನೆನಪಿಸುತ್ತದೆ. ಬಲಿಷ್ಠ, ಸ್ವಾವಲಂಬಿ ಮತ್ತು ಸಹಾನುಭೂತಿಯ ಅವರ ಕನಸಿನ ಭಾರತವನ್ನುರೂಪಿಸುವ ಕಾರ್ಯವನ್ನು ನಾವು ಮುಂದುವರಿಸೋಣ. *- ನರೇಂದ್ರ ಮೋದಿ, ಪ್ರಧಾನಮಂತ್ರಿ*

NEW INDIA SAMACHAR
FORTNIGHTLY

RNI NO.: DELENG/2020/78811 OCTOBER 01-15, 2026
RNI Registered No DELENG/2020/78811 (Publishing Date: SEPTEMBER 22, 2026 Pages: 64)

EDITOR IN CHIEF
Dhirendra Ojha
Principal Director General
Press Information Bureau, New Delhi

PUBLISHER:
Kanchan Prasad
Director General, on behalf of
Central Bureau Of Communication

PUBLISHED FROM:
Room No–278, Central Bureau Of Communication, 2nd Floor, Soochna Bhawan, New Delhi -110003